ಕೋದಂಡರಾಮ ಪ್ರೆಸ್

ಮೈಸೂರು

ಪಂಪರಾಮಾಯಣಂ

ಎಂಬ

ರಾಮಚಂದ್ರಚರಿತ ಪುರಾಣಂ

ಅಭಿನವ ಪಂಪನೆಂದು ಹೆಸರುಗೊಂಡ

ನಾಗಚಂದ್ರ ಕವಿಯಿಂದ

ವಿರಚಿತವಾದ

ನಾಲ್ಕನೆಯ ಆಶ್ವಾಸದ ಟೀಕೆಯಂ

ಆಸ್ಥಾನ ಮಹಾವಿದ್ವಾನ್

ಪಿ. ಆರ್. ಕರಿಬಸವಶಾಸ್ತ್ರಿಗಳಿಂದ

ರಚಿಸಲ್ಪಟ್ಟು

ಬಿ. ಎ. ಕೋದಂಡರಾಮಶೆಟ್ಟರಿಂದ

ಪ್ರಕಟಿಸಲ್ಪಟ್ಟಿರುತ್ತೆ

ಕೋದಂಡರಾಮ ಪ್ರೆಸ್
ಮೈಸೂರು
೧೯೨೮

ಈ ಪಂಪರಾಮಾಯಣದ ನಾಲ್ಕನೇ ಆಶ್ವಾಸವನ್ನು ಮುದ್ರಿಸಲು ವಿದ್ಯಾ ಇಲಾಖೆಯ ಡೈರೆಕ್ಟರ್ **L. Dis. 5540** ನಂಬರ್ ಆರ್ಡರ್ ಪಡೆದು ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಟೀಕಾವನ್ನು ರಚಿಸಿ ಅದರ ಹಕ್ಕನ್ನೂ ಬಿ. ಎ. ಕೋದಂಡ ರಾಮಶೆಟ್ಟರು ಪಡೆದು ಸ್ವಕೀಯವಾದ ಕೋದಂಡರಾಮ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

ಮು ನ್ನು ಡಿ.

ಹಳೆಗನ್ನಡ ಪ್ರೌಢಗ್ರಂಥಗಳಲ್ಲಿ ಜೈನಕಾವ್ಯಗಳು ಪ್ರಾಶಸ್ತ್ಯವನ್ನು ಪಡೆದಿವೆ. ಪಂಪರಾಮಾಯಣವು ಅಂತಹ ಉದ್ದಾಮ ಜೈನಕಾವ್ಯಗಳಲ್ಲಿ ಒಂದಾಗಿದೆ. ಆದುದರಿಂದ ವಿಶ್ವವಿದ್ಯಾಲಯದವರು ಇಂಟರ್‌ಮೀಡಿಯೇಟ್ ತರಗತಿಯವರು ಓದುವುದಕ್ಕೆ ಈ ವರ್ಷ ಇದನ್ನು ಪಠ್ಯಪುಸ್ತಕವಾಗಿ ನಿಯಮಿಸಿರುವುದು ಸರಿಯಷ್ಟೆ. ಈ ಗ್ರಂಥವನ್ನು ಸಾಹಿತ್ಯ ಪರಿಷತ್ತಿನವರು ಹಿಂದೆ ಆಮೂಲಾಗ್ರವಾಗಿ ಪರಿಶೋಧಿಸಿ ಮುದ್ರಣಮಾಡಿಸಿದ್ದರು. ಇದರ ನಾಲ್ಕನೇ ಆಶ್ವಾಸವನ್ನು ಪಠ್ಯಭಾಗವಾಗಿ ನೇಮಿಸಿದಮೇಲೆ ಮೈಸೂರ್ ಬುಕ್‌ಡಿಪೋ ಕೋದಂಡರಾಮಶೆಟ್ಟರು ಆ ಭಾಗವನ್ನು ಮುದ್ರಿಸಲು ವಿದ್ಯಾ ಇಲಾಖೆಯ ಡೈರೆಕ್ಟರ ಅನುಮತಿಯನ್ನು ಪಡೆದು ಆ ತರಗತಿಯವರು ಓದುವುದಕ್ಕೆ ಅನುಕೂಲವಾಗಿರಬೇಕೆಂದು ವ್ಯಾಖ್ಯಾನ ಬರೆಯಲು ನನ್ನನ್ನು ಪ್ರಾರ್ಥಿಸಿದ್ದರಿಂದ ನಾನು ಅನುಮತಿಸಿ ವಿಧ್ಯಾರ್ಥಿಗಳಿಗೆ ಸೌಕರ್ಯ ಉಂಟಾಗಲೆಂಬ ಉದ್ದೇಶವನ್ನೇ ಮುಖ್ಯವಾಗಿ ಇಟ್ಟು ವ್ಯಾಖ್ಯಾನವನ್ನು ಬರೆದಿದ್ದೇನೆ.

ಮೈಸೂರು.
18—5—1928

ಪಿ. ಆರ್. ಕರಿಬಸವಶಾಸ್ತ್ರಿ,
ಆಸ್ಥಾನ ಮಹಾವಿದ್ವಾನ್,
ಕರ್ನಾಟಕ ಭಾಷಾರತ್ನಂ.

ಕ ವಿ ತಾ ವಿ ಷ ಯ.

ಕವಿತೆ—ಈ ಚಂಪೂಗ್ರಂಥಕ್ಕೆ ಕವಿಯು ರಾಮಚಂದ್ರ ಚರಿತ ಪುರಾ... ರ್ಣವೆಂಬ ಹೆಸರನ್ನಿಟ್ಟಿದ್ದರೂ ಇದು ಸಾಮಾನ್ಯವಾಗಿ ಪಂಪರಾಮಾಯಣ... ಪ್ರಸಿದ್ಧಿಗೊಂಡಿದೆ. ಇದರಲ್ಲಿಯ ಕಥೆಗೂ ವಾಲ್ಮೀಕಿ ರಾಮಾಯಣ... ಕದ ಸಾಮಾನ್ಯವಾದ ಹೋಲಿಕೆಯಿದ್ದರೂ ಕೆಲವೆಡೆಗಳಲ್ಲಿ ಬಹಳ ವ್ಯ... ನಿವು. ಕಥಾ ಸಂದರ್ಭವು ಜೈನ ಪದ್ಧತಿಯನ್ನನುಸರಿಸಿರುವುದ... ವನ ಧರ್ಮವು ಅಲ್ಲಲ್ಲಿ ವರ್ಣಿತವಾಗಿದೆ.

ಕವಿ—ಈ ಗ್ರಂಥಕಾರನ ನಿಜವಾದ ಹೆಸರು ನಾಗಚಂದ್ರನೆಂದು
ಗ್ರಂಥದ ಕೊನೆಯ ಎರಡು ಪದ್ಯಗಳಿಂದ ತಿಳಿಯಬರುವುದು. ಆದರೆ ಆತನು
ಅಭಿನವ ಪಂಪನೆಂಬ ಹೆಸರಿನಿಂದಲೇ ಪ್ರಸಿದ್ಧಿಗೆ ಬಂದಿರುವುದರಿಂದ, ಸಂಸ್ಕೃತ
ಪುರಾತನ ಕವಿಗಳಲ್ಲಿ ಕಾಳಿದಾಸನು ಹೇಗೆ ಪ್ರಸಿದ್ಧಿ ಪಡೆದಿರುವನೋ ಹಾಗೆ
ಯೇ ಪುರಾತನ ಕನ್ನಡ ಕವಿಗಳಲ್ಲಿ ಆದಿಪಂಪನು ಪ್ರಸಿದ್ಧಿಪಡೆದಿರಬೇಕು.
ಅಭಿನವಪಂಪನು ಈ ಗ್ರಂಥವಲ್ಲದೆ ಮಲ್ಲಿನಾಥಪುರಾಣವೆಂಬ ಕಾವ್ಯವನ್ನೂ
ರಚಿಸಿರುವನು. 'ಜಿನಮುನಿತನಯ', 'ಜಿನಾಕ್ಷರಮಾಲೆ', ಮೊದಲಾದ ಇತ
ರ ಗ್ರಂಥಗಳನ್ನೂ ರಚಿಸಿರುವಂತೆ ದೇವಚಂದ್ರನು ರಾಜಾವಳೀಕಥೆಯಲ್ಲಿ
ಹೇಳಿರುತ್ತಾನೆ. ಅಭಿನವಪಂಪನ ದೇಶ, ಕಾಲ, ವಂಶ ಮೊದಲಾದುವು
ಯಾವುವೂ ಇವನ ಗ್ರಂಥಗಳಿಂದ ತಿಳಿಯಬರುವುದಿಲ್ಲ. ಆದರೆ ಅವನು ವಿಜ
ಯಪುರದಲ್ಲಿ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿ ಮಲ್ಲಿನಾಥಪುರಾಣವನ್ನು
ಬರೆದಂತೆ ಆ ಪುರಾಣದಲ್ಲಿ ಹೇಳಿದೆ. ಈ ವಿಜಯಪುರವು ಈಗಿನ ಬಿಜಾಪುರ
ವಾಗಿರಬಹುದು, ಇವನ ಊರೂ ಇದೇ ಇದ್ದಿರಬಹುದು. ಇವನು ಐಶ್ವ
ರ್ಯವಂತನಾಗಿಯೂ ಉನ್ನತಸ್ಥಿತಿಯಲ್ಲಿದ್ದಂತೆಯೂ ತಿಳಿಯಬರುತ್ತದೆ. ಇವನ
ಬಿರುದುಗಳು:—ಕವಿತಾಮನೋಹರ, ಭಾರತೀಕರ್ಣಪೂರ, ಸಾಹಿತ್ಯವಿದ್ಯಾ
ಧರ, ಮೊದಲಾದುವು. ಇವುಗಳಲ್ಲೊಂದನ್ನು ರಾಮಚಂದ್ರಚರಿತಪುರಾಣದ
ಪ್ರತಿ ಅಶ್ವಾಸದ ಕೊನೆಯ ಪದ್ಯದಲ್ಲಿ ಕವಿಯು ಕಥಾನಾಯಕನ ಪರವಾಗಿ
ಉಪಯೋಗಿಸುತ್ತಾನೆ.

* **ಕವಿಯ ಕಾಲ**—ಈ ಕವಿಯ ಕಾಲವನ್ನು ಗೊತ್ತುಮಾಡುವು
ದಕ್ಕೆ ಕೆಲವು ಆಧಾರಗಳಿರುವುವು ;—

(೧) ಎರಡನೆಯ ನಾಗವರ್ಮನು (ಸುಮಾರು ಕ್ರಿ. ಶ. ೧೧೪೫
ತನ್ನ ಕರ್ಣಾಟಕ ಭಾಷಾಭೂಷಣದಲ್ಲಿ "ದ್ವಿತೀಯಾರ್ಥೇ ಚತುರ್ಥೀ
ಎಂಬ ಸೂತ್ರಕ್ಕುದಾಹರಣವಾಗಿ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪ
ತಂ ಮತ್ಸ್ಯಾವತಾರಕ್ಕೆ" ಎಂಬ ರಾಮಚಂದ್ರಚರಿತಪುರಾಣದ ಪ
ಲ) ಭಾಗವನ್ನು ಕೊಟ್ಟಿರುವುದರಿಂದ ಅಭಿನವಪಂಪನು ಈ ನಾ
ಕಾಲಕ್ಕೆ ಹಿಂದೆಯೇ ಪ್ರಸಿದ್ಧಿಗೆ ಬಂದಿರಬೇಕು.
ತನ್ನ ನೇಮಿನಾಥಪುರದಲ್ಲಿ
ರ್ಣಪಾರ್ಯನು(ಸು, ೧೧೪೦)

ಟಕ ಕವಿಚರಿತೆ, ೧—೮೦—೮೩.

ಕಂ|| ಆದ್ಯಂತನಾಗಿಯುಂ ನೆಗ|
ಟ್ಟಿದ್ದ್ಯರ ದೊರೆಯೆನಿಸಿ ಮೆಱೆದು ಸಾಹಿತ್ಯ ಕಳಾ ||
ಹೃದ್ಯತೆಯಿನೆಸೆದನಾ ನಿರ|
ವದ್ಯಗುಣಂ ಸಂದ ನಾಗಚಂದ್ರ ಕವೀಂದ್ರಂ ||

ಎಂದು ಹೊಗಳಿರುತ್ತಾನೆ. ಆದುದರಿಂದ ಪಂಪರಾಮಾಯಣವು ೧೧೪೦ ಕ್ಕೆ ಮೊದಲೇ ಹುಟ್ಟಿರಬೇಕು.

(೩) "ಮುನಿನಾಥಂ ದಶಧರ್ಮಧಾರಿ—" ಎಂಬ ರಾಮಚಂದ್ರ ಚರಿತಪುರಾಣದ ಪದ್ಯವು (೧—೨೦) ಶ್ರವಣಬೆಳ್ಗೊಳದ ೪೭ ನೆಯ ಶಾಸನದಲ್ಲಿ ದೊರೆಯುತ್ತದೆ. ಈ ಶಾಸನವು ಸುಮಾರು ೧೧೧೫ರಲ್ಲಿ ಬರೆದುದು. ಇದರಲ್ಲಿ ಮೇಲಣ ಪದ್ಯದಲ್ಲಿ ಹೇಳಿರುವ ಮೇಘಚಂದ್ರನು ೧೧೧೫ರಲ್ಲಿ ಗತಿಸಿದಂತೆ ತಿಳಿಸಿದೆ. ಆದುದರಿಂದ ಈ ಗ್ರಂಥವು ೧೧೧೫ಕ್ಕೆ ಮೊದಲೇ ಹುಟ್ಟಿರಬೇಕು.

(೪) ಮದರಾಸಿನ ಪ್ರಾಚ್ಯಕೋಶಾಲಯದಲ್ಲಿ ದೊರೆತ, ೧೧೦೫ ರಲ್ಲಿ ತ್ರಿಭುವನಮಲ್ಲನ ಆಳಿಕೆಯಲ್ಲಿ ಬರೆದ, ಒಂದು ಶಾಸನದಲ್ಲಿ ಒಬ್ಬ ಹಂಪಕವಿಯ ಹೆಸರು ದೊರೆಯುತ್ತದೆ. ಈ ಕವಿಯು ನಾಗಚಂದ್ರನೇ ಇರಬಹುದು

(೫) ಕಂತೀ ಹಂಪನ ಸಮಸ್ಯೆಗಳನ್ನು ಅನೇಕರು ಕೇಳಿರಬಹುದು. ಈ ಕಂತಿಯು ದ್ವಾರಸಮುದ್ರದ ಬಳ್ಳಾಳ ವಿಷ್ಣುವರ್ಧನರಾಯನ (೧೧೦೪-೧೧೪೧) ಆಸ್ಥಾನ ಪಂಡಿತೆಯಾಗಿದ್ದ ಪ್ರಸಿದ್ಧಳಾದ ಒಬ್ಬ ಕಬ್ಬಿಗಿತಿ. ಅಭಿನವ ಪಂಪನೂ ಅದೇ ಆಸ್ಥಾನದಲ್ಲಿ ಪಂಡಿತನಾಗಿದ್ದಿರಬೇಕು.

ಮೇಲೆ ಹೇಳಿರುವ ಕಾರಣಗಳಿಂದ ಅಭಿನವ ಪಂಪನು ಸುಮಾರು ೧೧೦೫ ರಲ್ಲಿ ಇದ್ದಿರಬೇಕೆಂದು ತೋರುತ್ತದೆ.

ವಾಲ್ಮೀಕಿಯು ರಾಮನನ್ನು ಯಾವಕುಂದೂ ಇಲ್ಲದವನನ್ನಾಗಿಯೂ ಕಥೆಗೆ ಮುಖ್ಯನಾಯಕನನ್ನಾಗಿಯೂ ವರ್ಣಿಸಿರುವಂತೆ ಅಭಿನವಪಂಪನು ವರ್ಣಿಸದೆ ಲಕ್ಷ್ಮಣನನ್ನೇ ಮುಖ್ಯನನ್ನಾಗಿ ವರ್ಣಿಸಿ, ಇತರರಾಜರು ಉಲ್ಕಾಪಾತವನ್ನೋ ತಮ್ಮನರೆತ ಕೂದಲನ್ನೋ ನೋಡಿದ ಮಾತ್ರದಿಂದಲೇ ಪ್ರಪಂಚದ ಸುಖಗಳು ನಶ್ವರವೆಂದು ತಿಳಿದು ತಪಕ್ಕೆ ನಿಲ್ಲುವಂತೆ ವರ್ಣಿಸಿರುವಾಗ ರಾಮನಿಗೆಮಾತ್ರ ಕಡೆಯವರೆವಿಗೂ ಈ ನೆನಪೇ ಇಲ್ಲದೆ ಲಕ್ಷ್ಮಣನು ಸತ್ತಾಗ ಅವನ

ದೇಹವನ್ನು ಬಹುಕಾಲ ಬಿಡಲಾರದೆ ಅಪ್ಪಿಕೊಂಡಿದ್ದಂತೆ ವರ್ಣಿಸಿರುವುದು ಅಷ್ಟುಸಮಂಜಸವಾಗಿ ತೋರುವುದಿಲ್ಲ.

ಎರಡು ಕಥೆಗಳಿಗೂ ಇರುವ ಕೆಲವು ಮುಖ್ಯವಾದ ವ್ಯತ್ಯಾಸಗಳನ್ನು ಇಲ್ಲಿತೋರಿಸಿರುವೆವು:—ಪಂಪರಾಮಾಯಣದಲ್ಲಿ

(೧) ಪುತ್ರಕಾಮೇಷ್ಟಿ ಯಾಗದ ವಿಷಯವೇ ಇಲ್ಲ; ರಾಮನ ತಾಯಿ ಅಪರಾಜಿತೆ, ಲಕ್ಷ್ಮಣನೊಬ್ಬನೇ ಸುಮಿತ್ರೆಯ ಮಗ, ಶತ್ರುಘ್ನನ ತಾಯಿ ಸುಪ್ರಭೆ.

(೨) ರಾಮಲಕ್ಷ್ಮಣರು ಬಲಾಚ್ಯುತರೆಂದೂ ಕಾರಣಪುರುಷರೆಂದೂ ಹೇಳಿದೆ. ಲಕ್ಷ್ಮಣನಿಗೆ ಎಂಟನೆಯ ಕೇಶವ, ಉಪೇಂದ್ರ, ವಾಸುದೇವ, ಕೃಷ್ಣ, ನಾರಾಯಣ, ಲಕ್ಷ್ಮೀಧರ, ಪುರುಷೋತ್ತಮ, ಜನಾರ್ದನ—ಎಂಬ ಹೆಸರುಗಳೂ ವುಂಟು; ಇವನೇ ನಿಜವಾದ ಕಥಾನಾಯಕನು. ರಾಮನ ವರ್ಣವು ಬಿಳುಪು, ಲಕ್ಷ್ಮಣನದು ಕಪ್ಪು.

(೩) ವಿಶ್ವಾಮಿತ್ರನ ಪ್ರಸ್ತಾಪವೇ ಇಲ್ಲ. ನಾರದನು ಸೀತಾದೇವಿಯನ್ನು ಮೋಹಿಸಿದನೆಂದು ಹೇಳಿದೆ.

(೪) ಸೀತಾದೇವಿಗೆ ಪ್ರಭಾಮಂಡಲನೆಂಬ ಅಣ್ಣನಿದ್ದನೆಂದೂ ಅವನು ಖಚರಪತಿಯಾದ ಇಂದುಗತಿಯ ಸಾಕುಮಗನೆಂದೂ, ಅವನು ನಾರದನು ಬರೆದಿಟ್ಟಿದ್ದ ಸೀತೆಯ ಪಟವನ್ನು ನೋಡಿ. ತಿಳಿಯದೆ ಆಕೆಯನ್ನು ಮೋಹಿಸಿ, ಕಡೆಗೆ ನಿಶ್ಚಯಾಂಶವನ್ನು ತಿಳಿದು ವ್ಯಸನಪಟ್ಟನೆಂದೂ ಹೇಳಿದೆ.

(೫) ಖಚರಪತಿಯಾದ ಇಂದುಗತಿಯ ಬಳಿಯಲ್ಲಿದ್ದ ವಜ್ರಾವರ್ತ ಸಾಗರವರ್ತಗಳೆಂಬ ಧನುಸ್ಸುಗಳನ್ನು ಆತನು ಜನಕನೊಡನೆ ಮಿಥಿಲೆಗೆ ಕಳುಹಿಸಿದನೆಂದೂ ಅವುಗಳಲ್ಲಿ ಮೊದಲನೆಯದನ್ನು ರಾಮನು ಬಗ್ಗಿಸಿ ಸೀತೆಯನ್ನೂ, ಎರಡನೆಯದನ್ನು ಲಕ್ಷ್ಮಣನು ಬಗ್ಗಿಸಿ ಚಂದ್ರಧ್ವಜನ ಇಬ್ಬರು ಮಕ್ಕಳನ್ನೂ ಪಡೆದರೆಂದು ಹೇಳಿದೆ.

(೬) ಭರತನು ರಾಮಲಕ್ಷ್ಮಣರಿಗುಂಟಾದ ವೈಭವದಿಂದ ವಿಷಾದಪಟ್ಟು ವೈರಾಗ್ಯಪರನಾದಂತೆಯೂ, ಕೈಕೆಯ ಸಲಹೆಯ ಮೇರೆಗೆ ಅವನಿಗೆ ಜನಕನ ತಮ್ಮನಾದ ಕನಕನ ಮಗಳನ್ನು ಮದುವೆ ಮಾಡಿದಂತೆಯೂ ಹೇಳಿದೆ.

(೭) ವಿಜಯ ಯಾತ್ರೆಯಲ್ಲಿ ಲಕ್ಷ್ಮಣನಿಗೆ ಅನೇಕ ಮದುವೆಗಳಾಗುತ್ತವೆ.

(೮) ವಾಲ್ಮೀಕಿಯು ಹೇಳಿರುವಂತೆ ಏಕಪತ್ನೀವ್ರತವುಳ್ಳ ರಾಮನಿಗೆ ಪಂಪರಾಮಾಯಣದಲ್ಲಿ ಸುಗ್ರೀವನ ಮಕ್ಕಳನ್ನೂ ದಧಿಮುಖನಗರದ ದೊರೆಯ ಮಕ್ಕಳನ್ನೂ ರತ್ನಪುರದರಸನ ಮಗಳನ್ನೂ ಕೊಟ್ಟು ಮದುವೆಯಾದಂತೆ ಹೇಳಿದೆ.

(೯) ಮಾರೀಚನು ಮಾಯಾಮೃಗವಾಗಿ ರಾಮನ ದನಿಯನ್ನನುಕರಿಸಿ ಆರ್ತಧ್ವನಿಮಾಡಿದನೆಂಬುದಕ್ಕೆ ಬದಲಾಗಿ ರಾವಣನ ವಶವಾದ ಅವಲೋಕಿನೀ ವಿದ್ಯೆಯು ಲಕ್ಷ್ಮಣನ ದನಿಯಂತೆ ಸಿಂಹನಾದ ಮಾಡಿದಹಾಗೆ ಹೇಳಿದೆ.

(೧೦) ಸುಗ್ರೀವ ಮೊದಲಾದವರು ಕಪಿಧ್ವಜರೆಂದೂ ಖೇಚರರೆಂದೂ ಹೇಳಿದೆ

(೧೧) ಸುಗ್ರೀವನ ತಂಗಿಯಾದ ಶ್ರೀಪ್ರಭೆಯನ್ನು ರಾವಣನು ಮದುವೆಯಾಗಿದ್ದನೆಂದಿದೆ.

(೧೨) ವಾಲಿಯು ಕೈಲಾಸಪರ್ವತದಲ್ಲಿ ತಪಸ್ಸು ಮಾಡುತ್ತಿರುವಾಗ ಆ ಪರ್ವತವನ್ನು ರಾವಣನು ಎತ್ತಲು ವಾಲಿಯು ತನ್ನ ಹೆಬ್ಬೆರಳಿನಿಂದ ತುಳಿದನೆಂದೂ ಅದರಿಂದ ರಾವಣನಿಗೆ ಬಹು ಬಾಧೆಯಾಗಿ ಅವನು ಅರಚಿಕೊಂಡನೆಂದೂ ಆ ಕಾರಣದಿಂದ ಅವನಿಗೆ ರಾವಣನೆಂಬ ಹೆಸರು ಬಂದಿತೆಂದೂ ಹೇಳಿದೆ.

(೧೩) ಕಾರ್ತವೀರ್ಯಾರ್ಜುನನಿಗೆ "ಸಹಸ್ರಬಾಹು" ಎಂಬ ಹೆಸರಿದೆ. ರಾವಣನನ್ನು ಸಹಸ್ರಬಾಹು ಸೆರೆಹಿಡಿದನೆಂಬುದಕ್ಕೆ ಬದಲಾಗಿ ರಾವಣನೇ ಅವನನ್ನು ಸೆರೆಹಿಡಿದನೆಂದಿದೆ.

(೧೪) ರಾವಣನ ತಂಗಿಯಾದ ಚಂದ್ರನಖಿಯ ಮಗಳಾದ ಅನಂಗಪುಷ್ಪೆಯನ್ನು ಹನುಮಂತನು ಮದುವೆಯಾಗಿ ರಾವಣನು ಕೊಟ್ಟ ಕರ್ಣಕುಂಡಲಪುರಕ್ಕೆ ದೊರೆಯಾಗಿ ಅವನ ಸ್ನೇಹಿತನಾಗಿದ್ದನೆಂದೂ ರಾವಣನು ಸೀತೆಯನ್ನು ಅಪಹರಿಸಿದುದಕ್ಕಾಗಿ ಅವನಿಗೆ ಹಗೆಯಾಗಿ ರಾಮನಿಗೆ ಸಹಾಯಮಾಡಿದನೆಂದೂ ಹೇಳಿದೆ.

(೧೫) ರಾವಣನನ್ನು ಸಂಹರಿಸಿದವನು ಲಕ್ಷ್ಮಣನೆಂದು ಹೇಳಿದೆ.

ಇಲ್ಲಿ ಹೇಳಿರುವುವಲ್ಲದೆ ಇತರ ವ್ಯತ್ಯಾಸಗಳೂ ಓದುವಾಗ ಅಲ್ಲಲ್ಲಿ ತಿಳಿಯಬರುವುವು.

ಆಶ್ವಾಸ ೪—ಜನಕ ಜಿನಭವನ ಸಂದರ್ಶನ.

ಮಿಥಿಳಾಪುರದಲ್ಲಿ ಜನಕನ ಅಗಸಿಯಾದ ವಿದೇಹಿಯು ಗರ್ಭವನ್ನು ಧರಿಸಿದಳು. ಪೂರ್ವಜನ್ಮದ ವೈರದಿಂದ ಒಬ್ಬ ನಿಶಾಚರನು ಆಕೆಯ ಗರ್ಭವನ್ನು ನಾಶಮಾಡಬೇಕೆಂದು ಕಾದಿದ್ದನು. ವಿದೇಹಿಯು ಅವಳಿ ಮಕ್ಕಳನ್ನು ಹೆತ್ತಳು. ಅವುಗಳಲ್ಲಿ ಒಂದು ಗಂಡು, ಮತ್ತೊಂದು ಹೆಣ್ಣು. ನಿಶಾಚರನು ವಿದೇಹಿಗೂ, ಹೆಣ್ಣುಮಗುವಿಗೂ ಯಾವ ಬಾಧೆಯನ್ನೂ ಉಂಟುಮಾಡದೆ ಗಂಡುಕೂಸನ್ನು ಮಾತ್ರ ಅಪಹರಿಸಿಕೊಂಡು ಆಕಾಶಮಾರ್ಗದಲ್ಲಿ ಹೋಗುತ್ತ ಅದನ್ನು ಕೊಲ್ಲಬೇಕೆಂಬ ಆಲೋಚನೆಯಿಂದ ಅದರ ಮುಖವನ್ನು ಕ್ರೂರದೃಷ್ಟಿಯಿಂದ ನೋಡಲು, ಆ ಮಗುವು ಪೂರ್ವಜನ್ಮದಲ್ಲಿ ಮಾಡಿದ್ದ ಅಣುವ್ರತದ ಪ್ರಭಾವದಿಂದಲೂ ಈ ನಿಶಾಚರನು ಮಾಡಿದ್ದ ಮಹಾವ್ರತದ ಸಂಸ್ಕಾರ ಬಲದಿಂದಲೂ ಅವನಿಗೆ ಉಪಶಾಂತಿಯುಂಟಾಗಿ ದ್ವೇಷವು ತೊಲಗಿತು ಕೂಡಲೆ ನಿಶಾಚರನು ತನ್ನ ಕಿವಿಯಲ್ಲಿದ್ದ ಕುಂಡಲಗಳನ್ನು ಆ ಮಗುವಿನ ಕಿವಿಗಿಟ್ಟು ಪರ್ಣಲಘುವಿದ್ಯೆಯಿಂದ ಆ ಮಗುವಿಗೆ ಯಾವ ಬಾಧೆಯೂ ಉಂಟಾಗದಂತೆ ಅದನ್ನು ಬಿಸುಟು ಹೊರಟುಹೋಗಲು, ಅದು ಮೆಲ್ಲನೆ ಬಂದು ರಥನೂಪುರಚಕ್ರವಾಳಪುರದ ಒಡೆಯನಾದ ಇಂದುಗತಿಯೆಂಬ ಖೇಚರೇಂದ್ರನ ಹಾಸಿಗೆಯಮೇಲೆ ಬಿದ್ದಿತು. ಕಾಂತಿಯಿಂದ ಹೊಳೆಯುತ್ತಿರುವ ಆ ಮಗುವನ್ನು ನೋಡಿ ಆತನು ಪರಮಾನಂದಭರಿತನಾಗಿ ತನ್ನರಸಿಯಾದ ಪುಷ್ಪವತಿಯು ಫಲವತಿಯಾದಳೆಂದು ಆಕೆಗೆ ಆ ಮಗುವನ್ನೊಪ್ಪಿಸಿ ಅದಕ್ಕೆ ಪ್ರಭಾಮಂಡಲನೆಂಬ ಹೆಸರನ್ನಿಟ್ಟನು.

ಇತ್ತ, ಮಿಥಿಲೆಯಲ್ಲಿ ವಿದೇಹಿಯು ತನ್ನ ಮಗುವನ್ನು ರಾಕ್ಷಸನು ಎತ್ತಿಕೊಂಡು ಹೋದುದಕ್ಕಾಗಿ ಬಹಳ ವ್ಯಸನಪಟ್ಟಳು. ಆಗ ಜ್ಯೋತಿಷ್ಕರು ಶುಭಮುಹೂರ್ತದಲ್ಲಿ ಹುಟ್ಟಿದ ಆ ಮಗುವಿಗೆ ಯಾವ ಅಪಾಯವೂ ಸಂಭವಿಸದೆಂದು ಆಕೆಯ ದುಃಖವನ್ನು ಕಳೆದರು. ಜನಕನು ವಿಭವದಿಂದ ಹೆಣ್ಣುಮಗುವಿಗೆ ಜಾತಕರ್ಮೋತ್ಸವವನ್ನು ಮಾಡಿ, ಸರ್ವಲಕ್ಷಣ ಸಸ್ಯಸಂಪತ್ತಿಗೆ ಸೀತೆಯಾದುದರಿಂದ, ಸೀತೆಯೆಂಬ ಹೆಸರನ್ನಿಟ್ಟು ಬಹಳ ಪ್ರೀತಿಯಿಂದ ಸಾಕುತ್ತಿರಲು ಆಕೆಯ ದಿನಕ್ರಮವಾಗಿ ಮೋಹನಾಕಾರದಿಂದ ಬಳೆದು, ಭರತಶಾಸ್ತ್ರಾದಿ ಸಕಲ ಕಲೆಗಳಲ್ಲಿಯೂ ಪರಿಣತಿಯನ್ನು ಪಡೆದಳು.

ಹೀಗಿರುವಲ್ಲಿ, ಒಂದು ದಿನ ಚಾರನೊಬ್ಬನು ಭೀತಿಯಿಂದೋಡಿಬಂದು ದೊರೆಗೆ ನಮಸ್ಕರಿಸಿ, ಲೆಕ್ಕವಿಲ್ಲದಷ್ಟು ಬೇಡರ ಪಡೆಯು ಭೂಮಂಡಲವನ್ನೇ

ಸೂರೆಮಾಡುತ್ತಿರುವುದೆಂದು ತಿಳಿಸಲು, ಜನಕನು ಅವರನ್ನಡಗಿಸಿ ಜನರ ಕಷ್ಟಗಳನ್ನು ಕೂಡಲೆ ನಿವಾರಣೆಮಾಡಬೇಕೆಂದು ಆಲೋಚಿಸಿ ತನಗೆ ಸಹಾಯವಾಗಿ ಬರುವಂತೆ ದಶರಥನಿಗೆ ಹೇಳಿಕಳುಹಿಸಿದನು. ದಶರಥನು ಸೇನಾಸಮೇತನಾಗಿ ಹೊರಡುವುದಕ್ಕೆ ಸನ್ನದ್ಧನಾದುದನ್ನು ಬಲಾಚ್ಯುತರಾದ ರಾಮಲಕ್ಷ್ಮಣರರಿತು ದಶರಥನ ಸಭೆಗೆ ಬಂದರು. ರಾಮನು ತಾನೂ ಎಂಟನೆಯ ಕೇಶವನಾದ ಲಕ್ಷ್ಮಣನೂ ಇರುವಾಗ ಯುದ್ಧಕ್ಕೆ ನೀನು (ದಶರಥನು) ಹೊರಡಬೇಕಾದ ಆವಶ್ಯಕವಿಲ್ಲವೆಂದೂ ನಾವು ಚಿಕ್ಕವರೆಂದು ಸಂಶಯಪಡಲವಶ್ಯಕವಿಲ್ಲವೆಂದೂ ತಿಳಿಸಿ ತಮ್ಮನ್ನು ಕಳುಹಿಸುವಂತೆ ಕೇಳಿಕೊಳ್ಳಲು, ದಶರಥನು ಅದಕ್ಕೊಪ್ಪಿದನು. ಇವರು ದೊಡ್ಡ ಸೇನೆಯೊಡನೆ ಹೊರಟು ಕೆಲವು ದಿನಗಳಲ್ಲಿ ಜನಕನೊಡನೆ ಕಲೆತರು. ಜನಕನೂ, ಅವನ ತಮ್ಮನಾದ ಕನಕನೂ ದೊಡ್ಡ ಬಲದೊಡನೆ ತೆರಳಿ' ಎಲ್ಲರೂ ಕಿರಾತ ಸೈನ್ಯದಮೇಲೆ ಯುದ್ಧಮಾಡಿದರು. ರಾಮಲಕ್ಷ್ಮಣರು ಶಬರ ಸೇನಾಧಿಪತಿಯಾದ ತರಂಗತಮನನ್ನು ಸೋಲಿಸಿ ಶರಣಾಗತನನ್ನಾಗಿ ಮಾಡಿದರು. ಜನಕನು ರಾಮನ ಪರಾಕ್ರಮಕ್ಕೆ ಮೆಚ್ಚಿ ತನ್ನ ಮಗಳಾದ ಸೀತೆಯನ್ನು ಆತನಿಗೆ ಕೊಟ್ಟೆನೆಂದು ಹೇಳಿ ರಾಮಲಕ್ಷ್ಮಣರನ್ನು ಅನೇಕೋಪಚಾರಗಳೊಡನೆ ಅಯೋಧ್ಯೆಗೆ ಕಳುಹಿಸಿದನು.

ಜನಕನು ಸೀತೆಯನ್ನು ರಾಮನಿಗೆ ಕೊಟ್ಟನೆಂಬ ವಾರ್ತೆಯನ್ನು ಕೇಳಿ ನಾರದನು ಜಾನಕಿಯನ್ನು ನೋಡಬೇಕೆಂಬ ಕುತೂಹಲದೊಡನೆ ಮಿಥಿಲೆಗೆ ಬಂದು ಸೀತೆಯನ್ನು ನೋಡಿ ಮೋಹಿಸಲು, ಆಕೆಯು ಇವನ ಬೋಳತಲೆ ಮೊದಲಾದ ವಿಕೃತವೇಷವನ್ನು ನೋಡಿ ಹೆದರಿ ಓಡಿಹೋದಳು. ಆಕೆಯ ಹಿಂದೆಯೇ ನಾರದನೂ ಓಡುತ್ತಿರಲು ಅಲ್ಲಿದ್ದವರೆಲ್ಲರೂ ನಾರದನನ್ನು ಬೈದರು. ಸೈನಿಕರು ಈ ಕಳಕಳವನ್ನು ಕೇಳಿ ಕತ್ತಿಗಳನ್ನು ಝುಳಪಿಸುತ್ತ ಬರಲು ನಾರದನು ಭಯಪಟ್ಟು ಆಕಾಶಕ್ಕೆ ನೆಗೆದು ಕೈಲಾಸಪರ್ವತವನ್ನು ಸೇರಿದನು. ಅಲ್ಲಿಯ ಉಪವನದಲ್ಲಿ ತನ್ನ ಬಳಲಿಕೆಯನ್ನು ತೀರಿಸಿಕೊಂಡು ತನಗುಂಟಾದ ಅಪಮಾನಕ್ಕೆ ಕಾರಣಳಾದ ಸೀತೆಗೆ ಕೇಡನ್ನು ಮಾಡಬೇಕೆಂದು ನಿಶ್ಚಯಿಸಿ, ವಿಚಿತ್ರ ಚಿತ್ರಕಲಾ ವಿಶಾರದನಾದ ನಾರದನು ಚಲುವೆಯಾದ ಸೀತೆಯ ಚಿತ್ರವನ್ನು ಆಕೆಯ ಪ್ರತಿಬಿಂಬವೋ ಎಂಬಂತೆ, ಒಂದು ಪಟದಮೇಲೆ ಬರೆದು ಅದನ್ನು ವಿದ್ಯಾಧರ ರಾಜಧಾನಿಯಾದ ರಥನೂಪುರ ಚಕ್ರವಾಳಪುರದ ವಿನೋದವನದಲ್ಲಿಯ ಮಣಿಭವನದಲ್ಲಿ ತೂಗಹಾಕಿ ಹೊರಟುಹೋದನು. ಅಲ್ಲಿಗೆ ಪ್ರಭಾಮಂಡಲನು ಬಂದು ಆ ಪಟವನ್ನು ನೋಡಿ ಮದನಮೋಹಕ್ಕೊಳಗಾಗಿ ಮೋಹಮೂರ್ಛೆ ಹೊಂದಿದನು. ಇದನ್ನು ಕೇಳಿ

* * * *

* * * *

ವಳಿರೇಖೆ ಮಸುಳೆ ಗರ್ಭಂ |
ಬಳೆವುದುಮೊಡವಳೆದು ಸತಿಯ ಮಧ್ಯಂ ಚೆಲ್ವಂ ||
ತಳೆದುದು ನಯನಾನಂದಮ |
ನೆಳವೆಱೆ ಪರಿಪೂರ್ಣಮಾದೊಡಂ ಪುಟ್ಟಿಪವೋಲ್ ||೪||

---

೪. ಟೀ|| (ವಳಿರೇಖೆ) ವಳಿ=ತ್ರಿವಳಿಯ, ರೇಖೆ=ಗೆರೆಯು, ಮಸುಳೆ=ಕಾಣಿಸದಿರಲು, ಗರ್ಭಂ=ಬಸುರು, ಬಳೆವುದುಂ=ವೃದ್ಧಿಹೊಂದಿದಕೂಡಲೆ, ಸತಿಯ=ಜನಕಪತ್ನಿಯ, ಮಧ್ಯಂ=ನಡುವು, ಒಡವಳೆದು=ಜೊತೆಯಲ್ಲಿ ಬೆಳೆದು, ಎಳವೆರೆ=ಬಾಲಚಂದ್ರನು, ಪರಿಪೂರ್ಣಮಾದೊಡಂ=ತುಂಬಿದಾಗ್ಯೂ, ನಯನಾನಂದಮಂ=ನೇತ್ರಾನಂದವನ್ನು, ಪುಟ್ಟಿಪವೋಲ್=ಹುಟ್ಟಿಸುವಹಾಗೆ, ಚೆಲ್ವಂ=ಸೌಂದರ್ಯವನ್ನು, ತಳೆದುದು=ಧರಿಸಿತು, (ಚೆನ್ನಾಗಿ ಕಾಣಿಸಿತೆಂದು ಭಾವ).

ತಾ|| ಹೊಟ್ಟೆಯಮೇಲಿನ ತ್ರಿವಳಿಗಳು (ಮಡಿಕೆಗಳು) ಕಾಣದಂತಾದುವು. ಬಾಲಚಂದ್ರನು ಪೂರ್ಣನಾದ ಹಾಗೆ ಮತ್ತೆ ಸಂತೋಷ ಹೆಚ್ಚುವಂತೆ ಸೊಂಟವು ದಪ್ಪವಾದರೂ ಸುಂದರವಾಗಿದ್ದಿತು. ೪.

[೨-೩ ನೇ ಪದ್ಯವನ್ನು ಗೆಜೆಟ್ಟಿನ ಪ್ರಕಾರ ಬಿಟ್ಟಿರುತ್ತೆ.]

ಆ ಸಮಯದೊಳ್—

ಕಂ|| ಭವ ಬದ್ಧ ವೈರದಿಂ ಕಾ |
ದು ವಿದೇಹಿಯ ಗರ್ಭಮಂ ನಿಶಾಚರನಿರ್ದಂ ||
ವಿವಿಧೋಪಸರ್ಗಮಂ ಪಡೆ |
ಯವೆ ಮುಳಿಸಂ ಪಡೆವ ಮುಳಿವ ದುಶ್ಚರಿತಂಗಳ್ ||೫||

ಆ ವಿದೇಹಿಯ ಗರ್ಭಮನಾನಿಶಾಚರನದೇಂಕಾರಣದಿಂ ಕಾದಿರ್ದನೆಂದೊಡೆ ಚಂದ್ರಪುರಮನಾಳ್ವಂ ಚಂದ್ರಧ್ವಜನಾತನರಸಿ ಮನಸ್ವಿನಿಯೆಂಬಳಾಕೆಗೆ ಪುಟ್ಟಿದ ಚಿತ್ತೋತ್ಸವೆಯೆಂಬ ಬಾಲಿಕೆಯುಮಾನೃಪನ ಪುರೋಹಿತನ ಮಗನಪ್ಪ ಕಪಿಳನೆಂಬ ಬಾಲಕನುಂ—

ಗದ್ಯ|| ಆ ಸಮಯದೊಳ್=ಆ ಕಾಲದಲ್ಲಿ,

೫. ಟೀ|| ನಿಶಾಚರಂ=ರಾಕ್ಷಸತ್ವವಂ ಪಡೆದಿರುವ ಕಪಿಲನು, (ಭವ ಬದ್ಧವೈರದಿಂ) ಭವ=ಹಿಂದಣಜನ್ಮದಲ್ಲಿ, ಬದ್ದ=ಕಟ್ಟಲ್ಪಟ್ಟ, ವೈರದಿಂ=ದ್ವೇಷದಿಂದ, ವಿದೇಹಿಯ=ಜನಕಪತ್ನಿಯ, ಗರ್ಭವಂ=ಬಸುರನ್ನು, (ನಾಶಮಾಡಲು) ಕಾದು=ಕಾದುಕೊಂಡು, ಇರ್ದಂ=ಇದ್ದನು, ಮುಳಿಸಂ=ಕೋಪವನ್ನು, ಪಡೆವ=ಹುಟ್ಟಿಸುವ, ಮುಳಿವ=ಕೋಪಿಸುವ, ದುಶ್ಚರಿತಂಗಳ್=ಕೆಟ್ಟ ನಡತೆಗಳು, (ವಿವಿಧೋಪಸರ್ಗಮಂ) ವಿವಿಧ=ನಾನಾವಿಧವಾದ, ಉಪಸರ್ಗಮಂ=ಕೇಡನ್ನು, ಪಡೆಯವೆ=ಉಂಟುಮಾಡುವುದಿಲ್ಲವೇ?

ತಾ|| ಪೂರ್ವಜನ್ಮದ ದ್ವೇಷದಿಂದ ಒಬ್ಬ ನಿಶಾಚರನು (ಕಪಿಲ) ಆಕೆಯ ಗರ್ಭವನ್ನು ನಾಶಮಾಡಬೇಕೆಂದು ಕಾದಿದ್ದನು. ೫.

ಗದ್ಯ|| ಆ ನಿಶಾಚರಂ=ರಾಕ್ಷಸತ್ವವಂ ಪಡೆದಿರುವ ಕಪಿಲನು, ಆ

ಕಂ|| ಒಡನಾಡಿಯುಮೊಡನೋದಿಯು |
ಮೊಡವಳೆದುಂ ಪಲವುಕಾಲದಿಂದನುಬಂಧಂ ||
ಗಿಡದೊಡಲೆರಡಸುವೊಂದೆನೆ |
ಗೆಡೆವಕ್ಕಿಗಳಂತೆ ಕೂಡಿ ನಲಿಯುತ್ತಿರ್ದರ್ ||೬||

ವಿದೇಹಿಯ=ಜನಕಪತ್ನಿಯ, ಗರ್ಭಮಂ=ಬಸುರನ್ನು, ಅದೇಂಕಾರಣದಿಂ=ಯಾವನಿಮಿತ್ತದಿಂದ, ಕಾದಿರ್ದಂ=ಕಾದುಕೊಂಡಿದ್ದನು, ಎಂದೊಡೆ=ಅಂದರೆ, ಚಂದ್ರಧ್ವಜಂ=ಚಂದ್ರಧ್ವಜನೆಂಬ ರಾಜನು, ಚಂದ್ರಪುರಮಂ=ಚಂದ್ರನಾಮಕವಾದ ಪಟ್ಟಣವನ್ನು, ಆಳ್ವಂ=ರಕ್ಷಿಸುವನು, ಮನಸ್ವಿನಿಯೆಂಬಳ್=ಮನಸ್ವಿನಿಯೆಂಬ ಹೆಸರುಳ್ಳವಳು, ಆತನ=ಅವನ, ಅರಸಿ=ರಾಣಿಯು, ಆಕೆಗೆ=ಅವಳಲ್ಲಿ, ಪುಟ್ಟಿದ=ಜನಿಸಿದ, ಚಿತ್ರೋತ್ಸವೆಯೆಂಬ ಬಾಲಿಕೆಯುಂ=ಮಗಳುಂ, ಆ ನೃಪನ=ಆ ರಾಜನಾದ ಚಂದ್ರಧ್ವಜರಾಯನ, ಪುರೋಹಿತನ, ಮಗನಪ್ಪ=ಪುತ್ರನಾಗಿರುವ, ಕಪಿಲನೆಂಬ ಬಾಲಕನುಂ=ಮಗನೂ,

೬. ಟೀ|| ಒಡನಾಡಿಯುಂ=ಜೊತೆಯಲ್ಲಿ ಆಟವನ್ನಾಡಿಯೂ, ಒಡನೋದಿಯುಂ=ಜೊತೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿಯೂ, ಒಡವಳೆದುಂ=ಜತೆಯಲ್ಲಿ ಪೋಷಿಸಲ್ಪಡುತ್ತ, ಪಲವುಕಾಲದಿಂದೆ=ಅನೇಕದಿವಸಗಳಿಂದ, ಅನುಬಂಧಂ=ಸಂಬಂಧವು, ಕಿಡದೆ=ತಪ್ಪದೆ, ಒಡಲ್=ದೇಹವು, ಎರಡು, ಅಸು=ಪ್ರಾಣವು, ಒಂದು, ಎನೆ=ಎಂಬಂತೆ, ಗೆಡೆವಕ್ಕಿಗಳಂತೆ=ಚಕ್ರವಾಕಪಕ್ಷಿಗಳಹಾಗೆ, ಕೂಡಿ=ಸೇರಿಕೊಂಡು, ನಲಿಯುತ್ತಿರ್ದರ್=ಸಂತೋಷಪಡುತ್ತಿದ್ದರು.

ಈ ದ್ವೇಷಕ್ಕೆ ಕಾರಣವೇನೆಂದರೆ—

ತಾ|| ಚಂದ್ರಪುರದಲ್ಲಿ ಚಂದ್ರಧ್ವಜನೆಂಬ ಪ್ರಭುವಿದ್ದನು, ಅವನಿಗೆ ಮನಸ್ವಿನಿಯೆಂಬ ಪತ್ನಿಯಿದ್ದಳು. ಆತನಿಗೆ ಚಿತ್ರೋತ್ಸವೆಯೆಂಬ ಪುತ್ರಿಯೊಬ್ಬಳು ಇದ್ದಳು. ರಾಜಪುರೋಹಿತನಿಗೆ ಕಪಿಲನೆಂಬ ಮಗನಿದ್ದನು. ರಾಜಪುತ್ರಿ

ಅಂತವರೋರೊರ್ವರಂ ಮಚ್ಚಿ—

ಮ|| ಪದೆಪಿಂ ಚುಂಬಿಸೆದುಮ್ಮಳಂ ಬಯಸಿದಾಗಳ್ಮನ್ಮಥಕ್ರೀಡೆ ಕೂ |
ಡದಲಿಲ್ ಕಳ್ದೊಡಗೂಡು1ವಂಜಿಕೆ ಮನಕ್ಕುದ್ವೇಗಮಂ ಮಾಡೆ ನೋ||
ಡದೆ ತಾಯ್ತಂದೆಯಗಲ್ಕೆಯಂ ಮದನರಾಗೋನ್ಮಾದದಿಂ ಮುಂದುಗಾ
ಣದೆ ಮುಗ್ಧಾಶಯರಾ ವಿದಗ್ಧಪುರಮಂ ಪೊಕ್ಕಿರ್ದರಾಯಿರ್ವರುಂ ||೭||

ಯೂ ಪುರೋಹಿತ ಪುತ್ರನೂ ಜತೆಯಲ್ಲಿ ಆಡುತ್ತಾ ಜತೆಯಲ್ಲಿ ಓದುತ್ತಾ ಬಹಳ ಅಚ್ಚುಮೆಚ್ಚಾಗಿ ಚಕ್ರವಾಕ ಪಕ್ಷಿಗಳಂತಿದ್ದರು.

೭. ಟೀ|| ಅವರ್=ಚಿತ್ರೋತ್ಸವೆಯೂ, ಕಪಿಲನೂ, ಓರೊರ್ವರಂ=ಒಬ್ಬರೊಬ್ಬರನ್ನು, ಮಚ್ಚಿ=ಪ್ರೀತಿಸಿ, ಪದಪಿಂ=ಸಂತೋಷದಿಂದ, ಚುಂಬಿಸದ=ಮುದ್ದಿಡದ, ಉಮ್ಮಳಂ=ದುಃಖವೂ, ಬಯಸಿದಾಗಳ್=ಅಪೇಕ್ಷಿಸಿದಾಗ, ಮನ್ಮಥಕ್ರೀಡೆ=ರತಿಯು, ಕೂಡದ=ಒದಗದುದರಿಂದುಂಟಾದ, ಅಳಲ್=ದುಃಖವೂ, ಕಳ್ದು=ಒಬ್ಬರಿಗೂ ಗೋಚರವಾಗದಂತೆ, ಒಡಗೂಡುವ=ಸೇರುವ, ಅಂಜಿಕೆ=ಭಯವೂ, ಮನಕ್ಕೆ=ಚಿತ್ತಕ್ಕೆ, ಉದ್ವೇಗಮಂ=ಬೇಸರವನ್ನು, ಮಾಡೆ=ಉಂಟುಮಾಡಲು, ತಾಯ್ತಂದೆಯ=ಮಾತಾಪಿತೃಗಳ, ಅಗಲ್ಕೆಯಂ=ವಿಯೋಗವನ್ನು, ನೋಡದೆ=ಯೋಚಿಸದೆ, (ಮದನರಾಗೋನ್ಮಾದದಿಂ) ಮದನ=ಮನ್ಮಥನಿಂದುಂಟಾದ, ರಾಗ=ಪ್ರೀತಿಯೆಂಬ, ಉನ್ಮಾದದಿಂ=ಹುಚ್ಚಿನಿಂದ, ಮುಂದುಗಾಣದೆ=ಮುಂದಾಗುವುದನ್ನು ತಿಳಿಯದೆ, ಮುಗ್ಧಾಶಯರ್=ಮೂಢ ಬುದ್ಧಿಯುಳ್ಳವರಾಗಿ, ಆಯಿರ್ವರುಂ=ಚಿತ್ರೋತ್ಸವೆಯೂ, ಕಪಿಲನೂ ಇಬ್ಬರೂ, ವಿದಗ್ಧಪುರಮಂ=ವಿದಗ್ಧವೆಂಬ ಪಟ್ಟಣವನ್ನು, ಪೊಕ್ಕು=ಪ್ರವೇಶಿಸಿ, ಇರ್ದರ್=ವಾಸಿಸಿದರು.

ತಾ|| ಮನಬಂದಂತೆ ರಮಿಸಿ ಸಂತೋಷವಾಗಿರಲು ಅವಕಾಶವಾಗುವದಿಲ್ಲವಲ್ಲಾ ಎಂಬ ಚಿಂತೆಯೊಂದು, ಕಾಣದಂತೆ ಕಾರ್ಯದಲ್ಲಿ ತೊಡಗಲು ದಿಗಿಲೊಂದು, ಇವು ಮನಸ್ಸಿಗೆ ಬೇಸರವನ್ನುಂಟುಮಾಡಲು ಆ ಇಬ್ಬರೂ ತಾಯಿತಂದೆಗಳನ್ನು ಬಿಟ್ಟುಹೋಗುವುದಕ್ಕೂ ಹಿಂಜರಿಯದೆ ವಿದಗ್ಧಪುರಕ್ಕೆ ಹೋದರು. ೭.

---

1 ವುಜ್ಜುಗ; ಖ. ಗ. ಘ. ವಂಜವೆ, ಚ.

ಕಂ|| ಅನಿತಿಂದ್ರಿಯ ಸುಖಮುಂ ಸ್ಪ |
ರ್ಶನ ಸುಖವೊಂದಱೊಳಡಂಗಿದತ್ತೆನೆ ನೃಪ ನಂ ||
ದನೆಯುಂ ದ್ವಿಜ ನಂದನನುಂ |
ಮನೋಜ ಸುಖರಸ ವಿಲೀನ ಮಾನಸರಿರ್ದರ್ ||೮||

ಅಂತಿರ್ಪುದುಮೊಂದುದಿವಸಂ ಪ್ರತಾಪಸಿಂಹನ ಮಗಂ ತತ್ಪುರಾಧಿಪತಿ—

ಚ|| ಕೊಡೆವಿಡಿದಂತೆ ಮಂಡಳಿಸೆ ಮೇಲೆ ಕಿರೀಟಮರೀಚಿ ಸುತ್ತಲುಂ |
ಕಡಿತಲೆಯಾಳ್ ಕಡಂಗಿಬರೆ ಮಾರ್ಗಮೊಡಂಬಡೆ ರಾಜಮಾರ್ಗದೊಳ್||
ನಡೆಯೆ ಹಯಂ ವಿಳಂಬಿತದೆ ಕುಂಡಳಮಂಡಿತನೇಂ ವಿಳಾಸಮಂ |
ಪಡೆದನೊ ಪದ್ಮರಾಗ ಮಣಿಕುಂಡಲ ಮಂಡಿತ ಗಂಡಮಂಡಲಂ ||೯||

---

೮. ಟೀ|| ಅನಿತಿಂದ್ರಿಯ ಸುಖಮುಂ=ಎಲ್ಲಾ ಇಂದ್ರಿಯಗಳ ಸುಖವೂ, ಸ್ಪರ್ಶನ ಸುಖವೊಂದರೊಳ್=ಆಲಿಂಗನ (ರತಿಸುಖ) ವೊಂದರಲ್ಲಿಯೇ, ಅಡಂಗಿದತ್ತು=ಅಡಕವಾಯಿತು, ಎನೆ=ಎಂಬಹಾಗೆ, ನೃಪನಂದನೆಯುಂ=ಚಿತ್ರೋತ್ಸವೆಯೂ, ದ್ವಿಜನಂದನನುಂ=ಕಪಿಲನೂ, ಇರ್ವರ್=ಇಬ್ಬರೂ, (ಮನೋಜ ಸುಖರಸವಿಲೀನ ಮಾನಸರ್) ಮನೋಜಸುಖ=ರತಿಸುಖವೆಂಬ, ರಸ=ರುಚಿಯಲ್ಲಿ, ವಿಲೀನ=ಅಡಗಿದ, ಮಾನಸರ್=ಮನಸ್ಸುಳ್ಳವರಾಗಿ, ಇರ್ದರ್=ಇದ್ದರು, ಅಂತು=ಹಾಗೆ, ಇರ್ಪುದುಂ=ಇರುತ್ತಿರಲು, ಒಂದು ದಿವಸಂ=ಒಂದು ದಿನದಲ್ಲಿ, (ತತ್ಪುರಾಧಿಪತಿ ಪ್ರತಾಪಸಿಂಹನ) ತತ್ಪುರ=ವಿದಗ್ಧಪಟ್ಟಣಕ್ಕೆ, ಅಧಿಪತಿ=ಒಡೆಯನಾದ, ಪ್ರತಾಪಸಿಂಹನ, ಮಗಂ=ಪುತ್ರನು.

ತಾ|| ಸ್ಪರ್ಶವೊಂದರಲ್ಲಿಯೇ ಸರ್ವೇಂದ್ರಿಯ ಸುಖವೂ ಅಡಕವಾಗಿದೆಯೋ ಎಂಬಂತೆ ಕಪಿಲ ಚಿತ್ರೋತ್ಸವೆಯರು ಮನಸಾರ ಸುಖಪಡುತ್ತಿದ್ದರು. ೮.

೯. ಟೀ|| ಕಿರೀಟಮರೀಚಿ=ಕಿರೀಟಕಾಂತಿಯು, ಮೇಲೆ=ತಲೆಯಮೇಲೆ, ಕೊಡೆವಿಡಿದಂತೆ=ಚತ್ರಿಹಿಡಿದಹಾಗೆ, ಮಂಡಳಿಸೆ=ವ್ಯಾಪಿಸಲು, ಸುತ್ತಲುಂ=ಸುತ್ತಲೂ, ಕಡಿತಲೆಯಾಳ್=ಬಿಚ್ಚುಕತ್ತಿಯನ್ನು ಹಿಡಿದ ಭಟರು, ಕಡಂಗಿ=ಉತ್ಸಾಹಗೊಂಡು, ಬರೆ=ಬರುತ್ತಿರಲು, ಮಾರ್ಗಂ=ದಾರಿಯು, ಒಡಂಬಡೆ=ಮನೋಹರವಾಗಿರಲು, (ಅನುಕೂಲವಾಗಿರಲು) ರಾಜಮಾರ್ಗದೊಳ್=ರಾಜಬೀದಿಯಲ್ಲಿ, ಹಯಂ=ಕುದುರೆಗಳು, (ಪದ್ಮರಾಗಮಣಿ ಕುಂಡಲ

ಅಂತು ಬರುತ್ತುಂ—

ಚ|| ಶರದದ ಚಂದ್ರನಂ ನಗೆವೊಗಂ ನಗೆ ಚಂದ್ರಮರೀಚಿಮಾಲೆಯಂ |
ತರಳಕಟಾಕ್ಷಮಾಲೆ ಗೆಲೆ ಬಂದು ಗೃಹಾಂಗಣದೊಳ್ ಲತಾ ತನೂ ||
ದರಿ ನಡೆನೋಡೆ ಕಂತು ನಡೆ ಪೂಡಿದ ಪೂಗಣೆಗೆತ್ತು ನಾಡೆ ಕಾ |
ತರತೆಯನಪ್ಪುಕೆಯ್ಯೆ ಬಗೆ ನೋಡಿದನಾಕೆಯನಾ ಕುಮಾರಕಂ ||೧೦||

ಮಂಡಿತಗಂಡಮಂಡಲಂ) ಪದ್ಮರಾಗಮಣಿ=ಕೆಂಪುಗಳ, ಕುಂಡಲ=ಕರ್ಣಾಭರಣಗಳಿಂದ, ಮಂಡಿತಂ=ಅಲಂಕರಿಸಲ್ಪಟ್ಟ, ಗಂಡಮಂಡಲಂ=ಕಪೋಲಪ್ರದೇಶವುಳ್ಳ, ಹಯಂ=ಕುದುರೆಗಳು, ವಿಲಂಬಿತದೆ=ಸಾವಕಾಶವಾದಗಮನದಿಂದ, ನಡೆಯೆ=ಹೋಗುತ್ತಿರಲು, ಕುಂಡಲಮಂಡಿತಂ=ಕುಂಡಲಮಂಡಿತನೆಂಬರಾಜಪುತ್ರನು, ಏಂವಿಲಾಸಮಂ=ಎಂಥಾಸೊಗಸನ್ನು, ಪಡೆದನೊ=ಹೊಂದಿದನೋ.

ತಾ|| ಒಂದು ದಿನ ಆ ಪಟ್ಟಣದ ರಾಜನಾದ ಪ್ರತಾಪಸಿಂಹನ ಮಗನಾದ ಕುಂಡಲಮಂಡಿತನು ಕಿರೀಟಧಾರಿಯಾಗಿ ಅಂಗರಕ್ಷಕ ಸಮೇತನಾಗಿ ಶೃಂಗಾರಮಾಡಿ ಕುದುರೆಯನ್ನೇರಿಕೊಂಡು ಬರುತ್ತಿದ್ದನು. ೯.

ಗದ್ಯ || ಅಂತು=ಹಾಗೆ, ಬರುತ್ತುಂ=ಬರುತ್ತಾ,

೧೦. ಟೀ|| ನಗೆವೊಗಂ=ಆತನ ಹಸನ್ಮುಖವು, ಶರದದ=ಶರತ್ಕಾಲದಲ್ಲಿರುವ, ಚಂದ್ರನಂ, ನಗೆ=ಹಾಸ್ಯಮಾಡುತ್ತಿರಲು, (ತರಳಕಟಾಕ್ಷಮಾಲೆ) ತರಳ=ಚಂಚಲವಾದ, ಕಟಾಕ್ಷ=ಕಡೆಗಣ್ಣೋಟದ, ಮಾಲೆ=ಪಂಕ್ತಿಯು, (ಚಂದ್ರಮರೀಚಿಮಾಲೆಯ) ಚಂದ್ರಮರೀಚಿ=ಚಂದ್ರಕಿರಣಗಳ, ಮಾಲೆಯಂ=ಮಾಲಿಕೆಯನ್ನು, ಗೆಲೆ=ಜಯಿಸುತ್ತಿರಲು, (ಲತಾತನೂದರಿ) ಲತಾ=ಬಳ್ಳಿಯಂತೆ, ತನು=ಕೃಶವಾದ, ಉದರಿ=ಹೊಟ್ಟೆಯುಳ್ಳ ಚಿತ್ರೋತ್ಸವೆಯು, ನಡೆ=ಚೆನ್ನಾಗಿ, ನೋಡೆ=ನೋಡುತ್ತಿರಲು, ಕಂತು=ಮನ್ಮಥನು ನಡೆ=ನಾಟಿಕೊಳ್ಳುವಹಾಗೆ, ಪೂಡಿದ=ಬಿಲ್ಲಿನಲ್ಲಿ ಜೋಡಿಸಿದ, ಪೂಗಣೆಗೆತ್ತು=ಪುಷ್ಪಬಾಣವೆಂದು ತಿಳಿದು, ನಡೆ=ಚೆನ್ನಾಗಿ, ನೋಡೆ=ನೋಡುತ್ತಿರಲು, ಬಗೆ=ಮನಸ್ಸು, ನಾಡೆ=ಸಂಪೂರ್ಣವಾಗಿ, ಕಾತುರತೆಯಂ=ಭಯವನ್ನು, ಅಪ್ಪುಕೆಯ್ಯೆ=ಹೊಂದುತ್ತಿರಲು; ಆ ಕುಮಾರಕಂ=ಆ ರಾಜಪುತ್ರನು, ಆಕೆಯಂ=ಚಿತ್ರೋತ್ಸವೆಯನ್ನು, ನೋಡಿದಂ, ಅಂತು=ಹಾಗೆ, ಆತಂ=ಅವನೂ, ಕಣ್ಸೋಲ್ತು=ಮೋಹಿಸಿನೋಡಿ, ದೂದವಿಯಂ=ದೂತಿಯನ್ನು, ಅಟ್ಟುವುದುಂ=ಕಳುಹಿಸಲು.

ಅಂತಾತಂ ಕಣ್ಪೋಲ್ತುನೋಡಿ ದೂದವಿಯನಟ್ಟುವುದುಂ—

ಚ|| ಬಗೆಯದೆ ತನ್ನ ಮುನ್ನಿನೊಲವಂ ನೆಲೆಯಿಂದೊಡಗೂಡಿ ಬಂದುದಂ |
ಬಗೆಯದೆ ಪಾಳಿಯಂ ಪಸುಗೆಯಂ ಗುಣಹಾನಿಯನಪ್ರಸಿದ್ಧಿಯಂ ||
ಬಗೆಯದೆ ಬಂದ ದೂದವಿಗೆ ಚಿತ್ತಮನೊಪ್ಪಿಸಿ ಕೂಟದಾಸೆಯಂ |
ಬಗೆದಳಿದಾವ ವಿಸ್ಮಯಮೊ ನಾರಿಗೆ ನಚ್ಚಿನ ಕಯ್ದು ಕೈತವಂ ||೧೧||

ತಾ|| ಹಾಗೆ ಬರುತ್ತಿದ್ದ ರಾಜಕುಮಾರನು ಈ ಚಿತ್ತೋತ್ಸವೆಯನ್ನು ನೋಡಿದನು. ತನ್ನ ದೂತಿಯನ್ನು ಅವಳಲ್ಲಿಗೆ ಕಳುಹಿಸಿದನು. ೧೦.

೧೧. ಟೀ|| (ಆ ಚಿತ್ತೋತ್ಸವೆಯು) ತನ್ನ, ಮುನ್ನಿನ=ಮೊದಲು ಕಪಿಲನಲ್ಲಿಟ್ಟಿದ್ದ ಒಲವಂ=ಅನುರಾಗವನ್ನು, ಬಗೆಯದೆ=ಯೋಚಿಸದೆ, ನೆಲೆಯಿಂದೆ=ಸ್ಥಿರತ್ವದಿಂದ, ಒಡಗೂಡಿ=ಸಹವಾಸಮಾಡಿ, ಬಂದುದಂ=ಬಂದಸಂಗತಿಯನ್ನು, ಬಗೆಯದೆ, ಪಾಳಿಯಂ=ರೀತಿಯನ್ನೂ, ಪಸುಗೆಯಂ=ಅಗಲಿಕೆಯನ್ನೂ, ಗುಣಹಾನಿಯಂ=ಒಳ್ಳೆತನದ ನಾಶವನ್ನೂ, ಅಪ್ರಸಿದ್ಧಿಯಂ=ಅಪಕೀರ್ತಿಯನ್ನೂ, ಬಗೆಯದೆ, ಬಂದ=ತನ್ನ ಸಮೀಪಕ್ಕೆ ಬಂದಂಥಾ, ದೂದವಿಗೆ=ದೂತಿಗೆ, ಚಿತ್ತಮಂ=ಮನಸ್ಸನ್ನು, ಒಪ್ಪಿಸಿ=ಸಮರ್ಪಣೆಮಾಡಿ (ವಶಳಾಗಿಯೆಂದು ತಾತ್ಪರ್ಯ), ಕೂಟದ=ಸುರತದ, ಆಸೆಯಂ=ಅಪೇಕ್ಷೆಯನ್ನು, ಬಗೆದಳ್=ಯೋಚಿಸಿದಳು, ಇದು=ಹೀಗೆಮಾಡಿದ್ದು, ಆವ ವಿಸ್ಮಯಮೊ=ಯಾವ ಆಶ್ಚರ್ಯವೋ ? ನಾರಿಗೆ=ಸ್ತ್ರೀಜಾತಿಗೆ ಕೈತವಂ=ಮೋಸವು, ನಚ್ಚಿನ=ನಂಬಿಕೆಯ, ಕಯ್ದು=ಆಯುಧವು.

ಗದ್ಯ|| ಅಂತು=ಹಾಗೆ, ಆ ಕುಮಾರಂ=ರಾಜಪುತ್ರನು, ಆಕೆಯಂ=ಆ ಚಿತ್ತೋತ್ಸವೆಯನ್ನು, ಬರಿಸಿ=ಬರಮಾಡಿ, ತನಗೆ, ಅರಸಿಮಾಡಿ=ಹೆಂಡತಿಮಾಡಿಕೊಂಡು ಕಪಿಲನಂ, ಮರುಳ್ಮಾಡಿ=ಹುಚ್ಚು ಹಿಡಿಸಿ, ಕಳೆವುದುಂ=ಬಿಡಲು, ಆತಂ=ಕಪಿಲನು, ಅದುವೆ=ಆ ಸಂಗತಿಯೇ, ನಿರ್ವೇಗಕಾರಣಂ=ವೈರಾಗ್ಯಕ್ಕೆ ನಿಮಿತ್ತವು, ಆಗೆ=ಆಗಲು, ಕೆಲವು ಕಾಲದಿಂ=ಸ್ವಲ್ಪದಿನದ ಮೇಲೆ, ಆರ್ಯಗುಪ್ತರೆಂಬ, ಆಚಾರ್ಯರ=ಗುರುಗಳ, ಸಮಕ್ಷದೊಳ್=ಹತ್ತಿರದಲ್ಲಿ (ಬಾಹ್ಯತಪೋ ರೂಪಮಂ) ಬಾಹ್ಯ=ಹೊರಗಣ, ತಪಃ=ತಪಸ್ಸಿನ, ರೂಪಮಂ=ವೇಷವನ್ನು, ತಳೆದು=ಧರಿಸಿ (ಕಪಟಸನ್ಯಾಸಿಯಾಗಿ ಯೆಂದು ತಾತ್ಪರ್ಯ).

ತಾ|| ತನ್ನ ಮುಂಚಿನ ಪ್ರೀತಿ ವಿಶ್ವಾಸಗಳೆಲ್ಲವನ್ನು ಮರೆದು ಗುಣಾವ

ಅಂತಾಕೆಯುನಾ ಕುಮಾರಂ ಬರಿಸಿ ತನಗರಸಿಮಾಡಿ ಕಪಿಳನಂ ಮರುಳ್ಮಾಡಿ ಕಳೆವುದುಮಾತನದುವೆ ನಿರ್ವೇಗಕಾರಣಮಾಗೆ ಕೆಲವುಕಾಲದಿನಾರ್ಯಗುಪ್ತರೆಂಬಾ ಚಾರ್ಯರ ಸಮಕ್ಷದೊಳ್ ಬಾಹ್ಯತಪೋರೂಪಮಂ ತಳೆದು—

ಕಂ|| ಆ ಸುದತಿ ನೆಲಸೆ ಚಿತ್ತ ನಿ |
ವಾಸದೊಳಾ ಕಪಿಳಮುನಿ ತಪಶ್ರೀ ತನುವಂ ||
ಬಾಸಣಿಸೆ 1ತೇದು ಪೊನ್ನಂ |
ಪೂಸಿದ ಕಬ್ಬೊನ್ನ ಪಾಪೆಯಂತೆವೊಲಿರ್ದಂ ||೧೨||

ಒಪ್ಪಿಸಿ ಮನಮಂ ಮಾನಿನಿ |
ಗೊಪ್ಪಿಸಿ ತನುವಂ ತಪಕ್ಕೆ ಮುನಿ ಮನಸಿಜನಿಂ ||
ಸೊಪ್ಪಾಗಿರ್ದೊರ್ಚವಡಿಯ |
ಕುಪ್ಪಸಮಂ ಪೋಲ್ತು ಪೊಱಗೆ ನೇರಿದನಾದಂ ||೧೩||

ಗುಣ ವಿಚಾರಮಾಡದೆ ದೂತಿಯಮಾತಿಗೆ ಮರುಳಾಗಿ ರಾಜಕುಮಾರನೊಡಗೂಡಲು ಸಮ್ಮತಿಸಿದಳು. ಹೀಗೆ ರಾಜಕುಮಾರನು ಚಿತ್ರೋತ್ಸವೆಯನ್ನು ತನ್ನ ರಾಣಿಯನ್ನಾಗಿ ಮಾಡಿಕೊಂಡು ಕಪಿಲನನ್ನು ಮರುಳುಗುಟ್ಟಲು ಅವನು ಆದೇ ಜಿಹಾಸೆಯಿಂದ ಆರ್ಯಗುಪ್ತಾಚಾರ್ಯರಲ್ಲಿ ತಪಸ್ಸುಮಾಡುವಂತೆ ನಟಿಸುತ್ತಾ.

೧೨. ಟೀ|| ಆಸುದತಿ=ಚಿತ್ರೋತ್ಸವೆಯು, ಚಿತ್ತನಿವಾಸದೊಳ್=ಮನಸ್ಸೆಂಬ ಮನೆಯಲ್ಲಿ, ನೆಲಸೆ=ನೆಲೆಗೊಳ್ಳಲು, ಆ ಕಪಿಲಮುನಿ, ತಪಶ್ರೀ=ತಪೋಲಕ್ಷ್ಮಿಯು, ತನುವಂ=ದೇಹವನ್ನು, ಬಾಸಣಿಸೆ=ಮುಚ್ಚಲು, (ಗುಟ್ಟು ಗೊತ್ತಾಗದಂತೆ ಮಾಡಲು ಎಂದು ತಾತ್ಪರ್ಯ) ಪೊನ್ನಂ=ಚಿನ್ನವನ್ನು, ತೇದು=ತೆಯ್ದು, ಪೂಸಿದ=ಲೇಪಿಸಿದ, ಕಬ್ಬೊನ್ನಪಾಪೆಯಂತೆವೊಲ್=ಕಬ್ಬಿಣದ ಗೊಂಬೆಯಹಾಗೆ, ಇರ್ದಂ=ಇದ್ದನು.

ತಾ|| ಮನಸ್ಸಿನಲ್ಲಿ ಆ ಚಿತ್ರೋತ್ಸವೆಯನ್ನು ಧ್ಯಾನಿಸುತ್ತಾ ಮೇಲ್ಗಡೆ ತಪಸ್ಸುಮಾಡುವನಂತಿದ್ದರೆ, ಕಬ್ಬಿಣದ ಬೊಂಬೆಯ ಮೇಲ್ಗಡೆ ಚಿನ್ನವನ್ನು ತೆಯ್ದು ಲೇಪಿಸಿದಂತೆ ಇದ್ದನು. ೧೨.

೧೩. ಟೀ|| ಮುನಿ=ಸನ್ಯಾಸಿಯಾದ ಕಪಿಲನು, ಮನವಂ=ಮನಸ್ಸನ್ನು, ಮಾನಿನಿಗೆ=ಚಿತ್ರೋತ್ಸವೆಗೆ, ಒಪ್ಪಿಸಿ=ಕೊಟ್ಟು, ತನುವಂ=ದೇಹವ

---

1 ತೆಗೆದು ಕ, ಖ, ಗ. ಘ,

ಮುನಿ ನಡೆದಾತಪದೊಳ್ ಜೀ |
ವನಮಂ ತವೆ ಪೀರ್ದು ದೇವಗತಿ ಸಮನಿಸೆ ಮು ||
ನ್ನಿನ ಪಗೆಯಂ ಕುಂಡಲನಂ |
ನೆನೆದವಧಿಯಿನಳವಿಗಳಿದ ಮುಳಿಸಂ ತಳೆದಂ ||೧೪||

ಆತಂ ನಿಜವಿರೋಧಿಯಪ್ಪ ಕುಂಡಲಮಂಡಿತಂ ಪೆಱತೊಂದು ಪೆಣ್ಗೂಸುವೆರಸು ವಿದೇಹಿಯ ಗರ್ಭದೊಳ್ ಬಳೆವುದಂ ತಿಳಿದು—

ನ್ನು, ತಪಕ್ಕೆ=ತಪಸ್ಸಿಗೆ ಒಪ್ಪಿಸಿ, ಮನಸಿಜನಿಂ=ಮನ್ಮಥನಿಂದ, ಸೊಪ್ಪಾಗಿರ್ದು=ನಿಸ್ಸಾರನಾಗಿದ್ದು, ಒಚ್ಚರವಡಿಯ=ಒಂದು ಪದರದ, ಕುಪ್ಪಸವಂ=ಅಂಗಿಯನ್ನು, ಪೋಲ್ತು=ಹೋಲಿಕೆಯಾಗುತ್ತಾ. ಪೊರಗೆ=ಹೊರಗೆ, ನೇರಿದಂ=ಋಜುವಾದವನು, ಆದಂ=ಆದನು.

ತಾ|| ಮನಸ್ಸಿನಲ್ಲಿ ಸ್ತ್ರೀಚಿಂತೆಯುಳ್ಳವನಾಗಿ ಮೇಲೆ ಸನ್ಯಾಸಿವೇಷವನ್ನು ಧರಿಸಿದ ಕಪಿಲನು ಒಳಗೆ ಕೊಳೆಯುಳ್ಳದ್ದಾದರೂ ಮೇಲ್ಗಡೆ ನಿರ್ಮಲವಾಗಿ ಕಾಣುವ ಒಂಟಿ ಪದರದ ಅಂಗಿಯಂತಿದ್ದನು.

೧೪. ಟೀ|| ಮುನಿ=ಕಪಿಲನು, ಆತಪದೊಳ್=ಬಿಸಿಲಿನಲ್ಲಿ, ನಡೆದು=ಸಂಚರಿಸಿ, ಜೀವನಮಂ=ನೀರನ್ನು, ಪೀರ್ದು=ಕುಡಿದು, ದೇವಗತಿ=ಮರಣವು, ಸಮನಿಸೆ=ಪ್ರಾಪ್ತವಾಗಲು, ಅವಧಿಯಿಂ=ಗೆಡುವಿನಿಂದ, ಕುಂಡಲನಂ=ಕುಂಡಲಮಂಡಿತನನ್ನು, ನೆನೆದು=ಸ್ಮರಿಸಿ, ಅಳವಿಗಳಿದ=ಅಳತೆಮೀರಿದ, ಮುಳಿಸಂ=ಕೋಪವನ್ನು, ತಳೆದಂ=ಧರಿಸಿದನು, ಆತಂ=ಕಪಿಲನು, ನಿಜವಿರೋಧಿಯಪ್ಪ=ತನಗೆ ಶತ್ರುವಾದ, ಕುಂಡಲ ಮಂಡಿತಂ=ಪೆರತೊಂದು ಪೆಣ್ಗೂಸುವೆರಸು=ಮತ್ತೊಂದು ಹೆಣ್ಣುಮಗುವಿನ ಕೂಡ, ವಿದೇಹಿಯ=ಜನಕಪತ್ನಿಯ, ಗರ್ಭದೊಳ್=ಬಸುರಿನಲ್ಲಿ, ಬಳೆವುದಂ=ವೃದ್ಧಿಹೊಂದುವ ಸಂಗತಿಯನ್ನು, ತಿಳಿದು.

ತಾ || ಕಪಿಲನು ಬಿಸಿಲಿನಲ್ಲಿ ಅಲೆದು ನೀರು ಕುಡಿದು ಅವಸಾನವೊದಗಲು ಗಡುವಿನಿಂದ ಕುಂಡಲಮಂಡಿತನನ್ನು ಸ್ಮರಿಸಿ ಮಿತಿಮೀರಿ ಕೋಪಾಕ್ರಾಂತನಾದನು. ಹೀಗೆ ತನ್ನ ಹಗೆಯಾದ ಕುಂಡಲಮಂಡಿತನು ಇನ್ನೊಂದು ಹೆಣ್ಣುಮಗು ಸಮೇತ ವಿದೇಹಿಯ ಗರ್ಭದಲ್ಲಿ ಬೆಳೆಯುತ್ತಿರಲು. ೧೪.

ಕಂ|| ಗರ್ಭದ ಪೆಣ್ಗೂಸಿಂಗಂ |
ಗರ್ಭಿಣಿಗಂ ಬಾಧೆ ಪಿಂಗೆ ಪೆತ್ತಾಗಡೆ ಗ ||
ರ್ಭಾರ್ಭಕನನುಯ್ವೆನೆಂಬೀ |
ದುರ್ಭಾವನೆಯಿಂ ವಿದೇಹಿಯಂ ಕಾದಿರ್ದಂ ||೧೫||

ಮ|| ಹರಿದಿಕ್ಕಾಂತೆಗೆ ಚಾರು ಚಂದ್ರಕಳೆಯುಂ ಚಂಡಾಂಶುವುಂ ಪುಟ್ಟುವಂ|
ತಿರೆ ಭೂವಲ್ಲಭ ಚಿತ್ತವಲ್ಲಭೆಗೆ ಪುತ್ರೀಪುತ್ರರೊಂದಾಗಿ ರಾ ||
ಗ ರಸಂ ಕೈಮಿಗೆ ಪುಟ್ಟೆ ಪೂರ್ವಭವ ಬದ್ಧಕ್ರೋಧದಿಂ ಬಾಲನಂ |
ಸುರ[1]ನುರ್ವಿಂ ಪಿಡಿದುಯ್ದನುಯ್ವತೆಱದಿಂ ಸ್ವರ್ಭಾನು ಬಾಲಾರ್ಕನಂ ||

೧೫. ಟೀ|| ಗರ್ಭದ=ಹೊಟ್ಟೆಯಲ್ಲಿರುವ, ಪೆಣ್ಗೂಸಿಂಗಂ=ಹೆಣ್ಣು ಕೂಸಿಗೂ, ಗರ್ಭಿಣಿಗಂ=ಬಸುರಿಯಾದವಳಿಗೂ, ಬಾಧೆ=ಬೇನೆಯು, ಪಿಂಗೆ=ನಿವೃತ್ತಿಯಾಗಲು, ಪೆತ್ತಾಗಡೆ=ಹೆತ್ತಕೂಡಲೆ, ಗರ್ಭಾರ್ಭಕನಂ=ಹೊಟ್ಟೆಯೊಳಗಿರುವ ಮಗುವನ್ನು, ಉಯ್ವೆಂ=ತೆಗೆದುಕೊಂಡು ಹೋಗುವೆನು ಎಂಬ, ಈ ದುರ್ಭಾವನೆಯಿಂ=ಕೆಟ್ಟಯೋಚನೆಯಿಂದ, ವಿದೇಹಿಯಂ, ಕಾದಿರ್ದಂ=ಕಾದುಕೊಂಡಿದ್ದನು.

ತಾ|| ಹೊಟ್ಟೆಯಲ್ಲಿದ್ದ ಹೆಣ್ಣುಮಗುವಿಗೂ, ಗರ್ಭಿಣಿಗೂ ಬಾಧೆನಿವೃತ್ತಿಯಾಗುತ್ತಲು ಹೆರಿಗೆಯಾದ ಕೂಡಲೆ ಆ ಗಂಡುಮಗುವನ್ನು ಕದ್ದೊಯ್ದುಬಿಡಬೇಕೆಂಬ ದುರಭಿಪ್ರಾಯದಿಂದ ಕಪಿಲನು ಕಾದಿರ್ದನು. ೧೫.

೧೬. ಟೀ|| (ಹರದಿಕ್ಕಾಂತೆಗೆ) ಹರಿದಿಕ್=ಇಂದ್ರದಿಕ್ಕೆಂಬ, ಕಾಂತೆಗೆ=ಸ್ತ್ರೀಗೆ, ಚಾರು=ಮನೋಹರವಾದ, ಚಂದ್ರಕಳೆಯುಂ=ಚಂದ್ರನಕಳೆಯೂ, ಚಂಡಾಂಶುವುಂ=ಸೂರ್ಯನೂ, ಪುಟ್ಟುವಂತಿರೆ=ಹುಟ್ಟುವಹಾಗೆ, (ಭೂವಲ್ಲಭ ಚಿತ್ತವಲ್ಲಭೆಗೆ) ಭೂವಲ್ಲಭ=ಜನಕರಾಜನ, ಚಿತ್ತವಲ್ಲಭೆಗೆ=ಹೆಂಡತಿಗೆ, ಪುತ್ರೀ ಪುತ್ರರ್=ಮಗಳೂ ಮಗನೂ, ಒಂದಾಗಿ=ಸೇರಿಕೊಂಡು, ರಾಗರಸಂ=ಪ್ರೀತಿರಸವು, ಕೈಮಿಗೆ ಪುಟ್ಟೆ=ಸಂಪೂರ್ಣವಾಗಿ ಉದಯಿಸಿ, (ಪೂರ್ವಭವಬದ್ಧ ಕ್ರೋಧದಿಂ) ಪೂರ್ವಭವ=ಹಿಂದಣಜನ್ಮದಲ್ಲಿ, ಬದ್ಧ=ಕಟ್ಟಲ್ಪಟ್ಟ, ಕ್ರೋಧದಿಂ=ಕೋಪದಿಂದ, ಬಾಲನಂ=ಶಿಶುವನ್ನು, ಸುರಂ=ಕಪಿಲನು, ಉರ್ವಿಂ=ಉಬ್ಬಿನಿಂದ, ಪಿಡಿದು=ಹಿಡಿದುಕೊಂಡು, ಸ್ವರ್ಭಾನು=ರಾಹುವು, ಬಾಲಾ

1 ನೊರ್ವಂ, ಕ, ಖ, ಗ, ಘ, ಚ.

ಅಂತು ನೆಗೆದು ಗಗನಮಾರ್ಗದೊಳ್ ಪೋಗುತ್ತುಂ—

ಚ|| ಒಗೆವೆನೊ ಬೀಸಿ ಪಾಸರೆಯೊಳಬ್ಧಿವೆನೋ ಕಡಲೊಳ್ ಕರುಳ್ಗಳಂ |
ತೆಗೆವೆನೊ ಕುತ್ತಿ ಕತ್ತಿಗೆಯೊಳಿಕ್ಕುವೆನೋ ವಿಪಿನಾಗ್ನಿಯೊಳ್ಕರು ||
ತ್ತುಗಿವೆನೊ ಕೂಡೆ ಮೆಯ್ದೊವಲನಲ್ಲದೊಡೆನ್ನಳಲಾರದೆಂದು ದಿ |
ಟ್ಟಿಗಳೊಳೆ ನುಂಗುವಂತೆ ನಡೆನೋಡಿದನಾ ಶಿಶುವಂ ನಿಶಾಚರಂ ||೧೭||

ರ್ಜನಂ=ಹುಟ್ಟುವ ಸೂರ್ಯನನ್ನು, ಉಯ್ವತೆರದಿಂ=ತೆಗೆದುಕೊಂಡು ಹೋಗುವ ರೀತಿಯಿಂದ, ಉಯ್ದಂ=ಕೊಂಡುಪೋದನು

ತಾ|| ಪ್ರಾಚೀದಿಗ್ದೇವತೆಗೆ ಚಂದ್ರಸೂರ್ಯರು ಹುಟ್ಟಿದಂತೆ ರಾಜಪತ್ನಿಯ ಗರ್ಭದಲ್ಲಿ ಗಂಡು ಹೆಣ್ಣು ಕೂಸುಗಳು ಜನಿಸಲು ಜನ್ಮಾಂತರದ ದ್ವೇಷದಿಂದ ಕಪಿಲನು ಆ ಗಂಡುಮಗುವನ್ನು ಹಿಡಿದು ರಾಹುವು ಬಾಲಸೂರ್ಯನನ್ನು ಆಕ್ರಮಿಸುವಂತೆ ತೆಗೆದೊಯ್ದನು. ೧೬.

ಗದ್ಯ|| ಅಂತು=ಹಾಗೆ, ನೆಗೆದು=ಹಾರಿ, ಗಗನಮಾರ್ಗದೊಳ್=ಆಕಾಶದಲ್ಲಿ, ಪೋಗುತ್ತಂ=ಹೋಗುತ್ತಾ

೧೭. ಟೀ|| ಬೀಸಿ, ಪಾಸರೆಯೊಳ್=ಬಂಡೆಯಮೇಲೆ, ಒಗೆವೆನೋ=ಬಡಿಯಲೇ? ಕಡಲೊಳ್=ಸಮುದ್ರದಲ್ಲಿ, ಅದ್ದುವೆನೋ=ಮುಳುಗಿಸುವೆನೋ? ಕರುಳ್ಗಳಂ=ಕರುಳುಗಳನ್ನು, ತೆಗೆವೆನೊ=ಎಳೆಯುವೆನೋ? ಕತ್ತಿಗೆಯೊಳ್=ಕತ್ತಿಯಲ್ಲಿ, ಕುತ್ತಿ=ಹೊಡೆದು, ಇಕ್ಕುವೆನೋ=ಕೊಲ್ಲುವೆನೋ? ಕರುತ್ತು=ಪೌರುಷಗೊಂಡು, ವಿಪಿನಾಗ್ನಿಯೊಳ್=ಕಾಡುಕಿಚ್ಚಿನಲ್ಲಿ, ಕೂಡೆ=ಜಾಗ್ರತೆಯಾಗಿ, ಮೆಯ್ದೊವಲಂ=ದೇಹದ ಚರ್ಮವನ್ನು, ಉಗಿವೆನೊ=ಸುಲಿಯುವೆನೋ. ಅಲ್ಲದೊಡೆ=ಹೀಗೆ ಮಾಡದಿದ್ದರೆ, ಎನ್ನ=ನನ್ನ, ಅಳಲ್=ದುಃಖವೆಂಬ ಬೆಂಕಿಯು, ಆರದು=ಆರಿಹೋಗುವುದಿಲ್ಲ, ಎಂದು=ಎಂಬದಾಗಿ, ದಿಟ್ಟಿಗಳೊಳೆ=ಕಣ್ಣುಗಳಿಂದಲೇ ನುಂಗುವಂತೆ, ಆ ಶಿಶುವಂ=ಆ ಕೂಸನ್ನು ಆ ನಿಶಾಚರಂ=ಆ ರಾಕ್ಷಸತ್ವವನ್ನು ಪಡೆದ ಕಪಿಲನು, ನಡೆನೋಡಿದಂ=ಚೆನ್ನಾಗಿ ನೋಡಿದನು.

ತಾ|| ಹಾಗೆ ಎತ್ತಿಕೊಂಡು ಹೋಗುತ್ತಾ ಬಂಡೆಯಮೇಲೆ ದೊಪ್ಪನೆ ಬಡಿಯಲೇ, ಸಮುದ್ರಕ್ಕೆ ಬಿಸಾಡಲೇ, ಕರುಳು ಬಗೆಯಲೇ, ಕತ್ತಿಯಿಂದ ಇರಿಯಲೇ, ಕಾಡುಕಿಚ್ಚಿಗೆಸೆಯಲೇ, ಚರ್ಮವನ್ನು ಸುಲಿದುಬಿಡಲೇ ಹಾ ಏನು

ಅಂತು ನೋಡಲೊಡಮರ್ಭಕನ ಪೂರ್ವಭವದಣುವ್ರತ ಸಾಮರ್ಥ್ಯ ದೊಳಂ ನಿಜಮಹಾವ್ರತ ಸಂಸ್ಕಾರದೊಳಂ—

ಕಂ|| ಫಣಿ ಗರು[1]ಡಾಂಕದ ಪಚ್ಚೆಯ |
ಮಣಿಯಂ ಕಂಡಂತೆ ಮಣಿಯೆ ಶಿಶುವದನ ನಿರೀ ||
ಕ್ಷಣದಿಂದಾಕ್ಷಣದೊಳ್ ದಾ |
ರುಣಭಾವಂ ದೇವನುಪಶಮಕ್ಕೆಡೆಯಾದಂ ||೧೮||

ಮಾಡಿದರೆ ನನ್ನ ಕ್ರೋಧ ಶಮನವಾದೀತು ಎನ್ನುತ್ತಾ ನೋಟದಿಂದಲೇ ನುಂಗಿಬಿಡುವನಂತೆ ನೋಡಿದನು. ೧೭.

ಗದ್ಯ|| ಅಂತು=ಹಾಗೆ, ನೋಡಲೊಡಂ=ನೋಡಿದಕೂಡಲೆ, ಅರ್ಭಕನ=ಕೂಸಿನ, ಪೂರ್ವಭವದ=ಹಿಂದಣ ಜನ್ಮದ, ಅಣುವ್ರತಸಾಮರ್ಥ್ಯದೊಳಂ=ಅಣುವ್ರತದ ಶಕ್ತಿಯಿಂದಲೂ (ನಿಜಮಹಾವ್ರತಸಂಸ್ಕಾರದೊಳಂ) ನಿಜ=ತನ್ನ, ಮಹಾವ್ರತ=ಮಹಾವ್ರತದ, ಸಂಸ್ಕಾರದೊಳಂ=ಭಾವನೆಯಿಂದಲೂ.

೧೮. ಟೀ|| ಫಣಿ=ಸರ್ಪವು, ಗರುಡಾಂಕದ=ಗರುಡಪಕ್ಷಿಯ ಗುರುತ್ತುಳ್ಳ, ಪಚ್ಚೆಯ ಮಣಿಯಂ=ಪಚ್ಚೆಯನ್ನು, ಕಂಡಂತೆ=ನೋಡಿದಹಾಗೆ, ಮಣಿಯೆ=ತಗ್ಗಲಾಗಿ, ಶಿಶು=ಮಗುವಿನ, ವದನ=ಮುಖವನ್ನು, ನಿರೀಕ್ಷಣದಿಂದೆ=ನೋಟದಿಂದ, ಆಕ್ಷಣದೊಳ್=ಆ ನಿಮಿಷದಲ್ಲಿ, ದಾರುಣಭಾವಂ=ಕ್ರೂರತ್ವವುಳ್ಳ, ದೇವಂ=ದೇವಗತಿಯನ್ನು ಪಡೆದಿರುವ ಕಪಿಲನು, ಉಪಶಮಕ್ಕೆ=ಶಾಂತಿಗೆ, ಎಡೆಯಾದಂ=ಆಸ್ಪದನಾದನು.

ತಾ|| ಹಾಗೆ ನೋಡುವಲ್ಲಿ ಮಗುವಿನ ಜನ್ಮಾಂತರದ ಅಣುವ್ರತವು ಹಿಮೆಯಿಂದಲೂ, ಮಹಾವ್ರತದ ಸಂಸ್ಕಾರದಿಂದಲೂ ಸರ್ಪವು ಗರುಡಪಚ್ಚೆಯ ಮಣಿಯನ್ನು ಕಂಡು ಬೆಚ್ಚುವಂತೆ ಕುಗ್ಗಿ ಕ್ರೌರ್ಯವನ್ನು ಹೊಂದಿದ್ದ ಅವನು ಮಗುವಿನ ಮುಖವನ್ನು ನೋಡಿದುದರಿಂದಲೇ ಶಾಂತತೆಯನ್ನು ಹೊಂದಿದನು. ೧೮.

1 ಡಾಂಡದ, ಚ, ; ಡಾಂಗದ, ಕ, ಖ, ಗ, ಘ.

ಒಡಲೊಳಗುಡಿದ ಸರಲ್ ಪೊಱಮ |
ಮಡುವುದಯಸ್ಕಾಂತ ಸನ್ನಿಧಾನದೊಳೆಂತಂ ||
ತೊಡಲಿಂ ಪೋದುದು ಮುನಿಸಿನ |
ಪೊಡವುರ್ಗ ನಕ್ತಂಚರಂಗೆ ಶಿಶುಸನ್ನಿಧಿಯೊಳ್ ||೧೯||

ಅಂತುಪಶಮ ಭಾವಮುಂ ಪಾಪಭೀರುತ್ವಮುಂ ತನಗೆ ತೊಟ್ಟನೆ ಪುಟ್ಟೆ ತನ್ನ ಕರ್ಣಕುಂಡಲಮಂ ಬಾಲಕನ ಕರ್ಣಯುಗಳಂಗಳೊಳಮರ್ಚಿ ಪರ್ಣಲಘುವಿದ್ಯೆಯಿಂ ನೀಡಾಡಿ ಪೋಪುದುಂ—

---

೧೯. ಟೀ|| ಒಡಲೊಳಗೆ=ಹೊಟ್ಟೆಯಲ್ಲಿ, ಉಡಿದ=ಮುರಿದ, ಸರಲ್=ಬಾಣವು, ಅಯಸ್ಕಾಂತ=ಕಬ್ಬಿಣವನ್ನು ಹಿಡಿಯುವ ಶಿಲೆಯ ಸನ್ನಿಧಾನದೊಳ್=ಸಮೀಪದಲ್ಲಿ, ಎಂತು=ಹೇಗೆ ಪೊಱಮಡುವುದು=ಹೊರಕ್ಕೆ ಹೊರಡುವದೋ, ಅಂತೆ=ಹಾಗೆ, ನಕ್ತಂಚರಂಗೆ=ರಾಕ್ಷಸತ್ವವನ್ನು ಹೊಂದಿರುವ ಕಪಿಲನಿಗೆ, ಶಿಶುಸನ್ನಿಧಿಯೊಳ್=ಮಗುವಿನ ಸಮೀಪದಲ್ಲಿ, ಮುನಿಸಿನ=ಕೋಪದ, ಪೊಡವುರ್ಗ=ಆಧಿಕ್ಯವು, ಒಡಲಿಂ=ದೇಹದಿಂದ, ಪೋದುದು=ಹೋಯಿತು.

ತಾ|| ಶರೀರದಲ್ಲಿ ಮುರಿದುಕೊಂಡ ಬಾಣವು ಸೂಜಿಗಲ್ಲಿನಿಂದ ಹೊರಕ್ಕೆ ಬರುವಂತೆ ಮಗುವಿನ ಸನ್ನಿಧಿಯಲ್ಲಿ ಆ ರಾಕ್ಷಸತ್ವವನ್ನಾಂತಿದ್ದ ಕಪಿಲನಿಗೆ ಕೋಪಾಧಿಕ್ಯವು ನಿರ್ಮೂಲವಾಯಿತು. ೧೯,

ಗದ್ಯ|| ಅಂತು=ಹಾಗೆ, ತನಗೆ, ಉಪಶಮಭಾವಮುಂ=ಶಾಂತಿಗುಣವೂ, ಪಾಪಭೀರುತ್ವಮುಂ=ಪಾಪಭೀತಿಯೂ, ತೊಟ್ಟನೆ=ಬೇಗ, ಪುಟ್ಟೆ=ಪುಟ್ಟಲಾಗಿ, ಕರ್ಣಕುಂಡಲಮಂ=ಕರ್ಣಾಭರಣವನ್ನು, ಬಾಲಕನ=ಜನ್ಮಾಂತರದ ಬ್ರಾಹ್ಮಣಪುತ್ರನಾದ ಕಪಿಲನ, ಕರ್ಣಯುಗಳಂಗಳೊಳ್=ಎರಡು ಕಿವಿಗಳಲ್ಲಿ, ಅಮರ್ಚಿ=ಸೇರಿಸಿ, ಪರ್ಣಲಘುವಿದ್ಯೆಯಿಂ=ಮರದೆಲೆ ಲಘುವಾಗುವಂತೆ ಮಾಡುವ ಮಂತ್ರದಿಂದ, ಈಡಾಡಿ=ಬಿಸಾಡಿ, ಪೋಪುದುಂ=ಹೋಗಲಾಗಿ,

ಚ|| ತನುರುಚಿ ಕರ್ಣಕುಂಡಲಮರೀಚಿ ವಿಯತ್ತಳಮೆಲ್ಲಮಾ ಪಳ |
ಚ್ಛನೆ ಬೆಳಪಂತು ಪರ್ಣಲಘುವಿದ್ಯೆಯೊಳೊಯ್ಯನೆ ಬಂದು ಖೇಚರೇಂ ||
ದ್ರನ ಮೃದುತಲ್ಪದೊಳ್ ಸುರ ಕುಮಾರಕನಂದುಪಪಾತ ತಲ್ಪದೊಳ್ |
ಜನಿಯಿಸಿದಂತೆ ಕಣ್ಗೆ ಪಡೆದಂ ಶಿಶು ನಿರ್ಭರ ಹರ್ಷ ಭಾರಮಂ ||೨೦||

ಅಂತಾ ಶಿಶುವಂ ದಕ್ಷಿಣಶ್ರೇಣಿಯ ರಥನೂಪುರಚಕ್ರವಾಳ ಪುರಮ ನಾಳ್ವಿಂದುಗತಿ ವಿಯಚ್ಚರೇಂದ್ರನಂದಿನ ಸೂಳಿಗ್ಗೆವಂದ ಪುಷ್ಪವತಿ ವೆಸರ ಮಹಾದೇವಿ ಫಲವತಿಯಾದಳೆನಿಸಿ ಕೊಟ್ಟು ಕುಂಡಲ ಪ್ರಭಾ ಮಂಡಲ ವಿಳಾಸಮಂ ತಳೆದನಪ್ಪುದಱಿಂ ಪ್ರಭಾಮಂಡಲನೆಂದು ಪೆಸರನಿಟ್ಟನನ್ನೆಗ ಮಿತ್ತಲ್—

೨೦. ಟೀ|| (ತನುರುಚಿ) ತನು=ದೇಹದ, ರುಚಿ=ಕಾಂತಿಯೂ, ಕರ್ಣಕುಂಡಲಮರೀಚಿ=ಕರ್ಣಾಭರಣಗಳಕಾಂತಿಯು, ಆವಿಯತ್ತಳಮೆಲ್ಲಂ=ಆಕಾಶವೆಲ್ಲವೂ, ಪಳಚ್ಛನೆ=ಪ್ರಕಾಶವಾಗಿ, ಬೆಳಪಂತು=ಬೆಳಗುವಹಾಗೆ, ಸುರಕುಮಾರಕಂ=ದೇವಪುತ್ರನು, ಪರ್ಣಲಘುವಿದ್ಯೆಯೊಳ್=ಪರ್ಣ ಲಘುವಿದ್ಯೆಯಿಂದ, ಒಯ್ಯನೆ=ಮೆಲ್ಲಗೆ, ಬಂದು, ಖೇಚರೇಂದ್ರನ=ಗಂಧರ್ವಾಧೀಶನ, ಮೃದುತಲ್ಪದೊಳ್=ಮೆತ್ತನೆಯಹಾಸಿಗೆಯಲ್ಲಿ, ಅಂದು=ಆಗ, ಶಿಶು=ಕೂಸು, ಉಪಪಾತ ತಲ್ಪದೊಳ್=ಹಾಸಿಗೆಮೇಲೆ ಮಲಗಿ ಜನಿಯಿಸಿದಂತೆ=ಹುಟ್ಟಿದಹಾಗೆ, ಕಣ್ಗೆ=ನೇತ್ರಕ್ಕೆ, (ನಿರ್ಭರಹರ್ಷಭಾರಮಂ) ನಿರ್ಭರ=ಹೆಚ್ಚಾದ, ಹರ್ಷ=ಸಂತೋಷದ, ಭಾರಮಂ=ಹೊರೆಯನ್ನು, ಪಡೆದಂ=ಉಂಟುಮಾಡಿದನು.

ತಾ|| ದೇಹಕಾಂತಿ ಕುಂಡಲದಕಾಂತಿ ಇವುಗಳಿಂದ ಆಕಾಶವೆಲ್ಲವೂ ಶುಭ್ರವಾಗಿ ತೊಳಗಿ ಬೆಳಗುವಂತೆ ಶರಗೆಲೆ ತೂರಿದಂತೆ ಪರ್ಣಲಘುವಿದ್ಯೆಯಿಂದ ಬಂದು ವಿದ್ಯಾಧರನ ಮೃದುವಾದ ಹಾಸಿಗೆಮೇಲೆ ಉಪಪಾತತಲ್ಪದಲ್ಲಿ ಹುಟ್ಟಿದಂತೆ ಆ ಮಗುವು ಖೇಚರನ ಕಣ್ಗೆ ಅತ್ಯಂತ ಸಂತೋಷವನ್ನುಂಟುಮಾಡಿದನು, ೨೦.

ಗದ್ಯ|| ಅಂತು=ಹಾಗೆ, ಆಶಿಶುವಂ=ಆ ಕೂಸನ್ನು ದಕ್ಷಿಣಶ್ರೇಣಿಯ=ದಕ್ಷಿಣದೇಶದ, ರಥನೂಪುರಚಕ್ರವಾಳ ಪುರಮಂ=ರಥನೂಪುರ ಚಕ್ರವಾಳವೆಂಬ ಪಟ್ಟಣವನ್ನು, ಆಳ್ವ=ಕಾಪಾಡುವ, ಇಂದುಗತಿವಿಯಚ್ಚರೇಂದ್ರಂ=ಇಂದುಗತಿಯೆಂಬ ಖೇಚರೇಂದ್ರನು, ಅಂದಿನಸೂಳ್ಗೆ=ಆ ಕಾಲದ ಸರದಿಗೆ, ವಂದ=ಬಂದ, ಪುಷ್ಪವತಿವೆಸರ=ಪುಷ್ಪವತಿಯೆಂಬ ಹೆಸರುಳ್ಳ, ಮಹಾ

ಉ|| ಈಗಳೆ ಪುಟ್ಟಿದೆನ್ನ ಶಿಶುವಂ ಕರುಣಂ ತನಗಿಲ್ಲದೆತ್ತಿಕೊಂ |
ಡಾಗಸದತ್ತಲಂತಕನ ದೂತನವೋಲ್ ಪಿಡಿದುಯ್ದನೊರ್ವನಿ ||
ನ್ನೇಗಳ ಗೆಯ್ವೆನೆಂದಳಿತೆ ವಿದೇಹಿ ನವೋತ್ಪಲಮಾಲೆ ಕಾಱುವಂ |
ತಾಗೆ ಕದುಷ್ಣ ವಾರಿಗಳನುಣ್ಮಿದುವಾಕೆಗೆ ಬಾಷ್ಪವಾರಿಗಳ್ ||೨೧||

ದೇವಿ=ರಾಣಿಯು, ಫಲವತಿಯಾದಳ್=ಹೆತ್ತಳು, ಎನಿಸಿ=ಎಂದು ಪ್ರಸಿದ್ಧಿ ಹುಟ್ಟಿಸಿಕೊಟ್ಟು, (ಕುಂಡಲಪ್ರಭಾಮಂಡಲವಿಲಾಸಮಂ) ಕುಂಡಲ=ಕರ್ಣಾಭರಣಗಳ, ಪ್ರಭಾ=ಕಾಂತಿಯ, ಮಂಡಲ=ಸಮೂಹದ, ವಿಳಾಸಮಂ=ಸೊಗಸನ್ನು, ತಳೆದನಪ್ಪುದರಿಂ=ಧರಿಸಿದನಾದುದರಿಂದ, ಪ್ರಭಾಮಂಡಲನೆಂದು=ಪ್ರಭಾಮಂಡಲನೆಂಬದಾಗಿ, ಪೆಸರನಿಟ್ಟಂ = ನಾಮಕರಣಮಾಡಿದನು, ಅನ್ನೆಗಂ=ಅಷ್ಟರಲ್ಲಿ, ಇತ್ತಲ್=ಈಕಡೆ,

೨೧. ಟೀ|| ಈಗಳೆ=ಈವಾಗಲೇ, ಪುಟ್ಟಿದ=ಹುಟ್ಟಿದ, ಎನ್ನ=ನನ್ನ, ಶಿಶುವಂ=ಮಗುವನ್ನು, ಒರ್ವಂ=ಒಬ್ಬನು, ಅಂತಕನ=ಯಮನ, ದೂತನವೋಲ್=ಭಟನಹಾಗೆ, ತನಗೆ, ಕರುಣಂ=ದಯೆಯು, ಇನಿತಿಲ್ಲದೆ=ಸ್ವಲ್ಪವೂ ಇಲ್ಲದೆ, ಪಿಡಿದು=ಹಿಡಿದು, ಆಗಸದತ್ತ=ಆಕಾಶದಕಡೆಗೆ, ಒಯ್ದಂ=ತೆಗೆದುಕೊಂಡು ಹೋದನು, ಇನ್ನೇಗಳಗೆಯ್ವಂ=ಇನ್ನೇನುತಾನೇ ಮಾಡಲಿ, ಎಂದು=ಎಂಬದಾಗಿ, ವಿದೇಹಿ, ಅಳೆ=ರೋದನಮಾಡಲು, (ನವೋತ್ಪಲಮಾಲೆ) ನವ=ನೂತನವಾದ, ಉತ್ಪಲ=ನೈದಿಲೆಯ, ಮಾಲೆ=ಮಾಲಿಕೆಯು, (ಕದುಷ್ಣವಾರಿಗಳಂ) ಕದುಷ್ಣ=ಸ್ವಲ್ಪಬಿಸಿಯಾಗಿರುವ, ವಾರಿಯಂ=ನೀರನ್ನು, ಕಾರುವಂತೆ=ಸುರಿಯುವಹಾಗೆ, ಆಗೆ=ಆಗಲು, ಆಕೆಗೆ=ವಿದೇಹಿಗೆ, ಬಾಷ್ಪವಾರಿಗಳ್=ಕಣ್ಣೀರುಗಳು, ಉಣ್ಮಿದುವು=ಹೊರಟವು.

ತಾ|| ಹಾಗೆ ಇಂದುಗತಿಯೆಂಬ ಖೇಚರನು ತನ್ನ ರಾಣಿಯಾದ ಪುಷ್ಪವತಿಯು ಪುತ್ರಫಲವನ್ನ ಪಡೆದಳೆಂದು ಕುಂಡಲಕಾಂತಿಯುಕ್ತನಾದ್ದರಿಂದ ಪ್ರಭಾಮಂಡಲನೆಂದು ಹೆಸರಿಟ್ಟಿದ್ದರು. ಈ ಕಡೆ ಈಗತಾನೆ ಹುಟ್ಟಿದ ನನ್ನ ಮಗುವನ್ನು ಯಮದೂತನಂತೆ ನಿಷ್ಕರುಣೆಯಿಂದ ಯಾವನೊ ಕೊಂಡೊಯ್ದನಲ್ಲ ! ಏನು ಮಾಡಲಿ ? ಎಂದು ವಿದೇಹಿಯು ಅಳುತ್ತಿದ್ದರೆ ನೈದಿಲೆಯು ಬಿಸಿನೀರನ್ನು ಸುರಿಸಿದಂತೆ ಕಣ್ಣಿನಿಂದ ನೀರು ಸುರಿಯುತ್ತಿತ್ತು. ೨೧.

ಕಂ|| ಬಡವಂ ಚಿಂತಾಮಣಿಯಂ |
ಪಡೆವಂತೆಂತಾನುಮೊರ್ವನಂ ತನಯನ ನಾಂ ||
ಪಡೆದಾಗಳೆ ಮತ್ತೊರ್ವಂ |
ಪಿಡಿದುಯ್ದಂ ದನುಜನೆಂದು ಶೋಕಂಗೆಯ್ದಳ್ ||೨೨||

ರಕ್ಷಾವಿಧಾನಮಂ ತನು |
ರಕ್ಷಕರಂ ಬಗೆಯದೆನ್ನ ತನಯನನುಯ್ದಂ ||
ರಾಕ್ಷಸನೆಂದಳ್ತಳ್ ಧವ |
ಳೇಕ್ಷಣೆ ದಳದಳಿಸಿ ಸುರಿಯೆ ಬಾಷ್ಪಜಲಂಗಳ್ ||೨೩||

---

೨೨. ಟೀ|| ಬಡವಂ=ದರಿದ್ರನು, ಚಿಂತಾಮಣಿಯಂ=ಚಿಂತಾಮಣಿ ಎಂಬ ರತ್ನವನ್ನು, ಪಡೆವಂತೆ=ಹೊಂದುವಹಾಗೆ, ಎಂತಾನುಂ=ಹ್ಯಾಗಾದರೂ, ಒರ್ವನಂ ತನಯನಂ=ಒಬ್ಬ ಮಗನನ್ನು, ಆಂ=ನಾನು, ಪಡೆದಾಗಳೆ=ಹೆತ್ತಕೂಡಲೆ, ಮತ್ತೊರ್ವಂ=ಮತ್ತೊಬ್ಬ, ದನುಜಂ=ರಾಕ್ಷಸನು, ಪಿಡಿದು, ಉಯ್ದಂ=ಎತ್ತಿಕೊಂಡುಹೋದನು; ಎಂದು ಶೋಕಂಗೆಯ್ದಳ್=ದುಃಖಪಟ್ಟಳು.

ತಾ|| ಬಡವನಿಗೆ ಚಿಂತಾಮಣಿ ಸಿಕ್ಕಿದಂತೆ ನನಗೆ ಒಂದು ಮಗು ಸಿಕ್ಕಿದ್ದರೆ ಆ ಗಳಿಗೆಯಲ್ಲೇ ರಾಕ್ಷಸನು ಹೊತ್ತುಕೊಂಡು ಹೋದನಲ್ಲಾ ಎಂದು ದುಃಖಿಸುವಳು. ೨೨.

೨೩. ಟೀ|| ರಾಕ್ಷಸಂ=ಕ್ರೂರಮನುಷ್ಯನು, ರಕ್ಷಾವಿಧಾನಮಂ=ಸಂರಕ್ಷಣವಿಧಿಯನ್ನೂ, ತನುರಕ್ಷಕರಂ=ದೇಹರಕ್ಷಕರನ್ನೂ, ಬಗೆಯದೆ=ಲೆಕ್ಕಿಸದೆ, ಎನ್ನ, ತಯನಂ=ಮಗನನ್ನು, ಉಯ್ದಂ=ತೆಗೆದುಕೊಂಡು ಹೋದನು, ಎಂದು, (ಧವಳೇಕ್ಷಣೆ) ಧವಳ=ಶುಭ್ರವಾದ, ಈಕ್ಷಣೆ=ನೇತ್ರವುಳ್ಳ ಜನಕಪತ್ನಿಯು, ಬಾಷ್ಪಜಲಂಗಳ್=ಕಣ್ಣೀರುಗಳು ದಳದಳಿಸಿ=ಅವಿಚ್ಛಿನ್ನವಾಗಿ, ಸುರಿಯೆ=ಸ್ರವಿಸಲಾಗಿ, ಅಳ್ತಳ್=ರೋದನಮಾಡಿದಳು.

ತಾ|| ರಕ್ಷೆಗಾಗಿ ಇಟ್ಟ ದಿಗ್ಬಂಧನವಿಧಿಯನ್ನೂ ಮೈಗಾಲವರನ್ನೂ ಲಕ್ಷ್ಯಮಾಡದೆ ಮಗುವನ್ನು ಒಯ್ದನಲ್ಲಾ ಎಂದು ಕಣ್ಣೀರಕಾಲುವೆ ಹರಿಯುವಂತೆ ಅತ್ತಳು. ೨೩.

ಕುಳವೃದ್ಧೆಯರುಂ ಧಾತ್ರೀ |
ಕುಳಮುಂ ಶುದ್ಧಾಂತ ಕಾಂತೆಯರ್ಕಳುಮಱಲಿಂ ||
ದೞಿ ಕಂಡು ಜನಕನತಿ ವಿ |
ಹ್ವಳ ಚಿತ್ತಂ ಶೋಕರಸಮನೊಳಕೊಂಡಿರ್ದಂ ||೨೪||

ಆಗಳ್ ಮೌಹೂರ್ತಿಕರೀ ಶುಭಮುಹೂರ್ತದೊಳ್ ಪುಟ್ಟಿದ ಬಾಲಕಂಗ ಮೋಘಮಪಾಯಮಾಗದೀಕೆಯುಮಗಣ್ಯ ಪುಣ್ಯವತಿಯಕ್ಕುಮೆಂದು ಶೋಕಮನದಿರ್ಪೆ ವಿದೇಹಿ ಸಂತೋಷಂಬಟ್ಟು ನಿಜ ತನೂಜೆಯ ಮುಖಸರೋಜಮಂನೋೞ್ಪುದುಂ—

---

೨೪. ಟೀ|| ಕುಳವೃದ್ಧೆಯರುಂ=ಮನೆಯಲ್ಲಿರುವ ಮುದಕಿಯರೂ, ಧಾತ್ರೀಕುಳಮುಂ=ದಾದಿಯರ ಸಮೂಹವೂ, ಶುದ್ಧಾಂತಕಾಂತೆಯರ್ಕಳುಂ=ರಾಣಿವಾಸದ ಹೆಂಗಸರೂ, ಅಳಲಿಂದೆ=ದುಃಖದಿಂದ, ಅಳೆ=ರೋದನ ಮಾಡಲು, ಜನಕಂ=ಜನಕರಾಯನು, ಕಂಡು, (ಅತಿವಿಹ್ವಳಚಿತ್ತಂ) ಅತಿವಿಹ್ವಳ=ಬಹುಪರವಶವಾದ, ಚಿತ್ತಂ=ಮನಸ್ಸುಳ್ಳವನಾಗಿ, ಶೋಕರಸಮಂ=ಕರುಣರಸವನ್ನು, ಒಳಕೊಂಡಿರ್ದಂ=ಹೊಂದಿದ್ದನು.

ತಾ|| ಮುದಿಕಿಯರು, ದಾದಿಯರು, ಅಂತಃಪುರದ ಇತರ ಸ್ತ್ರೀಯರೂ ಎಲ್ಲರೂ ರೋದನಮಾಡಿದರು. ಜನಕನೂ ದುಃಖದಿಂದ ಕೂಡಿದವನಾಗಿದ್ದನು. ೨೪.

ಗದ್ಯ|| ಆಗಳ್=ಆ ಕಾಲದಲ್ಲಿ ಮೌಹೂರ್ತಿಕರ್=ಜೋಯಿಸರು, ಈ ಶುಭಮುಹೂರ್ತದೊಳ್=ಶುಭಕಾಲದಲ್ಲಿ, ಪುಟ್ಟಿದ=ಜನಿಸಿದ, ಬಾಲಕಂಗೆ=ಮಗುವಿಗೆ, ಅಮೋಘಂ=ದೊಡ್ಡದಾದ, ಅಪಾಯಂ=ಕೆಡುಕು, ಆಗದು, ಈಕೆಯುಂ=ಇವಳು ಕೂಡ, [ಅಗಣ್ಯಪುಣ್ಯವತಿ] ಅಗಣ್ಯ=ಎಣಿಸುವುದಕ್ಕಾಗದ, ಪುಣ್ಯವತಿ=ಸುಕೃತವುಳ್ಳವಳು, ಅಕ್ಕುಂ=ಆಗುವಳು, ಎಂದು, ಶೋಕಮಂ=ದುಃಖವನ್ನು, ಅದಿರ್ಪೆ=ಹೋಗಲಾಡಿಸುತ್ತಿರಲು, ವಿದೇಹಿ=ಜನಕಪತ್ನಿಯು, ಸಂತಸಂಬಟ್ಟು=ಸಂತೋಷಹೊಂದಿ, ನಿಜತನೂಜೆಯ=ತನ್ನ ಮಗಳ, ಮುಖಸರೋಜಮಂ=ಮುಖಕಮಲವನ್ನು, ನೋೞ್ಪುದುಂ=ನೋಡಲಾಗಿ,

ತಾ|| ಆಗ ಜೋಯಿಸರು ಬಂದು ಈ ಮುಹೂರ್ತಬಲದಿಂದ ಈ ಗಳಿಗೆಯಲ್ಲಿ ಹುಟ್ಟಿದ ಮಗುವಿಗೆ ಅಂಥ ಪ್ರಬಲವಾದ ಅಪಾಯವಾಗುವದಿಲ್ಲ.

ಕಂ|| ಆ ಸತಿಗೆ ಪುಟ್ಟೆ ಹರ್ಷ ವಿ |
ಕಾಸಂ ಮಧುಬಿಂದುಮಾಲೆ ನೀಲೋತ್ಪಲದಿಂ ||
ಸೂಸುವವೋಲ್ ನಗೆಗಣ್ಣಿಂ |
ಸೂಸಿದುವಾನಂದಬಾಷ್ಪಬಿಂದುವಿತಾನಂ ||೨೫||

ತದನಂತರಂ—

ಕಂ|| ಆ ರಾಜಭವನದೊಳ್ ಮಣಿ |
ತೋರಣವೊಡರಿಸಿದುವೀಕ್ಷಣಾಕರ್ಷಣಮಂ ||
ಭಾರತಿಕನಾಗೆ ಮಂದ ಸ |
ಮೀರಂ ಕೈನಿಮಿರ್ದುವುತ್ಸವ ಧ್ವಜ ತತಿಗಳ್ ||೨೬||

ಈಕೆ ಮಹಾಪುಣ್ಯವತಿ ಎನ್ನಲು ದುಃಖಶಾಂತಿಯಾಗಿ ವಿದೇಹಿ ಸಂತೋಷಿಸಿ ತನ್ನ ಮಗಳ ಮುಖವನ್ನು ನೋಡಲು ಆಕೆಗೆ ಸಂತೋಷವಾಗಿ ನೈದಿಲೆಯಿಂದ ಮಕರಂದವು ತೊಟಕುವಂತೆ ಆಕೆಯು ಕಣ್ಣಿನಿಂದ ಆನಂದಬಾಷ್ಪವು ಹನಿಯಿತು.

೨೫. ಟೀ|| ಆಸತಿಗೆ=ಜನಕಪತ್ನಿಗೆ, (ಹರ್ಷವಿಕಾಸಂ) ಹರ್ಷ=ಸಂತೋಷದ, ವಿಕಾಸಂ=ಅತಿಶಯವು, ಪುಟ್ಟೆ=ಸಂಭವಿಸಲು, ನೀಲೋತ್ಪಲದಿಂ=ಕನ್ನೈದಿಲೆಹೂವಿನಿಂದ, (ಮಧುಬಿಂದುಮಾಲೆ) ಮಧುಬಿಂದು=ಮಕರಂದದ ಹನಿಗಳ, ಮಾಲೆ=ಪಙ್ಕ್ತಿಯು, ಸೂಸುವವೋಲ್=ಸುರಿವಹಾಗೆ, ನಗೆಗಣ್ಣಿಂ=ಅಗಲವಾದನೇತ್ರದಿಂದ, (ಆನಂದಬಾಷ್ಪಬಿಂದುವಿತಾನಂ) ಆನಂದಬಾಷ್ಪ=ಸಂತೋಷದಿಂದುಂಟಾದ ಕಣ್ಣೀರಿನ, ಬಿಂದು=ಹನಿಗಳ, ವಿತಾನಂ=ಸಮೂಹವು, ಸೂಸಿದವು=ಸುರಿದವು.

೨೬. ಟೀ|| ತದನಂತರಂ=ಆಮೇಲೆ, ಆ ರಾಜಭವನದೊಳ್=ಆ ಅರಮನೆಯಲ್ಲಿ, ಮಣಿತೋರಣಂ=ರತ್ನತೋರಣಗಳು, (ವೀಕ್ಷಣಾಕರ್ಷಣಮಂ) ವೀಕ್ಷಣ=ಕಣ್ಣುಗಳ, ಆಕರ್ಷಣಮಂ=ಎಳೆಯುವಿಕೆಯನ್ನು, ಒಡರಿಸಿದುವು=ಉಂಟುಮಾಡಿದವು (ಕಣ್ಣುಗಳನ್ನು ಎಳೆದವು ಎಂದುಭಾವ), ಮಂದಸಮೀರಂ=ಸುಳಿಗಾಳಿಯೇ, ಭಾರತಿಕಂ=ನಟ್ಟುವನು, ಆಗೆ=ಆಗಲು, (ಉತ್ಸವಧ್ವಜತತಿಗಳ್) ಉತ್ಸವ=ಸಂತೋಷ ಸೂಚಕವಾದ, ಧ್ವಜ=ಧ್ವಜಗಳ, ತತಿಗಳ್=ಸಮೂಹಗಳು, ಕೈನಿರಿದುವು=ಚಲಿಸಿದವು.

ಕೆದಱಿದ ಪಿಷ್ಟಾತಕದಿಂ |
ದೊದವಿದ ಪಟವಾಸ ಚೂರ್ಣದಿಂದಳವಡೆ ಕ ||
ಟ್ಟಿದ ರನ್ನದ ಮೇಲ್ಕಟ್ಟಿಂ |
ಪದೆಪಂ ಪುಟ್ಟಿಸಿದುದಿಟ್ಟಳಂ ನೃಪಸದನಂ ||೨೭||

ಬದ್ಧವಣಂ ಬಾಜಿಸೆ ದೆಸೆ |
ಬಿದ್ದಂ ಕುಣಿದಾಡೆ ಗಣಿಕೆಯರ್ ಪೂವಲಿಯೊಳ್ ||
ಮುದ್ದಾಡೆ ತುಂಬಿಗಳ್ ಮುಗಿ |
ಲುದ್ದಂ ಪರಿದತ್ತು ಹರ್ಷರಸಮಾಪುರದೊಳ್ ||೨೮||

ತಾ|| ಅರಮನೆಯಲ್ಲೆಲ್ಲಾ ನೇತ್ರಾನಂದವೆನಿಸುವಂತೆ ತೋರಣಕಟ್ಟಿದರು. ಮಂದಮಾರುತನೇ ಭರತಶಾಸ್ತ್ರ ಅಭ್ಯಾಸಮಾಡಿದವನಾದನು. ಬಾವಟಗೆಳನ್ನು ಏರಿಸಿದರು. ೨೬.

೨೭. ಟೀ|| ಕೆದರಿದ=ಹರಡಿದ, ಪಿಷ್ಟಾತಕದಿಂದೆ=ರಂಗವಲ್ಲಿಯಿಂದಲೂ, ಒದವಿದ=ಉಂಟಾದ, ಪಟವಾಸಚೂರ್ಣದಿಂದೆ=ಗಂಧದ ಪುಡಿಯಿಂದಲೂ, ಅಳವಡೆ=ಅನುಕೂಲವಾಗುವಂತೆ, ಕಟ್ಟಿದ=ಕಟ್ಟಲ್ಪಟ್ಟ, ರನ್ನದ=ರತ್ನದ, ಮೇಲ್ಕಟ್ಟಿಂ=ಮೇಲ್ಕಟ್ಟಿನಿಂದಲೂ, ನೃಪಸದನಂ=ಅರಮನೆಯು, ಇಟ್ಟಳಂ=ಸಾಂದ್ರವಾಗಿ, ಪದೆಪಂ=ಸೊಗಸನ್ನು, ಪುಟ್ಟಿಸಿದುದು=ಉಂಟುಮಾಡಿತು.

ತಾ|| ರಂಗೋಲೆಯನ್ನಿಕ್ಕಿ, ಗಂಧದಹುಡಿಯನ್ನು ಚೆಲ್ಲಿ, ರತ್ನದ ಮೇಲ್ಕಟ್ಟು ಕಟ್ಟಿ, ಆ ಅರಮನೆಯನ್ನು ಸೊಗಸುಮಾಡಿದರು. ೨೭.

೨೮. ಟೀ|| ಬದ್ಧವಣಂ=ಮಂಗಳವಾದ್ಯವು, ಬಾಜಿಸೆ=ಬಡಿಯಲ್ಪಡುತ್ತಿರಲು, ಗಣಿಕೆಯರ್=ನರ್ತಕಿಯರು, ದೆಸೆಬಿದ್ದಂ=ಎಲ್ಲಾಕಡೆಯೂ, ಕುಣಿದಾಡೆ=ನಾಟ್ಯಮಾಡಲು, ತುಂಬಿಗಳ್=ಭ್ರಮರಗಳು, ಪೂವಲಿಯೊಳ್=ನರ್ತಕಿಯರು ಮಾಡಿದ ಪುಷ್ಪಾಂಜಲಿಯಲ್ಲಿ, ಮುದ್ದಾಡೆ=ವ್ಯಾಪಿಸಲಾಗಿ, ಆಪುರದೊಳ್=ಮಿಥಿಲಾಪಟ್ಟಣದಲ್ಲಿ, ಹರ್ಷರಸಂ=ಸಂತೋಷವು, ಮುಗಿಲುದ್ದಂ=ವಿಶೇಷವಾಗಿ, ಪರಿದತ್ತು=ವ್ಯಾಪಿಸಿತು.

ತಾ|| ಮಂಗಳವಾದ್ಯಗಳು ಮೊಳಗಿದುವು, ವೇಶ್ಯಾಸ್ತ್ರೀಯರು ನರ್ತಿಸಿದರು, ಎರಚಿದ ಪುಷ್ಪಗಳಲ್ಲಿ ಭ್ರಮರಗಳು ಮುತ್ತಿಕೊಳ್ಳುತ್ತಿದ್ದುವು. ಆ ಪಟ್ಟಣದಲ್ಲೆಲ್ಲಾ ಸಂತೋಷವು ಅಪರಿಮಿತವಾಗಿ ವ್ಯಾಪಿಸಿತು. ೨೮.

ಚ|| ಪಡೆದುದು ಗಾಯನೀಮಧುರ ಮಂಗಳ ಗೇಯಮುಪಾಯನಂಗಳಂ |
ಕುಡಲೆಡೆಯಾಡುತಿರ್ಪ ಗಣಿಕಾ ಮಣಿನೂಪುರ ಕಿಂಕಿಣೀರವಂ ||
ಕುಡಿದುಪಹಾರ ಪುಷ್ಪರಸಮಂ ಮೊರೆದೇಳ್ವಳಿನೀರವಂ ಮಗ |
ಳ್ಪಡೆಯೆ ವಿದೇಹಿ ಪೌರಜನ ಕರ್ಣರಸಾಯನದೊಂದು ತಂದಲಂ ||೨೯||

ಅಂತು ಜಾತಕರ್ಮೋತ್ಸವಮಂ ಮಾಡಿ ದಶಮದಿನದೊಳ್ ಸರ್ವಲಕ್ಷಣ ಸಸ್ಯಸಂಪತ್ತಿಗೆ ಸೀತೆಯಪ್ಪುದರಿಂ ಸೀತೆಯೆಂದು ಪೆಸರನಿಟ್ಟು ಕೊಂಡಾಡಿ ನಡಪುತ್ತುಮಿರೆ ಮದನಮೋಹನ ದೀಪಕಳಿಕೆಯಂತೆಯುಂ,

---

೨೯. ಟೀ|| (ಗಾಯನೀಮಧುರ ಮಂಗಳಗೇಯಂ) ಗಾಯನೀ=ಹಾಡುವಸ್ತ್ರೀಯರ, ಮಧುರ=ಮನೋಹರವಾದ ಮಂಗಳಗೇಯಂ=ಶುಭಗೀತದ ಧ್ವನಿಯೂ, ಉಪಾಯನಂಗಳಂ=ಬಾಗಿನಗಳನ್ನು, ಕುಡಲ್=ಕೊಡುವುದಕ್ಕಾಗಿ, ಎಡೆಯಾಡುತಿರ್ಪ=ಸಂಚರಿಸುತ್ತಿರುವ, (ಗಣಿಕಾಮಣಿನೂಪುರ ಕಿಂಕಿಣೀರವಂ) ಗಣಿಕಾ=ಸೂಳೆಯರ, ಮಣಿ=ರತ್ನದ, ನೂಪುರ=ಕಾಲ್ಗಡಗದ, ಕಿಂಕಿಣೀ=ಗೆಜ್ಜೆಗಳ, ರವಂ=ಧ್ವನಿಯೂ, (ಉಪಹಾರಪುಷ್ಪರಸಮಂ) ಉಪಹಾರ=ಅಲಂಕರಿಸಿರುವ, ಪುಷ್ಪ=ಹೂವುಗಳ, ರಸಮಂ=ಮಕರಂದವನ್ನು. ಕುಡಿದು, ಮೊರೆದು=ಝೇಂಕರಿಸಿ, ಏಳ್ವ=ಏಳುವ, ಅಳಿನೀರವಂ=ತುಂಬಿಗಳ ಧ್ವನಿಯೂ, ವಿದೇಹಿ=ಜನಕಪತ್ನಿಯು, ಮಗಳ್ಪಡೆಯೆ=ಮಗಳನ್ನು ಹಡೆಯಲು (ಪೌರಜನಕರ್ಣರಸಾಯನದ) ಪೌರಜನ=ಪಟ್ಟಣದ ಜನರ, ಕರ್ಣರಸಾಯನದ=ಕಿವಿಗಿಂಪಾದ, ಒಂದು ತಂದಲಂ=ಮುಖ್ಯವಾದ ಹನಿಯನ್ನು, ಪಡೆಯೆ=ಹೊಂದಲು, (ಪುರಜನರು ಹಿತವಾದ ಸಂತೋಷವನ್ನು ಹೊಂದಲಾಗಿ ಎಂದು ಭಾವವು.)

ತಾ|| ಗಾಯಕಿಯರ ಸಂಗೀತಧ್ವನಿಯೂ ಬಾಗಿನ ಕೊಡುವದಕ್ಕೆ ಓಡಾಡುವ ವೇಶ್ಯೆಯರ ರತ್ನದ ಕಿರುಗೆಜ್ಜೆಯ ಧ್ವನಿಯೂ, ಎರಚಿದ ಪುಷ್ಪಾಂಜಲಿಯ ಹೂಗಳ ಮಕರಂದಪಾನಮಾಡಿ ಏಳುತ್ತಾ ಝೇಂಕರಿಸುವ ತುಂಬಿಗಳ ಧ್ವನಿಯೂ ವಿದೇಹಿಯು ಮಗಳನ್ನು ಪ್ರಸುವಿಸಿದ ವಾರ್ತೆಯೂ ಪಟ್ಟಣಿಗರೆಲ್ಲರಿಗೂ ಕರ್ಣಾನಂದಕರವಾಯಿತು. ೨೯.

ಗದ್ಯ|| (ಜನಕನು) ಅಂತು=ಹಾಗೆ, ಜಾತಕರ್ಮೋತ್ಸವಮಂ=ಜಾತಕರ್ಮದ ಉತ್ಸವವನ್ನು ಮಾಡಿ, ದಶಮದಿನದೊಳ್=ಹತ್ತನೆಯದಿನದಲ್ಲಿ, [ಸರ್ವಲಕ್ಷಣ ಸಸ್ಯಸಂಪತ್ತಿಗೆ,] ಸರ್ವಲಕ್ಷಣ=ಎಲ್ಲಾ ಲಕ್ಷಣಗಳೆಂಬ, ಸಸ್ಯ=

ಕಾಮ ಕಲ್ಪಲತೆಯಂತೆಯುಂ, ನಿರಂತರೋಪಚಯಮನಪ್ಪುಕೆಯ್ದು ಭರತ ಶಾಸ್ತ್ರಾದಿ ಸಕಲ ಕಲೆಯೊಳತಿ ಪರಿಣತಿವಡೆದು—

ಕಂ|| ಶಶಿಲೇಖೆಯೆನಲ್ ಕರ್ಪೂ |
ರ ಶಲಾಕೆಯೆನಲ್ ವಿಳೋಚನೋತ್ಸವಮಂ ಮಾ ||
ಡಿ ಶಿಲೀಮುಖಕುಂತಳೆ ಮದ |
ನ ಶಿಲೀಮುಖದಂತೆ ಭುವನಮಂ ಸೋಲಿಸಿದಳ್ ||೩೦||

ಪೈರುಗಳ, ಸಂಪತ್ತಿಗೆ=ಸೌಭಾಗ್ಯಕ್ಕೆ. ಸೀತೆಯಪ್ಪುದರಿಂ=ಆಸ್ಪದಳಾದ್ದರಿಂದ, ಸೀತೆಯೆಂದು=ಸೀತೆಯೆಂಬದಾಗಿ, ಪೆಸರಿಟ್ಟು=ನಾಮಕರಣಮಾಡಿ, ಕೊಂಡಾಡಿ=ಸ್ತುತಿಸಿ, ನಡಪುತ್ತುಂ=ಕಾಪಾಡುತ್ತಾ, ಇರೆ=ಇರಲು, ಸೀತೆ (ಮದನಮೋಹನದೀಪಕಳಿಕೆಯಂತೆಯುಂ) ಮದನ=ಮನ್ಮಥನ, ಮೋಹನ=ಮಂಕುಗೊಳಿಸುವ, ದೀಪಕಳಿಕೆಯಂತೆಯುಂ=ದೀಪಮಾಲಿಕೆಯಹಾಗೆಯೂ, (ಕಾಮಕಲ್ಪಲತೆಯಂತೆಯುಂ) ಕಾಮ=ಮದನನ, ಕಲ್ಪಲತೆಯಂತೆಯುಂ=ಕಲ್ಪವಲ್ಲಿಯಹಾಗೂ, (ನಿರಂತರೋಪಚಯಮಂ) ನಿರಂತರ=ಯಾವಾಗಲೂ, ಉಪಚಯಮಂ=ವೃದ್ಧಿಯನ್ನು, ಅಪ್ಪುಕೆಯ್ದು=ಅಂಗೀಕರಿಸಿ, (ಭರತ ಶಾಸ್ತ್ರಾದಿ ಸಕಲಕಲೆಯೊಳ್) ಭರತಶಾಸ್ತ್ರ=ನಾಟ್ಯವಿದ್ಯೆಯೇ, ಆದಿ=ಮುಂತಾದ, ಸಕಲ=ಸಮಸ್ತವಾದ, ಕಲೆಯೊಳ್=ವಿದ್ಯೆಗಳಲ್ಲಿ, ಅತಿಪರಿಣತಿವಡೆದು=ಬಹಳ ಪ್ರೌಢಿಮೆಯನ್ನು ಹೊಂದಿ.

೩೦. ಟೀ|| (ಶಿಲೀಮುಖಕುಂತಲೆ) ಶಿಲೀಮುಖ=ಭ್ರಮರದಂತಿರುವ, ಕುಂತಲೆ=ಕೂದಲುಳ್ಳ, (ಸೀತೆ) ಶಶಿಲೇಖೆಯೆನಲ್=ಚಂದ್ರಕಳೆಯಹಾಗೂ, ಕರ್ಪೂರಶಲಾಕೆಯೆನಲ್=ಪಚ್ಚಕರ್ಪೂರದ ಸಲಾಕಿಯಹಾಗೂ, ವಿಲೋಚನೋತ್ಸವಮಂ=ಕಣ್ಣುಗಳಿಗೆ ಸಂತೋಷವನ್ನು ಮಾಡಿ, (ಮದನಶಿಲೀಮುಖದಂತೆ) ಮದನ=ಮನ್ಮಥನ, ಶಿಲೀಮುಖದಂತೆ=ಬಾಣದಹಾಗೆ, ಭುವನಮಂ=ಲೋಕವನ್ನು, ಸೋಲಿಸಿದಳ್=ಜಯಿಸಿದಳು.

ತಾ|| ಜಾತಕರ್ಮಮಾಡಿ ಹತ್ತನೆಯದಿನ ಸಸ್ಯಸಂಪತ್ತಿಗೆ ಆಶ್ರಯಳಾದುದರಿಂದ ಸೀತೆಯೆಂದು ಹೆಸರಿಟ್ಟು ಸಲಹುತ್ತಿರಲು ಮನ್ಮಥನ ಕಲ್ಪವೃಕ್ಷದ ಬಳ್ಳಿಯಹಾಗೆ ವೃದ್ಧಿಹೊಂದುತ್ತಾ ಶಾಸ್ತ್ರಗಳಲ್ಲಿ ಪ್ರೌಢಿಮೆಯನ್ನು ಪಡೆದು ಭ್ರಮರದಂತೆ ಮುಂಗುರುಳುಳ್ಳ ಸೀತೆಯು ಚಂದ್ರಲೇಖೆಯಂತೆಯೂ ಕರ್ಪೂ

ಮನಸಿಜನಾಜ್ಞಾರೂಪಮಿ |
ದೆನೆ ಕರ್ವಿನಬಿಲ್ಲನೊಲ್ಲದುಚ್ಚರ್ವ ಸಮ್ಮೋ ||
ಹನ ಶರಮೆನೆ ಬಾಜಿಸಿದುದು |
ಜನಕಜೆಯ ಬೆಡಂಗು ಮದನ ಜಯ ಡಿಂಡಿಮಮಂ ||೩೧||

ಉ|| ಲೀಲೆಯನಪ್ಪುಕೆಯ್ದು ನಯನೋತ್ಸವಮಂ ದಯೆಗೆಯ್ವ ಗಾಡಿಯಿಂ |
ದೇಳಿಸಿ ಕಾಮ ಕಲ್ಪಲತೆಯಂ ಪರಿಪೂರ್ಣ ಕಳಾವಿಳಾಸದಿಂ ||
ದೇಳಿಸಿ ಚಾರು ಚಂದ್ರಕಲೆಯಂ ನೆಲೆವೆರ್ಚಿಸಿದಳ್ ಮರಾಳ ಲೀ |
ಲಾಳಸಯಾನೆ ಜಾನಕಿ ವಿದೇಹಿಗೆ ಮೋಹರಸ ಪ್ರವಾಹಮಂ||೩೨||

ರದ ಸಲಾಕಿಯಂತೆಯೂ ನಯನಾನಂದಳೆನಿಸಿ ಮನ್ಮಥಾಸ್ತ್ರದಂತೆ ಲೋಕವನ್ನೇ ಗೆಲ್ಲುತ್ತಿದ್ದಳು. ೩೦.

೩೧. ಟೀ|| ಇದು=ಈ ವ್ಯಕ್ತಿಯು, ಮನಸಿಜನ=ಮನ್ಮಥನ. ಆಜ್ಞಾರೂಪಂ=ಅಪ್ಪಣೆಯ ಆಕೃತಿಯು, ಎನೆ=ಎಂಬಂತೆಯೂ, ಕರ್ವಿನಬಿಲ್ಲಂ=ಇಕ್ಷುಧನುಸ್ಸನ್ನು, ಒಲ್ಲದೆ=ಪ್ರೀತಿಸದೆ, ಉಚ್ಚರ್ವ=ಪ್ರಯೋಗಿಸಲ್ಪಡುವ, ಸಮ್ಮೋಹನಶರಮೆನೆ=ಮೋಹನಾಸ್ತ್ರವೋಎಂಬಹಾಗೆಯೂ, ಜನಕಜೆಯ=ಸೀತೆಯ, ಬೆಡಂಗು=ವಿಲಾಸವು, (ಮದನಜಯಡಿಂಡಿಮಮಂ) ಮದನ=ಮನ್ಮಥನ, ಜಯಡಿಂಡಿಮಮಂ=ಜಯಭೇರಿಯನ್ನು, ಬಾಜಿಸಿದುದು=ಹೊಡೆಯಿತು.

ತಾ|| ಇದು ಮನ್ಮಥನ ಅಪ್ಪಣೆಯೋ ಆಕೃತಿಯನ್ನು ಪಡೆಯಿತೋ ಕಬ್ಬಿನ ಬಿಲ್ಲನ್ನು ಒಲ್ಲದೆ ಪ್ರಯೋಗಿಸುವ ಸಮ್ಮೋಹನಾಸ್ತ್ರವೋ ಎನ್ನುವಂತೆ ಸೀತೆಯ ರೂಪವು ಜಯಭೇರಿಯನ್ನು ಹೊಡೆಯಿತು. ೩೧.

೩೨. ಟೀ|| (ಮರಾಳಲೀಲಾಲಸಯಾನೆ) ಮರಾಳ=ಹಂಸಪಕ್ಷಿಯ ಲೀಲಾ=ವಿಲಾಸದಂತೆ, ಅಲಸಯಾನೆ=ಮಂದಗಮನವುಳ್ಳ, ಜಾನಕಿ=ಸೀತೆಯು, ಲೀಲೆಯಂ=ಶೃಂಗಾರಚೇಷ್ಟೆಯನ್ನು, ಅಪ್ಪುಕೆಯ್ದು=ಅಂಗೀಕರಿಸಿ, ನಯನೋತ್ಸವಮಂ=ನೇತ್ರಗಳಿಗೆ ಸಂತೋಷವನ್ನು, ದಯೆಗೆಯ್ವ=ಕೊಡುವ, ಗಾಡಿಯಿಂದೆ=ಒಯ್ಯಾರದಿಂದ, [ಕಾಮಕಲ್ಪಲತೆಯಂ] ಕಾಮ=ಮನ್ಮಥನ, ಕಲ್ಪಲತೆಯಂ=ಕಲ್ಪವೃಕ್ಷವನ್ನು, ಏಳಿಸಿ=ತಿರಸ್ಕರಿಸಿ, [ಪರಿಪೂರ್ಣಕಳಾವಿಳಾಸದಿಂ] ಪರಿಪೂರ್ಣ=ತುಂಬಿದ, ಕಳಾ=ಕಾಂತಿಯ, ವಿಳಾಸದಿಂ=ವ್ಯಾಪಾರದಿಂದ [ಚಾರುಚಂದ್ರಕಳೆಯಂ] ಚಾರು=ಮನೋಹರವಾದ,

ಕಂ|| ಜನಕಂಗೆ ಹರ್ಷದೊದವಂ |
ಜನಿಯಿಸಿ ಜಾನಕಿಯ ರೂಪವಿಭವಂ ಮಾಡಿ ||
ತ್ತನುರೂಪಂ ನೃಪಸುತನಾ |
ವನೊ ವರನೀ ವನಿತೆಗೆಂಬ ಮನದುಮ್ಮಳಮಂ ||೩೩||

ಚಂ|| ಜನಕಜೆ ಮಿಾಱೆ ಶೈಶವಮನೇಂ ತಲೆದೋಱಿದುದೋ ನವೀನ ಯೌ|
ವನ ವಿಭವಂ ಮುಗುಳ್ನಗೆಯನೊಂದೆರಡಂ ನಿಜ ಪಲ್ಲವಾಧರಂ ||
ನನೆಯ ಸರಲ್ಗಳೊಂದೆರಡುಮಂ ಕಡೆಗಣ್ ಕುಡುವುರ್ಕಾಮದೇ |
ವನ ಕುಡುವಿಲ್ಲನೊಂದೆರಡುಮಂ ಪಡೆದೊಪ್ಪಮನಪ್ಪುಕೆಯ್ಯಿಸಂ||೩೪

ಚಂದ್ರಕಳೆಯಂ=ಚಂದ್ರನ ಕಾಂತಿಯನ್ನು, ಏಳಿಸಿ=ಹೀಯಾಳಿಸಿ, ವಿದೇಹಿಗೆ=ತಾಯಿಗೆ, [ಮೋಹರಸಪ್ರವಾಹಮಂ] ಮೋಹರಸ=ಪ್ರೀತಿರಸದ, ಪ್ರವಾಹಮಂ=ನದಿಯನ್ನು, ನೆಲೆವೆರ್ಚಿಸಿದಳ್=ವೃದ್ಧಿಹೊಂದಿಸಿದಳು.

ತಾ|| ಹಂಸದಂತೆ ಮೃದುವಾದ ನಡಗೆಯಿಂದ ಕೂಡಿ ಆಟದಿಂದ ನೇತ್ರಾನಂದವುಂಟುಮಾಡಿ ಸೌಂದರ್ಯದಲ್ಲಿ ಮನ್ಮಥಕಲ್ಪವಲ್ಲಿಯೆನಿಸಿ ಕಾಂತಿಯಲ್ಲಿ ಚಂದ್ರಮಂಡಲಕ್ಕಿಂತ ಅತಿಶಯಿಸಿ ವಿದೇಹಿಗೆ ಅತಿಶಯವಾಗಿ ಮೋಹಕಳಾದಳು. ೩೨.

೩೩. ಟೀ|| ಜಾನಕಿಯ=ಸೀತೆಯ, ರೂಪವಿಭವಂ=ಸೌಂದರ್ಯಾತಿಶಯವು, ಜನಕಂಗೆ=ಜನಕಮಹಾರಾಜನಿಗೆ, ಹರ್ಷದ=ಸಂತೋಷದ, ಒದವಂ=ಪ್ರಾಪ್ತಿಯನ್ನು, ಜನಿಯಿಸಿ=ಉಂಟುಮಾಡಿ, ಈ ವನಿತೆಗೆ=ಈ ಸ್ತ್ರೀಗೆ, ಅನುರೂಪಂ=ತಕ್ಕ, ನೃಪಸುತಂ=ರಾಜಪುತ್ರನು, ವರಂ=ಪತಿಯಾಗುವನು, ಆವನೋ=ಯಾವನಿದ್ದಾನೋ ಎಂಬ, ಮನದುಮ್ಮಳಮಂ=ಮನಸ್ಸಿನ ದುಃಖವನ್ನು, ಮಾಡಿತ್ತು=ಉಂಟುಮಾಡಿತು.

ತಾ|| ಸೀತೆಯ ಸೌಂದರ್ಯಾತಿಶಯವು ಜನಕನಿಗೆ ಒತ್ತಟ್ಟಿಗೆ ಸಂತೋಷವನ್ನು ಮತ್ತೊತ್ತಟ್ಟಿಗೆ ಇವಳಿಗೆ ಅನುರೂಪನಾದ ವರನೆಲ್ಲಿ ದೊರೆತಾನು ಎಂಬ ಚಿಂತೆಯನ್ನು ಉಂಟುಮಾಡಿತು. ೩೩.

೩೪. ಟೀ|| ಜನಕಜೆ=ಸೀತೆಯು, ಶೈಶವಮಂ=ಬಾಲ್ಯವನ್ನು, ಮಿಾರೆ=ಅತಿಕ್ರಮಿಸಲು, [ನವೀನಯೌವನವಿಭವಂ] ನವೀನ=ನೂತನವಾದ, ಯೌವನವಿಭವಂ=ಪ್ರಾಯದಸಂಪತ್ತು, ಏಂತಲೆದೋರಿದುದೋ=ಏನುಹುಟ್ಟಿತೋ [ಅದನ್ನು ವರ್ಣಿಸುವುದಸಾಧ್ಯವೆಂದು ಭಾವ.] [ನಿಜಪಲ್ಲವಾಧರಂ] ನಿಜ=

ಅಂತು ಜಾನಕಿ ಜನನೀಜನಕರ ಮನಕ್ಕೆ ಸಂತೋಷಮನೊದವಿಸುತಿರ್ಪಿನ ಮೊಂದುದಿವಸಂ—

ಮ||ಸ್ರ||
ಚರನೊರ್ವಂ ಬಂದು ಬೇಗಂ ಜನಕನ ಸಭೆಯಂ ಪೊಕ್ಕು ಮೆಯ್ಯಿಕ್ಕಿ ಭೀತಾ |
ತುರ ಚಿತ್ತಂ ಚೀನ ಚೇಲಾಂಚಲಮನಧರದತ್ತುಯ್ದು ಚಿತ್ತೈಸಿದೊಂದಂ ||
ಹರಿವಂಶೋತ್ತಂಸ ಲೋಕಾದ್ಭುತಮನಸಮಯೋತ್ಪಾತಮಂಲೋಕಲುಂಟಾ|
ಕರಸಂಖ್ಯಾತರ್ ಕಿರಾತರ್ ನೆರೆದು ನಿಖಿಲ ಭೂಚಕ್ರಮಂ ಸೂಱೆಗೊಂಡರ್ ||

ಸ್ವಕೀಯವಾದ, ಪಲ್ಲವಾಧರಂ=ಚಿಗುರಿನಂತಿರುವ ತುಟಿಯು, ಮುಗುಳ್ನಗೆಯ=ಮಂದಹಾಸವನ್ನು, ಒಂದೆರಡುಮಂ=ಒಂದೆರಡನ್ನೂ, ಕಡೆಗಣ್=ಅಪಾಂಗವು, ನನೆಯಸರಲ್ಗಳೊಂದೆರಡುಮಂ=ಒಂದೆರಡು ಹೂವಿನ ಬಾಣಗಳನ್ನೂ, ಕುಡುವುರ್ವು=ಡೊಂಕಾದಹುಬ್ಬು, ಕಾಮದೇವನ=ಮನ್ಮಥನ, ಒಂದೆರಡು ಮಂಕುಡುವಿಲ್ಲಂ=ಒಂದೆರಡು ವಕ್ರವಾದ ಧನುಸ್ಸುಗಳನ್ನೂ, ಪಡೆದ=ಹೊಂದಿದ, ಒಪ್ಪಮಂ=ರೀತಿಯನ್ನು, ಅಪ್ಪುಗೆಯ್ವಿನಂ=ಅಂಗೀಕರಿಸಲು,

ತಾ|| ಸೀತೆಗೆ ಬಾಲ್ಯವು ಕಳೆದು ಯೌವನವು ಬರಲು ಅವಳ ಮುಗುಳ್ನಗೆಗೂಡಿದ ತುಟಿಯು ಚಿಗುರಿನಂತೆಯೂ, ಕಡೆಗಣ್ಣ ಹೊಳಪು ಪುಷ್ಪಬಾಣದಂತೆಯೂ, ಹುಬ್ಬು ಮನ್ಮಥ ಧನುಸ್ಸಿನಂತೆಯೂ ಇದ್ದುವು. ೩೪

ಗದ್ಯ|| ಜಾನಕಿ=ಸೀತೆಯು, ಅಂತು=ಹಾಗೆ, ಜನನೀಜನಕರ=ತಾಯಿತಂದೆಗಳ, ಮನಕ್ಕೆ=ಮನಸ್ಸಿಗೆ, ಸಂತೋಷಮಂ=ಆನಂದವನ್ನು, ಒದವಿಸುತಿರ್ಪಿನಂ=ಉಂಟುಮಾತ್ತಿರಲು ; ಒಂದುದಿವಸಂ=ಒಂದು ದಿನದಲ್ಲಿ.

೩೫. ಒರ್ವಂಚರಂ=ಒಬ್ಬ ದೂತನು, ಬೇಗಂ=ಜಾಗ್ರತೆಯಾಗಿ, ಬಂದು, ಜನಕನ=ಜನಕರಾಜನ, ಸಭೆಯಂ=ಆಸ್ಥಾನವನ್ನು, ಪೊಕ್ಕು=ಪ್ರವೇಶಿಸಿ, ಮೆಯ್ಯಿಕ್ಕಿ=ನಮಸ್ಕರಿಸಿ, [ಭೀತಾತುರಚಿತ್ತಂ] ಭೀತ=ಹೆದರಿದ, ಆತುರ=ದುಃಖಗೊಂಡ, ಚಿತ್ತಂ=ಮನಸ್ಸುಳ್ಳವನಾಗಿ, [ಚೀನಚೇಲಾಂಚಲಮಂ] ಚೀನ=ಸೂಕ್ಷ್ಮವಾದ, ಚೇಲ=ವಸ್ತ್ರದ, ಅಂಚಲವಂ=ಅಗ್ರಭಾಗವನ್ನು, ಅಧರದತ್ತ=ತುಟಿಯಕಡೆಗೆ, ಉಯ್ದು=ತೆಗೆದುಕೊಂಡು ಹೋಗಿ, [ಹರಿವಂಶೋತ್ತಂಸ] ಹರಿ=ಸೂರ್ಯನ, ವಂಶ=ಕುಲಕ್ಕೆ, ಉತ್ತಂಸ=ಅಲಂಕಾರವಾದವನೇ, ಇದೊಂದು ಲೋಕಾದ್ಭುತರಸಮಂ=ಇದೊಂದು ಜನಗಳಿಗೆ

ಕಂ|| ಇಱಿದು ತವಿಸುವೊಡೆ ಪಡೆ ನಾ |
ಡೆಱೆಯರ ಕೈಯಳವಿಯಲ್ತು ಕಂಡಂತುಟನೆ ||
ನ್ನಱಿವಂತುಟನುಳ್ಳಂತುಟ |
ನಱಿ ಪುವೆನವಧರಿಪುದೆಂದು ಚರನಿಂತೆಂದಂ ||೩೬||

ಕಂ|| 1ಧನದಾಚಲಕ್ಕೆ ಬಡಗಣ |
ದೆಸೆ ವಿಜಯಾರ್ಧಾಚಲಕ್ಕೆ ತೆಂಕಣದೆಸೆ ದು ||
ಷ್ಟ ನಿವಾಸಮರ್ಧ2ಪರಮೆಂ |
ಬ ನಾಮದಿಂ ಮ್ಲೇಚ್ಛದೇಶಮಿರ್ಪುದಪಾರಂ ||೩೭||

ಆಶ್ಚರ್ಯವನ್ನುಂಟುಮಾಡುವ ವಿಚಾರವನ್ನು ಕೇಳು, ಅಸಮಯೋತ್ಪಾತಮಂ= ಆ ಕಾಲದಲ್ಲಾದ ದುಶ್ಶಕುನವನ್ನು, ಚಿತ್ತೈಸು=ಕೇಳು, ಅಸಂಖ್ಯಾತರ್= ಲೆಕ್ಕವಿಲ್ಲದ, ಲೋಕಲುಂಟಾಕರ್=ಲೋಕವಂಚಕರಾದ, ಕಿರಾತರ್=ಬೇಡರು, ನೆರೆದು=ಕೂಡಿ, ನಿಖಿಲಭೂಚಕ್ರಮಂ=ಎಲ್ಲಾ ಭೂಮಂಡಲವನ್ನೂ, ಸೂರೆಗೊಂಡರ್=ಲೂಟಿಮಾಡಿದರು.

ತಾ|| ಹೀಗೆ ತಂದೆತಾಯಿಗಳಿಗಾನಂದವನ್ನೀಯುತ್ತಿರುವಲ್ಲಿ ಒಂದು ದಿನ ಚಾರನೊಬ್ಬನು ಭೀತಿಯಿಂದೋಡಿಬಂದು ದೊರೆಗೆ ನಮಸ್ಕರಿಸಿ ಬಾಯಿಗೆ ಬಟ್ಟೆಯನ್ನು ಮರೆಮಾಡಿಕೊಂಡು ಸ್ವಾಮೀ ಲೆಕ್ಕವಿಲ್ಲದಷ್ಟು ಬೇಡರ ಪಡೆ ಬಂದು ಲೋಕವನ್ನು ಸೂರೆಮಾಡುತ್ತಿದೆ. ೩೫.

೩೬. ಟೀ|| ಪಡೆ=ಸೈನ್ಯವು, ಇರಿದು=ಹೊಡೆದು, ತವಿಸುವೊಡೆ= ನಾಶಮಾಡುವುದಕ್ಕೆ, ನಾಡೆರೆಯರ=ದೇಶಾಧಿಪತಿಗಳ, ಕೈಯಳವಿ=ಕಯ್ಯಿಂದ ಸಾಧ್ಯವು, ಅಲ್ತು=ಅಲ್ಲ, ಕಂಡಂತುಟಂ=ನೋಡಿದಷ್ಟನ್ನು, ಎನ್ನರಿವಂತುಟಂ=ನನ್ನ ತಿಳುವಳಿಕೆ ಇದ್ದಷ್ಟನ್ನು, ಉಳ್ಳಂತುಟಂ=ಇರುವಷ್ಟನ್ನು, ಅರಿಪುವೆಂ=ತಿಳಿಸುವೆನು, ಅವಧರಿಪುದು=ಲಾಲಿಸಬೇಕು, ಎಂದು, ಚರಂ=ದೂತನು, ಇಂತು=ಮುಂದೆ ಹೇಳುವ ಪ್ರಕಾರ, ಎಂದಂ=ಹೇಳಿದನು.

ತಾ|| ಅದನ್ನು ಹಿಮ್ಮೆಟ್ಟಿಸಲು ಬರಿಯ ನಮ್ಮ ಸೇನೆಯಿಂದಸಾಧ್ಯ. ಒಂದು ವಿಚಾರವನ್ನು ತಿಳಿದಮಟ್ಟಿಗೆ ಹೇಳುತ್ತೇನೆ. ಕ್ಷಮಿಸಿ ಎಂದು ಹೇಳಲು ಆರಂಭಿಸಿ. ೩೬.

1 ಕನಕಾ, ಚ. 2 ಪುರ, ಗ.

ಅಲ್ಲಿ ಮಯೂರಮಾಲೆಯೆಂಬ ಶಬರ ಶಿಬಿರಮನಾಳ್ವ ತರಂಗತಮನೆಂಬ ಶಬರ ನಾಯಕಂ ತನ್ನಾಳ್ವನಾಡ ಬೇಡವಡೆಯೆಲ್ಲಮಂ ಕೂಡಿಕೊಂಡು ಕಪೋತ ಕಾಂಭೋಜ ಕಣಾದಿ ದೇಶಂಗಳಂ ಕಿಡಿಸುತ್ತುಂ ಬಂದು—

ಉ|| ನಾಡರಸಂ ತಗುಳ್ದು ಕಡೆಗಾಲದ ಮಾರಿಯ ಮೂರಿಯಂತೆ ಕ |
1ಣ್ಣೋಡದೆ ಬಾಲ ವೃದ್ಧವನಿತಾ ವಧೆಗೆಯ್ದು ಕವರ್ತೆಗೊಂಡು ಸು||
ಟ್ಟೋಡಿಸಿ ಜಾತಿಯಂ ಕಿಡಿಸಿ ನಾಡನವಂ ಕಡಿದಿಕ್ಕಿ ಮೆಚ್ಚಿದಂ |
ಬೇಡರಸಂ ತರಂಗತಮನಾನಿರೆ ಬೇಡರಸೆಂಬ ಗರ್ವದಿಂ ||೩೮||

---

೩೭. ಟೀ|| ಧನದಾಚಲಕ್ಕೆ=ಧನದ ಪರ್ವತಕ್ಕೆ, ಬಡಗಣದು ಎನೆ=ಉತ್ತರದಿಕ್ಕಿನಲ್ಲಿ, ವಿಜಯಾರ್ಧಾಚಲಕ್ಕೆ=ವಿಜಯಾರ್ಧ ಪರ್ವತಕ್ಕೆ, ತೆಂಕಣದು ಎನೆ=ದಕ್ಷಿಣದಿಕ್ಕಿನದು ಎನ್ನಲು, ದುಷ್ಟನಿವಾಸಂ=ದುರ್ಜನರಿಗೆ ಆಶ್ರಯವಾದ, [ಮತ್ತು] ಅಪಾರಂ=ಕೊನೆಯಿಲ್ಲದ, ಮ್ಲೇಚ್ಛದೇಶಂ=ಕಿರಾತದೇಶವು, ಅರ್ಧಪರಮೆಂಬನಾಮದಿಂ=ಅರ್ಧಪರವೆಂಬ ಹೆಸರಿನಿಂದ, ಇರ್ಪುದು=ಇರುವುದು,

ತಾ|| ಧನದ ಪರ್ವತದ ಉತ್ತರ ವಿಜಯಾರ್ಧಪರ್ವತದ ದಕ್ಷಿಣಕ್ಕೆ ಇರುವ ಅರ್ಧಪರವೆಂಬ ಮ್ಲೇಚ್ಛದೇಶವು ದುಷ್ಟರಿಗಾವಾಸಸ್ಥಾನವಾಗಿದೆ ಅದನ್ನಾಳುವ ತರಂಗತಮನೆಂಬ ನಾಯಕನು ಸೇನಾಸಮೇತನಾಗಿ ಹೊರಟು ಕಾಂಭೋಜಾದಿ ದೇಶಗಳನ್ನು ಗೆದ್ದು, ೩೭.

ಗದ್ಯ|| ಅಲ್ಲಿ=ಆದೇಶದಲ್ಲಿ, ಮಯೂರಮಾಲೆಯೆಂಬ, ಶಬರಶಿಬಿರಮಂ=ಕಿರಾತರ ಪಾಳ್ಯವನ್ನು, ಆಳ್ವ=ರಕ್ಷಿಸುವ, ತರಂಗತಮನೆಂಬ, ಶಬರನಾಯಕಂ=ಕಿರಾತಾಧಿಪತಿಯು, ತನ್ನ ಆಳ್ವ=ತಾನು ಕಾಪಾಡುವ, ನಾಡ=ದೇಶದ, ಬೇಡವಡೆಯೆಲ್ಲಮಂ=ಎಲ್ಲಾ ಕಿರಾತಸೈನ್ಯವನ್ನು, ಕೂಡಿಕೊಂಡು=ಸೇರಿಸಿಕೊಂಡು, ಕಪೋತಕಾಂಭೋಜಕಣಾದಿ ದೇಶಂಗಳಂ=ಕಪೋತ ಮುಂತಾದ ದೇಶಗಳನ್ನು, ಕಿಡಿಸುತ್ತಂ=ಹಾಳುಮಾಡುತ್ತಾ, ಬಂದು

೩೮. ಟೀ|| ನಾಡರಸಂ=ದೇಶಾಧಿಪನಾದ, ತರಂಗತಮಂ=ತರಂಗತಮನು, ಕಡೆಗಾಲದ=ಪ್ರಳಯಕಾಲದ, ಮಾರಿಯ=ದುರ್ದೇವತೆಯ, ಮೂರಿಯಂತೆ=ಸಮೂಹದಹಾಗೆ, ಕಣ್ಣೋಡದೆ=ನೋಡಿದಮಾತ್ರಕ್ಕೇ ದಿ

---

1 ಣ್ಣಾಡದೆ, ಚ.

ಎಂದು ಬಿನ್ನವಿಸೆ—

ಕಂ॥ ಚರ ವಚನಮನಾಲಿಸಿ ತುಂಬು।
ಬುರಕೊಳ್ಳಿಯ ತೆಱದಿನಂಬರಕ್ಕೆ ಸಿಡಿಲ್ದಾ ॥
ಹರಿವಂಶಕೇತು ಕಣ್ಕಿಸು ।
ಸೆರೆವರಿಯೆ ಕೃತಾಂತನಂತೆ ಮುಳಿದಿಂತೆಂದಂ ॥೩೯॥

ಗಿಲುಪಡದೆ [ಬಾಲವೃದ್ಧವನಿತಾವಧೆಗೆಯ್ದು] ಬಾಲ=ಹುಡುಗರೇನು, ವೃದ್ಧ=ಮುದುಕರೇನು, ವನಿತಾ=ಸ್ತ್ರೀಯರೇನು, ಇವರ, ವಧೆಗೆಯ್ದು=ಸಂಹರಿಸಿ, ಕವರ್ತೆಗೊಂಡು=ಸುಲಿದುಕೊಂಡು, ಸುಟ್ಟು=ದಹಿಸಿ, ಓಡಿಸಿ=ಪಲಾಯಮಾನರನ್ನು ಮಾಡಿ, ಜಾತಿಯಂ=ಬ್ರಾಹ್ಮಣಾದಿ ವರ್ಣವನ್ನು, ಕೆಡಿಸಿ=ಹಾಳ್ಮಾಡಿ, ಬೇಡರಸಂ=ಕಿರಾತಾಧಿಪತಿಯಾದ, ಆಂ=ನಾನು, ಇರೆ=ಇರುತ್ತಿರಲು, ಅರಸು=ರಾಜನು, ಬೇಡ=ಆವಶ್ಯವಿಲ್ಲ, ಎಂಬ, ಗರ್ವದಿಂ=ಅಹಂಕಾರದಿಂದ, ನಾಡಂ=ದೇಶವನ್ನು, ಕಡಿದಿಕ್ಕಿ=ಛೇದಿಸಿ, ಮೆಚ್ಚಿದಂ=ಪ್ರೀತಿಸಿದನು, ಎಂದು=ಎಂಬದಾಗಿ, ಬಿನ್ನವಿಸೆ=ಅರಿಕೆಮಾಡಲು.

ತಾ॥ ಪ್ರಳಯಕಾಲದ ಮೃತ್ಯುದೇವತೆಯರ ಸಮೂಹದಂತೆ ಬಾಲರು ವೃದ್ಧರು ಸ್ತ್ರೀಯರು ಎಂದು ಲಕ್ಷಿಸದೆ ಎಲ್ಲವನ್ನು ಧ್ವಂಸಮಾಡಿ ಬೇಡರರಸನಾಗಿ ನಾನಿರುವಾಗ ಬೇರೆ ಅರಸನೇ ಬೇಡವೆಂದು ಹೇಳುತ್ತಾ ಬಹು ಕೊಬ್ಬಿದಾನೆ ಎಂದು ವಿಜ್ಞಾಪಿಸಿದನು. ೩೮.

೩೯. ಟೀ॥ [ಹರಿವಂಶಕೇತು] ಹರಿ=ಸೂರ್ಯನ, ವಂಶ=ಕುಲಕ್ಕೆ, ಕೇತು=ಧ್ವಜಪ್ರಾಯನಾದ, ಜನಕನು, [ಚರವಚನಮಂ] ಚರ=ದೂತನ, ವಚನಮಂ=ಮಾತನ್ನು, ಆಲಿಸಿ=ಕೇಳಿ, ತುಂಬುರಕೊಳ್ಳಿಯತೆರದಿಂ=ತುಂಬರೇ ಸೌದೆಯ ಕೊಳ್ಳಿಯಂತೆ, ಅಂಬರಕ್ಕೆ=ಆಕಾಶಕ್ಕೆ, ಸಿಡಿಲ್ದು=ಹಾರಿ, ಕಣ್=ನೇತ್ರವು, ಕಿಸುಸೆರೆವರಿಯೆ=ಕೆಂಪುನರಗಳನ್ನು ಹೊಂದಲು, ಕೃತಾಂತನಂತೆ=ಯಮನಹಾಗೆ, ಮುಳಿದು=ಕೋಪಿಸಿ, ಇಂತು=ಹೀಗೆ, ಎಂದಂ=ಹೇಳಿದನು.

ತಾ॥ ದೂತನ ಮಾತನ್ನು ಕೇಳಿ ಜನಕನು ರೋಷದಿಂದ ಕಿಡಿಕಿಡಿಯಾಗಿ ಕೆಂಗಣ್ಣಿಂದ ಕೂಡಿ ಯಮನಂತೆ ಆಗ್ರಹದಿಂದಿಂತೆಂದನು. ೩೯.

ಉ|| ಒಂದೆ ಕುಠಾರದಿಂದಡವಿಯಂ ಕಡಿವಂತಿರೆ ಪೋಡುಗಾಱನೆ |
ನ್ನೊಂದೆ ಭುಜಾಸಿಯಿಂ ಶಬರಕೋಟಿಯನಿಕ್ಕಿ ಪಿಶಾಚ ಕೋಟಿಗಾ||
ನಂದಮನುಂಟುಮಾೞ್ಪೆನುೞಿದಾನಿದನೇಳಿಸಿದಂದು ದುರ್ಯಶೋ |
ದುಂದುಭಿ ನಾದಮಾವರಿಸದಿರ್ಕುಮೆ ಕೂಡೆ ಜಗಂಗಳೆಲ್ಲಮಂ || ೪೦

ಕಂ|| ಇಱಿಯದೆ ಬೇಡಿದೊಡೀಯದೆ |
ಬಱಿದೆ ಕುಲೀನತೆಗೆ ಬೆಸೆದು ಪಾರ್ಥಿವ ಶಬ್ದ ||
ಕ್ಕೆಱವಟ್ಟೆನಿಸಿ ಧರಿತ್ರಿಗೆ |
ಪೊಱೆಯೆನಿಪಂ ರಾಜ ನಾಮಧಾರಕನಲ್ತೇ ||೪೧||

೪೦, ಟೀ|| ಪೋಡುಗಾರಂ=ಹುರುಡಿಗನಾದ ಜನಕನು, ಒಂದೆಕುಠಾರದಿಂ=ಒಂದು ಕೊಡಲಿಯ ಏಟಿನಿಂದಲೇ, ಅಡವಿಯಂ=ಅರಣ್ಯವನ್ನು, ಕಡಿವಂತಿರೆ=ಕತ್ತರಿಸುವ ಹಾಗೆ, ಎನ್ನ=ನನ್ನ, ಭುಜಾಸಿಯಿಂ=ಕೈಯ್ಯಲ್ಲಿರುವ ಖಡ್ಗದಿಂದ, ಶಬರಕೋಟಿಯಂ=ಅನೇಕ ಬೇಡರನ್ನು, ಇಕ್ಕಿ=ಕೊಂದು, ಪಿಶಾಚಕೋಟಿಗೆ=ಅನೇಕ ಪಿಶಾಚಿಗಳಿಗೆ, ಆನಂದಮಂ=ಸಂತೋಷವನ್ನು, ಉಂಟುಮಾಳ್ಪಂ=ಹುಟ್ಟಿಸುವೆನು, ಆಂ=ನಾನು, ಇದಂ=ಈ ಪ್ರತಿಜ್ಞೆಯನ್ನು, ಏಳಿಸಿದಂದು=ತಿರಸ್ಕರಿಸಿದಾಗ, [ದುರ್ಯಶೋದುಂದುಭಿನಾದಂ] ದುರ್ಯಶಃ=ಅಪಕೀರ್ತಿಯೆಂಬ, ದುಂದುಭಿ=ನಗಾರಿಯ, ನಾದಂ=ಶಬ್ದವು, ಕೂಡೆ=ಕೂಡಲೆ, ಜಗಂಗಳೆಲ್ಲಮಂ=ಎಲ್ಲಾ ಲೋಕಗಳನ್ನು, ಆವರಿಸದಿರ್ಕುಮೆ=ವ್ಯಾಪಿಸದೆ ಇರುವುದೇ ? [ಈ ಪ್ರತಿಜ್ಞೆಯನ್ನು ಪೂರೈಸದಿದ್ದರೆ ನನಗೆ ಅಪಯಶಸ್ಸು ಬಾರದೆ ಇರುವುದೇ ಎಂದು ಭಾವ.]

ತಾ|| ಕೊಡಲಿಯೊಂದೇ ಇದ್ದರೂ ಅದರಿಂದಲೇ ಕಾಡನ್ನೆಲ್ಲಾ ನಿರ್ಮೂಲಮಾಡುವಂತೆ ನಾನೊಬ್ಬನೇ ನನ್ನ ಕತ್ತಿಯಿಂದ ಇವರೆಲ್ಲರನ್ನೂ ಸಂಹರಿಸಿ ಪಿಶಾಚಗಳಿಗೆ ತೃಪ್ತಿಪಡಿಸುವೆನು. ತಾನಾಗಿ ಒದಗಿದ ಇಂತ ಸಂದರ್ಭವನ್ನು ನಿರ್ಲಕ್ಷಿಸಿ ಕುಳಿತುಕೊಂಡರೆ ಅಪಯಶಸ್ಸು ಬರುವುದಿಲ್ಲವೆ ?

೪೧. ಟೀ|| ಇರಿಯದೆ=ಶತ್ರುಗಳನ್ನು ಸಂಹರಿಸದೆ, ಬೇಡಿದೊಡೆ=ಯಾಚಕರು ಬಂದು ಪ್ರಾರ್ಥಿಸಿದರೆ, ಈಯದೆ=ಕೊಡದೆ, ಬರಿದೆ=ಸುಮ್ಮನೆ, ಕುಲೀನತೆಗೆ=ಸತ್ಕುಲದಲ್ಲಿ ಹುಟ್ಟಿದುದಕ್ಕೆ, ಬೆಸೆದು=ಅಹಂಕರಿಸಿ, ಪಾರ್ಥಿವ ಶಬ್ದಕ್ಕೆ=ಪೃಥಿವೀಪತಿಯೆಂಬ ಹೆಸರಿಗೆ, ಎರವಟ್ಟೆನಿಸಿ=ಅಪಾತ್ರನೆನಿಸಿಕೊಂ

ಎಂದು ಪರಿಚ್ಛೇದಿಸಿ ನುಡಿಯೆ—

ಕಂ|| ನಿನಗೆ ಸಹಾಯಯಂ ದಶರಥ |
ಜನನಾಥಂ ತತ್ಸಹಾಯದಿಂ ಲುಬ್ಧಕ ವಾ ||
ಹಿನಿಯಂ ಮರ್ದಿಸು ಧುರದೊಳ್ |
ನಿನಗಂ ತೆನಗಂ ಜವಂಗಮಿದಿರಾಂಪವರಾರ್ ||೪೨||

ಎಂದು ಮಂತ್ರಿಮಂಡಲಂ ಬಿನ್ನವಿಸೆ ಜನಕಂ ದಶರಥನಲ್ಲಿಗೆ ಲೇಖವಾಹಕರ ನಟ್ಟಿ ಸಮರಸನ್ನದ್ಧನಾಗಿ ಬೇಗವೊಂದೆರಡು ಪಯಣಮಂ ನಡೆದ ನಿತ್ತಲ್—

ಡು, ಧರಿತ್ರಿಗೆ=ಭೂಮಿಗೆ, ಪೊರೆ=ಭಾರವು, ಎನಿಪಂ=ಅನ್ನಿಸಿಕೊಳ್ಳುವವನು, [ರಾಜನಾಮಧಾರಕನಲ್ತೇ] ರಾಜನಾಮ=ರಾಜನೆಂಬ ಹೆಸರನ್ನು, ಧಾರಕನಲ್ತೇ=ಧರಿಸಿದವನಲ್ಲವೇ ?

[ಯುದ್ಧದಲ್ಲಿ ಹಗೆಗಳನ್ನು ಕೊಲ್ಲದೆಯೂ, ಯಾಚಕರಿಗೆ ದಾನಮಾಡದೆಯೂ ನಾನೂ ದೊರೆಯೆಂದು ಬೆರೆತಿರುವವನು ಭೂಭಾರಕನೆನಿಸಿಕೊಳ್ಳುವನಲ್ಲದೆ, ಅವನಿಗೆ ರಾಜನಾಮವು ಸಾರ್ಥಕವಾಗುವುದಿಲ್ಲವೆಂದು ಭಾವ.]

ತಾ|| ಶೌರ್ಯದಿಂದ ಯುದ್ಧಮಾಡದೆಯೂ ಬೇಕಾದ್ದನ್ನು ದಾನಮಾಡದೆಯೂ ಸುಮ್ಮನೆ ಕ್ಷತ್ರಿಯವಂಶದಲ್ಲಿ ಜನಿಸಿದೆನೆಂಬ ಕಾರಣ ಮಾತ್ರದಿಂದ ರಾಜನೆಂದು ಹೆಸರಿಟ್ಟುಕೊಳ್ಳುವದಕ್ಕೆ ಆಧಾರನಾಗಿ ಭೂಭಾರವಾಗಿರುವವನು ಹೆಸರುಮಾತ್ರದ ರಾಜನೇ ಸರಿ. ೪೧.

೪೨. ಟೀ|| ಎಂದು=ಎಂಬದಾಗಿ, ಪರಿಚ್ಛೇದಿಸಿ=ನಿರ್ಣಯಿಸಿ, ನುಡಿಯೆ=ಹೇಳಲು, ದಶರಥಜನನಾಥಂ=ದಶರಥರಾಯನು, ನಿನಗೆ, ಸಹಾಯಂ=ಸಹಾಯಕನು, [ಆಗಿದ್ದಾನೆ] ತತ್ಸಹಾಯದಿಂ=ಅವನ ಸಹಾಯದಿಂದ, ಲುಬ್ಧಕವಾಹಿನಿಯಂ=ಬೇಡರಸೈನ್ಯವನ್ನು ಮರ್ದಿಸು=ಕೊಲ್ಲು, ನಿನಗಂ=ನಿನಗೂ, ತನಗಂ=ಅವನಿಗೂ, ಜವಂಗಂ=ಯಮನಿಗೂ, ಇದಿರಾಂಪವರ್=ಮುಂದೆ ನಿಲ್ಲುವವರು, ಆರ್=ಯಾರು ? ಎಂದು=ಎಂಬದಾಗಿ, ಮಂತ್ರಿಮಂಡಲಂ=ಮಂತ್ರಿಗಳ ಸಮೂಹವು, ಬಿನ್ನವಿಸೆ=ಅರಿಕೆಮಾಡಲು, ಜನಕಂ=ಜನಕರಾಯನು, ದಶರಥನಲ್ಲಿಗೆ=ದಶರಥನ ಸಮೀಪಕ್ಕೆ, ಲೇಖವಾಹಕರಂ=ಓಲೇಕಾರರನ್ನು, ಅಟ್ಟಿ=ಕಳುಹಿಸಿ, ಸಮರಸನ್ನದ್ಧನಾಗಿ=ಯು

ಕಂ|| ಬಾರಿಸಿ ಲೇಖಾರ್ಥಮನವ |
ಧಾರಿಸಿ ದಶರಥಮಹೀಭುಜಂ ಪೊಯ್ಸುವುದುಂ ||
ಭೇರಿಯ ಬಂಭಾರವಮದು |
ಭೈರವ ರವದಂತೆ ತೀವೆ ಗಗನೋದರಮಂ ||೪೩||

ಆ ವೃತ್ತಾಂತಮಂ ತಿಳಿದು—

ಚಂ|| ಪುದಿಯೆ ವಿಭೂಷಣಾಂಶು ನಭಮಂ ತನುದೀಧಿತಿ ಬೇಱಿದೊಂದು ಜೊ|
ನ್ನದ ಸಿರಿ ಕಾರ ಕಾರಿರುಳ ಮೆಯ್ಸಿರಿ ತಪ್ಪದೆನಲ್ ದಿಗಂತಮಂ ||
ಪುದಿಯೆ ಬಲಾಚ್ಯುತರ್ ತರುಣಕೇಸರಿವೋಲ್ ಪುಗುತಂದರಿರ್ವರುಂ|
ಕದನ ಮದೋದ್ಧತರ್ ದಶರಥಕ್ಷಿತಿನಾಥ ಸಭಾಂತರಾಲಮಂ ||೪೪

ದ್ಧಕ್ಕೆ ಸಿದ್ಧನಾಗಿ, ಬೇಗಂ=ಶೀಘ್ರವಾಗಿ, ಒಂದೆರಡುಪ್ರಯಣಮಂ=ಒಂದು ಅಥವಾ ಎರಡು ಪ್ರಯಾಣಗಳನ್ನು, ನಡೆದಂ=ಹೋದನು, ಇತ್ತಲ್=ಈಕಡೆ.

ತಾ|| ಎಂಬದಾಗಿ ಪಾಂಡಿತ್ಯ ತೋರಿಸಿ ಮಾತನಾಡಲು ಆಗ ಮಂತ್ರಿಮಂಡಳವು ಸ್ವಾಮಿ! ಶೂರನಾದ ದಶರಥನ ಸಹಾಯದಿಂದ ಬೇಡರನ್ನು ನಿಗ್ರಹಿಸಿರಿ. ಅವನಿಗೂ, ನಿನಗೂ, ಯಮನಿಗೂ ಪ್ರತಿಭಟಿಸುವ ಶೂರರಾರಿದಾರೆ ಎಂದು ವಿಜ್ಞಾಪಿಸಲು ದಶರಥನಲ್ಲಿಗೆ ದೂತರನ್ನಟ್ಟಿ ತಾನು ಸನ್ನದ್ಧನಾಗಿ ಪ್ರಯಾಣಹೊರಟನು. ಈ ಕಡೆ ೪೨.

೪೩. ಟೀ|| ದಶರಥಮಹೀಭುಜಂ=ದಶರಥರಾಜನು, ಬಾರಿಸಿ=ಲಕೋಟಿಯನ್ನೊಡೆದು, ಲೇಖಾರ್ಥಮಂ=ಬರವಣಿಗೆಯ ಅಭಿಪ್ರಾಯವನ್ನು, ಅವಧಾರಿಸಿ=ತಿಳಿದುಕೊಂಡು, ಭೇರಿಯ=ನಗಾರಿಯನ್ನು, ಪೊಯ್ಸುವುದುಂ=ಹೊಡೆಯಿಸಲು, ಅದುಬಂಭಾರವಂ=ಆ ಭೇರೀಧ್ವನಿಯು, ಭೈರವರವದಂತೆ=ಭೈರವನ ಕೂಗಿನಂತೆ, ಗಸನೋದರಮಂ=ಆಕಾಶದ ಒಳಭಾಗವನ್ನು, ತೀವೆ=ವ್ಯಾಪಿಸಲು, ಆ ವೃತ್ತಾಂತಮಂ=ಆ ಸಮಾಚಾರವನ್ನು, ತಿಳಿದು,

ತಾ|| ದಶರಥನು ಲೇಖನ ಸಾರಾಂಶವನ್ನು ಅರಿತು ರಣಭೇರಿಯನ್ನು ಹೊಡೆಯಿಸಲು ಆ ಮಹಾಶಬ್ದವು ಭೈರವನ ಧ್ವನಿಯಂತೆ ದಿಗಂತಕ್ಕೆಲ್ಲಾ ವ್ಯಾಪಿಸಲು. ೪೩.

೪೪. ಟೀ|| [ವಿಭೂಷಣಾಂಶು] ವಿಭೂಷಣ=ಆಭರಣಗಳ, ಅಂಶು=ಕಾಂತಿಯು, ನಭಮಂ=ಆಕಾಶವನ್ನು, ಪುದಿಯೆ=ವ್ಯಾಪಿಸಲು, [ತನು

ಅಂತು ಬಂದು ತಂದೆಯ ಪಾದಾರವಿಂದಕ್ಕೆರಗಿ—

ಕಂ|| ಬಲದೆಡಗೆಲ ದಾಸನದೊಳ್ |
ಬಲಾಚ್ಯುತರ್ ನೆಲಸಿ ಮೇರುನಗದುಪನಗವಮಂ ||
ಗೆಲೆವಂದರ್ಪಸರಿಸೆ ನಿ |
ಸ್ತುಲ ಮುಕ್ತಾಭರಣ ಕಿರಣ ನಿರ್ಝರ ನೀರಂ ||೪೫||

ದೀಧಿತಿ] ತನು=ದೇಹದ, ದೀಧಿತಿ=ಪ್ರಕಾಶವು, [ಬೇರದೊಂದುಜೊನ್ನದ ಸಿರಿ] ಬೇರದೊಂದು=ವಿಲಕ್ಷಣವಾದ, ಜೊನ್ನದಸಿರಿ=ಬೆಳುದಿಂಗಳ ಸಂಪತ್ತು, ಕಾರ=ವರ್ಷಾಕಾಲದ, ಕಾರಿರುಳ=ಕಪ್ಪಾದರಾತ್ರಿಯ, ಮೆಯ್ಸಿರಿ=ದೇಹಕಾಂತಿಯು, ತಪ್ಪದು=ನಿಶ್ಚಯವು, ಎನಲ್=ಅನ್ನಲಾಗಿ, ದಿಗಂತವಮಂ=ದಿಕ್ಪ್ರದೇಶವನ್ನು, ಪುದಿಯೆ=ವ್ಯಾಪಿಸಲು [ಕದನಮದೋದ್ಧತರ್] ಕದನಮದ=ಯುದ್ಧಮದದಿಂದ, ಉದ್ಧತರ್=ಕೊಬ್ಬಿದ [ಬಲಾಚ್ಯುತರ್] ಬಲ=ಲಕ್ಷ್ಮಣನೇನು, ಅಚ್ಯುತರ್=ರಾಮನೇನು, ಇವರಿರ್ವರುಂ=ಇವರಿಬ್ಬರೂ [ತರುಣಕೇಸರಿವೋಲ್] ತರುಣ=ಯೌವನದ, ಕೇಸರಿವೋಲ್=ಸಿಂಹದಂತೆ, (ದಶರಥಕ್ಷಿತಿನಾಥಸಭಾಂತರಾಳವಮಂ) ದಶರಥಕ್ಷಿತಿನಾಥ=ದಶರಥರಾಜನ, ಸಭಾಂತರಾಳವಮಂ=ಸಭಾಮಧ್ಯವನ್ನು, ಪುಗುತಂದರ್=ಪ್ರವೇಶಿಸಿದರು.

ತಾ|| ಆ ಧ್ವನಿಯನ್ನು ಕೇಳಿ ಆಭರಣಕಾಂತಿಯು ಎಲ್ಲಕಡೆಗೂ, ಎರಚುತ್ತಾ ಒಬ್ಬನ ಶರೀರಕಾಂತಿಯು ಬೆಳ್ದಿಂಗಳಂತೆಯೂ, ಮತ್ತೊಬ್ಬನದು ಕಾರ್ಗತ್ತಲೆಯಂತೆಯೂ ಇರಲು ಯುದ್ಧೋತ್ಸಾಹದಿಂದ ಕೂಡಿದ ಸಿಂಹದ ಮರಿಗಳಂತಿರುವ ಬಲಕೃಷ್ಣಸ್ವರೂಪರಾದ ರಾಮಲಕ್ಷ್ಮಣರಿಬ್ಬರೂ ದಶರಥನ ಸಭಾಮಧ್ಯಕ್ಕೆ ಬಂದರು. ೪೪.

ಗದ್ಯ|| ಅಂತು=ಹಾಗೆ, ಬಂದು, ತಂದೆಯ=ದಶರಥನ, ಪಾದಾರವಿಂದಕ್ಕೆ=ಚರಣಕಮಲಕ್ಕೆ, ಎರಗಿ=ನಮಸ್ಕರಿಸಿ.

೪೫. ಟೀ|| ಬಲದ=ದಕ್ಷಿಣಭಾಗದ, ಎಡಗೆಲದ=ಎಡಪಾರ್ಶ್ವದ, ಆಸನದೊಳ್=ಪೀಠದಲ್ಲಿ, ಬಲಾಚ್ಯುತರ್=ಲಕ್ಷ್ಮಣರಾಮರು, ನೆಲಸಿ=ಕುಳಿತು, ಮೇರುನಗರದ=ಮೇರುಪರ್ವತದ, ಉಪನಗವಮಂ=ಹತ್ತಿರದ ಬೆಟ್ಟವನ್ನು, ನಿಸ್ತುಲ=ಗುಂಡಾಗಿರುವ, ಮುಕ್ತಾಭರಣ=ಮುತ್ತಿನೊಡವೆಗಳ, ಕಿರ

ಅನಂತರಂ—

ಕಂ|| ಗೆಲೆನಿಟಿಲಮರ್ಧಚಂದ್ರನ |
ವಿಲಾಸಮಂ ನೊಸಲೊಳೆಸೆಯೆ ಕರ ಸರಸಿಜ ಕು ||
ಟ್ಮಲಮಮೃತಕಳೆಗೆ ದಂತಾಂ |
ಶು ಲೇಖೆ ಮಾರ್ಪೊಳೆಯೆ ರಾಮಚಂದ್ರಂ ನುಡಿದಂ ||೪೬||

ಕಂ|| ದೇವರ್ ದಿಗ್ವಿಜಯ ವ್ಯಸ |
ನಾವಷ್ಟಂಭದೊಳೆ ನಡೆಯದಾಟವಿಕರೊಳಾ ||
ದೀವಿಗ್ರಹಕ್ಕೆ ನಡೆವುದಿ |
ದಾವುದೊ ಜನಮಿಉಪೆಗಾನೆ ಮೊಗಮಿಕ್ಕುವುದೇ ||೪೭||

ಣ=ಕಾಂತಿಯೆಂಜ, ನಿರ್ಝರ=ಗಿರಿನದೀಪ್ರವಾಹದ, ನೀರಂ=ಜಲವು, ಪ್ರಸ ರಿಸೆ=ಹರಡುತ್ತಿರಲು, ಗೆಳೆವಂದರ್=ಜಯಿಸಿದರು, ನಿದರ್ಶನಾಲಂಕಾರ.

ತಾ|| ತಂದೆಗೆ ನಮಿಸಿ ಎಡಬಲಪಾರ್ಶ್ವದ ಪೀಠಗಳಲ್ಲಿ ಬಲಾಚ್ಯುತರು ಕುಳಿತಿದ್ದರೆ ಅವರ ಮುತ್ತಿನ ಹಾರಗಳ ಹೊಳಪು ಗಿರಿ ನದೀಪ್ರವಾಹದಂತಿರಲು ಮೇರುಪರ್ವತದ ಪಕ್ಕದ ಸಣ್ಣಪರ್ವತಗಳಂತಿದ್ದರು. ೪೫.

ಗದ್ಯ|| ಅನಂತರ=ಬಳಿಕ.

೪೬. ಟೀ|| ನಿಟಿಲಂ=ಹಣೆಯು, ಅರ್ಧಚಂದ್ರನ, ವಿಲಾಸಮಂ=ಲೀಲೆಯನ್ನು, ಗೆಲೆ=ಜಯಿಸುತ್ತಿರಲು, [ಕರಸರಸಿಜಕುಟ್ಮಲಂ] ಕರಸರಸಿಜ=ಕಮಲದಂತಿರುವ ಹಸ್ತವೆಂಬ ಕುಟ್ಮಲಂ=ಮೊಗ್ಗು, ನೊಸಲೊಳ್=ಹಣೆಯಲ್ಲಿ, ಎಸೆಯೆ=ಶೋಭಿಸುತ್ತಿರಲು, [ದಂತಾಂಶುಲೇಖೆ] ದಂತ=ಹಲ್ಲುಗಳ, ಅಂಶು=ಕಾಂತಿಗಳ, ಲೇಖೆ=ಪಂತಿಯು, ಅಮೃತಕಳೆಗೆ=ಅಮೃತಮಯವಾದ ಚಂದ್ರಕಳೆಯಹಾಗೆ, ಮಾರ್ಪೊಳೆಯೆ=ಪ್ರತಿಬಿಂಬಿಸುತ್ತಿರಲು, ರಾಮಚಂದ್ರಂ, ನುಡಿದಂ=ಹೇಳಿದನು.

ತಾ|| ಹಣೆಯು ಅರ್ಧಚಂದ್ರನಿಗಿಂತ ಸೊಗಸಾಗಿರಲು ಕೈಮುಗಿದುಕೊಂಡು ಹಲ್ಲಿನ ಕಾಂತಿಯು ಚಂದ್ರಕಳೆಯಂತೆ ತೋರ್ಪಡಲು ರಾಮಚಂದ್ರನು ಈ ರೀತಿ ಮಾತನಾಡಿದನು. ೪೬.

೪೭. ದೇವರ್=ನೀವು, (ದಿಗ್ವಿಜಯವ್ಯಸನಾವಷ್ಟಂಭದೊಳೆ) ದಿ

ಅದರಿಂ ದೇವರೀ ಬೆಸನನೆಮಗೆ ದಯೆಗಯ್ವುದಿವರನಾಸ್ವಾದಿತ ರಣ ರಸರ್ ಕಿಱಿಯರೆಂದು ಬಗೆಯವೇಡದೆಂತೆನೆ—

ಚ|| ಕಿಡಿ ಕಿಱಿದಾದೊಡಂ ಸುಡದೆ ಕಾನನಮಂ ತರುಣಾರ್ಕನಾದೊಡಂ |
ಕಿಡಿಸನೆ ತೀವ್ರಮಪ್ಪ ತಮಮಂ ಹರಿಬಾಲನಾದೊಡಂ ಪಡ ||
ಲ್ವಡಿಸನೆ ಗಂಧಸಿಂಧುರ ಘಟಾವಳಿಯಂ ಕಿಱಿಗೂಸೆನಲ್ಕೆವೇ |
ಡೆಡಱಿದರಂ ಜವಂಗೆ ಪೊಸತಿಕ್ಕನೆ ವಿಕ್ರಮಶಾಲಿ ಲಕ್ಷ್ಮಣಂ ||೪೮

ಕ್=ದಿಕ್ಕುಗಳ, ವಿಜಯ=ಜಯಿಸಬೇಕೆಂಬ, ವ್ಯಸನ=ಚಿಂತೆಯ, ಅವಷ್ಟಂಭ ದೊಳೆ=ಆಶ್ರಯದಲ್ಲಿ. ನಡೆಯದ=ಅಯೋಗ್ಯರಾದ, ಆಟವಿಕರೊಳ್=ಕಾಡು ಜನರಲ್ಲಿ, ಆದ=ಸಂಭವಿಸಿದ, ಈ ವಿಗ್ರಹಕ್ಕೆ=ಈ ಯುದ್ಧದಿಂದ, ಇದಾವು ದೊಜಸಂ=ಇದಾವಕೀರ್ತಿಯು, (ಬರುವುದು) ಇರುಪೆಗೆ=ಇರುವೆಗೆ, ಆನೆ ಯು, ಮೊಗಮಿಕ್ಕುವುದೇ=ಮುಖವನ್ನಿಡುವುದುಂಟೇ ? [ನೀನು ಆನೆಯಂ ತಿದ್ದೀಯೆ, ಬೇಡರು ಇರುವೆಯಂತಿದ್ದಾರೆ. ಅಂತವರ ಕೂಡ ಯುದ್ಧಮಾಡಿ ದ್ದರಿಂದುಂಟಾಗುವ ಕೀರ್ತಿಯು ಎಷ್ಟುಮಾತ್ರದ್ದೆಂದು ಭಾವ.]

ತಾ|| ಸ್ವಾಮಿ, ದಿಗ್ವಿಜಯಪ್ರಸಂಗದಲ್ಲೇ ಹೊರಡುವ ಆವಶ್ಯಕವಿ ಲ್ಲದಿದ್ದ ತಾವು ಈ ಕಾಡಬೇಡರೊಡನೆ ನಡೆಸುವ ಯುದ್ಧಕ್ಕೆ ಹೊರಟಿರುವದು ಯಾವ ಯಶಸ್ಕರ, ಇರುವೆಗಳನ್ನು ಗೆಲ್ಲಲು ಆನೆ ಮುಖತಃ ಹೊರಡುವು ದುಂಟೇ. ೪೭.

ಗದ್ಯ|| ಅದರಿಂ=ಆದಕಾರಣದಿಂದ, ದೇವರ್=ಸ್ವಾಮಿಗಳಾದ ನೀವು, ಎಮಗೆ=ನಮಗೆ, ಈ ಬೆಸನಂ=ಅಪ್ಪಣೆಯನ್ನು, ದಯೆಗೆಯ್ವುದು=ಕೊಡ ಬೇಕು, ಇವರು (ಅನಾಸ್ವಾದಿತರಣರಸರ್) ಅನಾಸ್ವಾದಿತ=ರುಚಿನೋಡ ಲ್ಪಡದ, ರಣರಸರ್=ಯುದ್ಧದರುಚಿಯುಳ್ಳವರು, ಕಿರಿಯರ್=ನೀಚರು, ಎಂದು, ಬಗೆಯಬೇಡ=ಯೋಚಿಸಬೇಡ, ಅದೆಂತೆನೆ=ಅದು ಹೇಗೆಂದರೆ,

ಆದ್ದರಿಂದ ಸ್ವಾಮಿ ಈ ಕಾರ್ಯಭಾರವನ್ನು ನಮಗಾಜ್ಞಾಪಿಸಿ. ಕಿರಿಯರೆಂದು ಯುದ್ಧವನ್ನರಿತವರಲ್ಲವೆಂದು ಭಾವಿಸಬೇಡಿ.

೪೮. ಟೀ|| ಕಿಡಿ=ಬೆಂಕಿಯು, ಕಿರಿದಾದೊಡಂ=ಚಿಕ್ಕದಾದರೂ, ಕಾನನಮಂ=ಅರಣ್ಯವನ್ನು, ಸುಡದೆ=ದಹಿಸುವುದಿಲ್ಲವೇ ? ತರುಣಾರ್ಕನಾ

ಕಂ|| ಮಾತೇನೊ ಕಿಂಕಿರಾತಂ |
ಪೂತಂತೆ ಕಿರಾತಸೇನೆ ಪುಣ್ಬಡೆ ಶರ ಸಂ ||
ಘಾತದ ಸವಿದೋರ್ಕುಂ ರಘು |
ಜಾತಂಗೆಂಟನೆಯ ಕೇಶವಂಗಿದಿರುಂಟೇ ||೪೯||

ದೊಡಂ=ಬಾಲಸೂರ್ಯನಾದರೂ, ತೀವ್ರಮಪ್ಪ=ವಿಶೇಷವಾದ, ತಮುಮಂ=ಕತ್ತಲೆಯನ್ನು, ಕಿಡಿಸನೆ=ನಾಶಮಾಡುವದಿಲ್ಲವೇ ? ಹರಿ=ಸಿಂಹವು, ಬಾಲಕನಾದೊಡಂ=ಮರಿಯಾದಾಗ್ಯೂ, [ಗಂಧಸಿಂಧುರಘಟಾವಳಿಯಂ] ಗಂಧಸಿಂಧುರ=ಮದಗಜಗಳ, ಘಟಾ=ಸಮೂಹಗಳ, ಆವಳಿಯಂ=ಪಙ್ಕ್ತಿಯನ್ನು, ಪಡಲ್ವಡಿಸನೆ=ಕೊಲ್ಲುವುದಿಲ್ಲವೇ ? ಕಿರುಗೊಸೆನಲ್ಕೆವೇಡ=ಸಣ್ಣಕೂಸು ಎಂದು ತಿಳಿಯಬೇಡ, ಎಡರಿದರಂ=ಪ್ರತಿಭಟಿಸಿದವರನ್ನ ವಿಕ್ರಮಶಾಲಿ=ಶೂರನಾದ ಲಕ್ಷ್ಮಣಂ, ಜವಂಗೆ=ಯಮನಿಗೆ, ಪೊಸತು=ಆಶ್ಚರ್ಯವುಂಟಾಗುವಂತೆ, ಇಕ್ಕನೆ=ನಾಶಮಾಡುವುದಿಲ್ಲವೇ ?

ತಾ|| ಕೆಂಡ ಚಿಕ್ಕದಾದರೂ ಕಾಡನ್ನೇ ಸುಡುವುದಿಲ್ಲವೆ ? ಬಾಲಸೂರ್ಯನಾದರೂ ಗಾಂಡಾಂಧಕಾರವನ್ನೋಡಿಸುವುದಿಲ್ಲವೆ ? ಸಿಂಹವು ಮರಿಯಾದರೂ ಮದದಾನೆಗಳಗುಂಪನ್ನು ಜಯಿಸುವುದಿಲ್ಲವೇ? ಹಾಗೆಯೇ ಶೂರನಾದೀಲಕ್ಷ್ಮಣನು ಪ್ರತಿಭಟಿಸಿದವರನ್ನು ಯಮನಿಗೆ ಅಚ್ಚರಿಯೆನಿಸುವಂತೆ ಹೊಡೆಯುವನಲ್ಲವೆ ? ೪೮.

೪೯. ಟೀ|| ಮಾತೇನೋ=ಹೇಳತಕ್ಕದ್ದೇನು ? ಕಿಂಕಿರಾತಂ=ಮುತ್ತುಗದ ಮರವು, ಪೂತಂತೆ=ಹೂಬಿಟ್ಟಹಾಗೆ, ಕಿರಾತಸೇನೆ=ಬೇಡರದಂಡು, ಪುಣ್ಬಡೆ=ಗಾಯವಡುತ್ತಿರಲು, (ಶರಸಂಘಾತದ) ಶರ=ಬಾಣಗಳ, ಸಂಘಾತದ=ಸಮೂಹದ, ಸವಿದೋರ್ಕುಂ=ರುಚಿತೋರಿಸುವನು, ಎಂಟನೆಯ ಕೇಶವಂಗೆ=ನಾರಾಯಣನ ಎಂಟನೆ ಅವತಾರವಾದ ರಘುಜಾತಂಗೆ=ಲಕ್ಷ್ಮಣನಿಗೆ, ಇದಿರ್=ಪ್ರತಿಭಟರು, ಉಂಟೇ=ಇದ್ದಾರೆಯೇ?

ತಾ|| ಮುತ್ತುಗದ ಗಿಡ ಹೂಬಿಟ್ಟಹಾಗೆ ಕಿರಾತಸೇನೆ ಮೈಯೆಲ್ಲಾ ಗಾಯವಾಗುವಂತೆ ಬಾಣಪ್ರಯೋಗದ ರುಚಿ ತೋರಿಸುತ್ತಾನೆ. ವಿಷ್ಣುವಿನ ಎಂಟನೇ ಅವತಾರವೆನಿಸಿದ ರಘುವೀರನಾದ ಲಕ್ಷ್ಮಣನಿಗೆ ಇದಿರುಂಟೇ.

ಸ್ರ|| ಅಂಬೇಱಿಂ[1]ಗಾಂತರಂ ತತ್ತಱಿದಱಿದು ಭುಜಾಗರ್ವಮಂ ಬಿಟ್ಟು ಬಾಯ್ಬಿ|
ಟ್ಟಂ ಬೇಯೆಂಬನ್ನೆಗಂ ಬೆಂದಗುಳ್ದು ಮೆಱೆದು ಬಿಲ್ಬಲ್ಮೆಯಂ ನಾಡನಿನ್ನೆಂ
ದುಂ ಬೇಡರ್ಪೊರ್ದದಂತಾಗಿರೆ ನಿಯಮಿಸಿ ಬಂದಪ್ಪೆನಾನೆಂದು ಶೌರ್ಯಾ
ಲಂಬಂ ರಾಮಂ ರಣಕ್ಕೞ್ತಿಗನೆನೆ ಬೆಸನಂ ತಂದೆಯಂ ಬೇಡಿಕೊಂಡಂ ||

ಅಂತು ಬೆಸನಂ ಬೇಡಿಕೊಂಡು ತಂದೆಯಂ ಬೀೞ್ಕೊಂಡು—

೫೦. ಟೀ|| ಆಂ=ನಾನು, ಅಂಬು=ಬಾಣದ, ಏರಿಂಗೆ=ಗಾಯಕ್ಕೆ, ಆಂತರಂ=ಇದಿರಾದವರನ್ನು, ತತ್ತರದರಿದು=ತುಂಡುತುಂಡಾಗಿ ಕತ್ತರಿಸಿ, ಭುಜಾಗರ್ವವಂ ಬಿಟ್ಟು=ಜಂಭವನ್ನು ತೊರೆದು, ಅಂಬೇಯೆಂಬನ್ನೆಗಂ=ದನಗಳಂತೆ ಕಿರಿಚಿಕೊಳ್ಳುವವರೆಗೂ, ಬೆಂದಗುಳ್ದು=ಹಿಂದಟ್ಟಿ, ಬಿಲ್ಬಲ್ಮೆಯಂ=ಧನುಸ್ಸಿನ ಸಾಮರ್ಥ್ಯವನ್ನು, ಮೆರೆದು=ಪ್ರಕಾಶಪಡಿಸಿ, ಬೇಡರ್=ಕಿರಾತರು, ಇನ್ನೆಂದುಂ=ಮುಂದೆಯಾವಾಗಲೂ, ನಾಡಂ=ನಮ್ಮ ದೇಶವನ್ನು, ಪೊರ್ದದಂತಾಗಿರೆ=ಸೇರದಹಾಗೆ, ಆಂ=ನಾನು, ನಿಯಮಿಸಿ=ಕಟ್ಟುಮಾಡಿ, ಬಂದಪ್ಪೆಂ=ಬರುತ್ತೇನೆ ಎಂದು, ಶೌರ್ಯಾಲಂಬಂ=ಪರಾಕ್ರಮಕ್ಕೆ ಆಶ್ರಯನಾದ, ರಾಮಂ=ರಾಮನು, ರಣಕ್ಕೆ=ಯುದ್ಧಕ್ಕೆ, ಅಳ್ತಿಗಂ=ಆಸೆಯುಳ್ಳವನು, ಎನೆ=ಎಂಬಹಾಗೆ, ತಂದೆಯಂ=ದಶರಥನನ್ನು, ಬೆಸನಂ=ಅಪ್ಪಣೆಯನ್ನು, ಬೇಡಿಕೊಂಡಂ=ಪ್ರಾರ್ಥಿಸಿಕೊಂಡನು.

ತಾ|| ಬಾಣದ ಹೊಡೆತಕ್ಕೆ ಸಿಕ್ಕಿದವರನ್ನು ಧ್ವಂಸಮಾಡಿ ಜಂಭವನ್ನ ಬಿಟ್ಟು ಕಿರಿಚಿಕೊಳ್ಳುವಂತೆ ಬೆನ್ನಟ್ಟಿಹೋಗಿ ಧನುರ್ವಿದ್ಯೆ ಸಾಮರ್ಥ್ಯವನ್ನು ತೋರಿಸಿ ಬೇಡರು ಎಂದೆಂದಿಗೂ ದೇಶದೊಳಕ್ಕೆ ಮೆಟ್ಟದಂತೆ ನೇಮಿಸಿ ಬರುತ್ತೇನೆ. ನನಗೆ ಅಪ್ಪಣೆಕೊಡಿ ಎಂದು ತಂದೆಯನ್ನು ಕೇಳಿಕೊಂಡರು. ೫೦.

ಗದ್ಯ|| ಅಂತು=ಆ ಪ್ರಕಾರವಾಗಿ, ಬೆಸನಂ=ಅಪ್ಪಣೆಯನ್ನು, ಬೇಡಿಕೊಂಡು=ಪ್ರಾರ್ಥಿಸಿಕೊಂಡು, ತಂದೆಯಂ=ದಶರಥನಿಂದ, ಬೀಳ್ಕೊಂಡು=ಕಳುಹಿಸಿಕೊಂಡು.

1 ದಾಂತರಂ, ಘ.

ಕಂ॥ ಅಪರಿಮಿತಮೆನಿಪ ಚತುರಂ |
ಗ ಪತಾಕಿನಿ ತಮಗೆ ಕದನಕೇಳಿಗೆ ನೆರಮ ॥
ಲ್ಲುಪಕರಣಮೆನಿಪ ಕೋದಂ |
ಡಪಾಣಿಗಳ್ ದಂಡಪಾಣಿಗೆಣೆಯೆನೆ ತಳರ್ದರ್ ||೫೧||

ಗೆಲಲರಿದಿವರಿರ್ವರ ದೋ |
ರ್ಬಲಮಂ ತ್ರಿಭುವನದೊಳಿವರ್ಗೆ ನೆರಮಲ್ಲು ಚತು ॥
ರ್ಬಲಮಿನಿತುಂ ನುಡಿ ನೆರವೆನೆ |
ಬಲಾಚ್ಯುತರ್ ನಿಚ್ಚವಯಣದಿಂದೆಯ್ದಂದರ್ ||೫೨||

---

೫೧. ಟೀ॥ ಅಪರಿಮಿತಂ=ಅಳತೆಯಿಲ್ಲದ್ದು, ಎನಿಪ=ಅನ್ನಿಸುವ, ಚತುರಂಗಬಲಪತಾಕಿನಿ=ಆನೆ, ಕುದುರೆ ರಥ, ಕಾಲಾಳೆಂಬನಾಲ್ಕುವಿಧಸೈನ್ಯವು, ತಮಗೆ=ರಾಮಲಕ್ಷ್ಮಣರಿಗೆ, ಕದನಕೇಳಿಗೆ=ಯುದ್ಧದಾಟಕ್ಕೆ, ನೆರಮಲ್ತು=ಸಹಾಯವಲ್ಲ, ಉಪಕರಣವೆನಿಪ=ಯುದ್ಧಸಾಧನವೆನಿಸಿಕೊಂಡಿರುವ, ಕೋದಂಡಪಾಣಿಗಳ್=ಧನುಸ್ಸೇ ಕಯ್ಯಲ್ಲಿಉಳ್ಳರಾಮಲಕ್ಷ್ಮಣರು, ದಂಡಪಾಣಿಗೆ=ಯಮನಿಗೆ, ಎಣೆಯೆನೆ=ಸಮಾನರೆಂಬಂತೆ, ತಳರ್ದರ್=ಹೊರಟರು.

ತಾ॥ ಚತುರಂಗಸೈನ್ಯವು ನಮಗೆ ಸಹಾಯವಲ್ಲ. ಧನುರ್ಬಾಣಗಳೇ ನಮಗೆ ಸಹಾಯವೆಂದು ಅದನ್ನು ಹಿಡಿದು ದಂಡಪಾಣಿಯಾದ ಯಮನಿಗೆ ಸಮಾನರು ಎನಿಸಿ ಹೊರಟರು. ೫೧.

೫೨. ಟೀ॥ ಇವರಿರ್ವರ=ಇವರಿಬ್ಬರ, ದೋರ್ಬಲಮಂ=ತೋಳಿನ ಶಕ್ತಿಯನ್ನು, ಗೆಲಲರಿದು=ಜಯಿಸಲಸಾಧ್ಯವು, ತ್ರಿಭುವನದೊಳ್=ಮೂರು ಲೋಕಗಳಲ್ಲಿ ಇನಿತುಚತುರ್ಬಲಂ=ಇಷ್ಟುಚತುರಂಗಸೇನೆಯು, ನೆರಮಲ್ತು=ಸಹಾಯವಲ್ಲ. ನುಡಿ=ಮಾತು, ನೆರಂ=ಸಹಾಯವು, ಎನೆ=ಎಂಬಂತೆ, ಬಲಾಚ್ಯುತರ್=ರಾಮಲಕ್ಷ್ಮಣರು, ನಿಚ್ಚವಯಣದಿಂದೆ=ನಿತ್ಯಪ್ರಯಾಣದಿಂದ, ಎಯ್ತಂದರ್=ಬಂದರು.

ತಾ॥ ಇವರಿಬ್ಬರ ಬಾಹುಬಲವನ್ನು ಗೆಲ್ಲುವದೇ ಅಸಾಧ್ಯ ಚತುರಂಗ ಸೇನೆಯು ನಿಜವಾದ ಸಹಾಯವಲ್ಲ, ಮಾತೇಸಹಾಯ, ಎಂಬಂತೆ ರಾಮಲಕ್ಷ್ಮಣರು ಎಡೆಬಿಡದೆ ಪ್ರಯಾಣವಾಗಿ ಬಂದರು. ೫೨.

ಅಂತೆಯ್ದೆವರ್ಪುದುಮವರನುಚಿತ ಪ್ರತಿಪತ್ತಿಯಿಂ ಮನ್ನಿಸಿ—

ವೃ|| ನೆಲಂ ಬೆಸಲೆಯಾದವೋಲ್ ನೆರೆದ ಲುಬ್ಧಕವ್ಯೂಹಮಂ |
ಗೆಲಲ್ ನೆಱೆದೆನೀಗಳೆಂಬ ಬಲಗರ್ವಮಂ ತಾಳ್ದಿದಂ ||
ಬಲಾಚ್ಯುತರ ಕೂಟದಿಂ ಜನಕನುಗ್ರ ವನ್ಯದ್ವಿಪಂ |
ಬಲಂಬಡೆದುದೆಂಬಿನಂ ವಿಕಟ ದಂತಕೂಟಂಗಳಿಂ ||೫೩||

ಅನಂತರಮುದಾತ್ತರಾಘವನವೋಘ ಶರಾಸನಾದಿ ವಿವಿಧಾಯುಧ ಸನಾಥನಾಗಿ ರಥಮನೇಱೆ ಲಕ್ಷ್ಮಣಂ ಕಾಲಾಗ್ರಪಿಸೊಳ್ ನೆರೆದುಬರೆ ಜನಕ ಕನಕರಿರ್ವರ್ ವಿಜಯ ಗಜಮನೇಱೆ ಮುಂ[1]ಗೋಲೊಳ್ ನಡೆಯೆ ನಾಡ ಗಡಿಯನೆಯ್ದಿ ಬರ್ಪ ಸಮಯದೊಳ್—

ಗದ್ಯ|| ಅಂತು=ಹಾಗೆ, ಅವರ್=ರಾಮಲಕ್ಷ್ಮಣರು, ಎಯ್ದೆವರ್ಪು ದುಂ=ಬರುತ್ತಿರಲು, (ಉಚಿತಪ್ರತಿಪತ್ತಿಯಿಂ) ಉಚಿತ=ಯೋಗ್ಯವಾದ, ಪ್ರತಿಪತ್ತಿಯಿಂ=ಬುದ್ಧಿಯಿಂದ, ಮನ್ನಿಸಿ=ಮರ್ಯಾದೆಗೊಳಿಸಿ,

೫೩. ಟೀ|| (ಉಗ್ರವನ್ಯದ್ವಿಪಂ) ಉಗ್ರ=ಭಯಂಕರವಾದ, ವನ್ಯದ್ವಿಪಂ=ಕಾಡಾನೆಯು, (ವಿಕಟದಂತಕೂಟಂಗಳಿಂ) ವಿಕಟ=ವಿಷಮವಾದ, ದಂತಕೂಟಂಗಳಿಂ=ಕೋಂಬುಗಳಿಂದ, ಬಲಂಬಡೆದುದು=ಶಕ್ತಿಯನ್ನು ಹೊಂದಿತು, ಎಂಬಿನಂ=ಎಂಬಹಾಗೆ, ಜನಕಂ=ಜನಕರಾಜನು, ಬಲಾಚ್ಯುತರ=ರಾಮಲಕ್ಷ್ಮಣರ, ಕೂಟದಿಂ=ಸಹಾಯದಿಂದ, ನೆಲಂ=ಭೂಮಿಯು, ಬೆಸಲೆಯಾದವೋಲ್=ಹಡೆಯಿತೋ ಎಂಬಹಾಗೆ, ನೆರೆದ=ಕೂಡಿದ, ಲುಬ್ಧಕವ್ಯೂಹಮಂ=ಕಿರಾತರಸಮೂಹವನ್ನು, ಗೆಲಲ್=ಜಯಿಸುವುದಕ್ಕೆ, ನೆರೆದೆಂ=ಸಮರ್ಥನಾದೆನು ಎಂಬ, ಬಲಗರ್ವಮಂ=ಸಾಮರ್ಥ್ಯದ ಅಹಂಕಾರವನ್ನು, ತಾಳ್ದಿದಂ=ಧರಿಸಿದನು.

ತಾ|| ಕಾಡಾನೆಯು ತನ್ನ ಕ್ರೂರವಾದ ಕೊಂಬಿನ ಸಹಾಯದಿಂದ ಮತ್ತಷ್ಟು ಶಕ್ತಿ ಹೊಂದಿದಹಾಗೆ ಜನಕನು ರಾಮಲಕ್ಷ್ಮಣರು ಜೊತೆಗೆ ಬಂದು ಸೇರಿದುದರಿಂದ ಅಪರಿಮಿತ ಬೇಡರನ್ನು ಜಯಿಸಲು ಸಮರ್ಥನಾದೆನು ಎಂದು ಗರ್ವಿತನಾದನು. ೫೩.

ಗದ್ಯ|| ಅನಂತರಂ=ಆಮೇಲೆ, [ಉದಾತ್ತರಾಘವಂ] ಉದಾತ್ತ=

---

1. ಗೋಲೊಳ್. ಕ. ಖ. ಗ ಘ. ಚ,

ಮ|| ಬಲಭಾರಕ್ಕೆ ಬಿಗುರ್ತುರ್ ಸುಯ್ಯೆ ಫಣಿರಾಜಂ ಸುಯ್ದ ಸುಯ್ಲಿಂ ಧರಾ |
ವಲಯಂ ಕಿೞ್ತು ನಭಕ್ಕೆ ಪಾಱಿದಪುದೋ ಪೇೞೆಂಬಿನಂ ಭಾನುಮಂ||
ಡಲಮಂ ಮಂಡಳಿಸಿತ್ತು ತದ್ಬಲ ಪದ ಪ್ರೋದ್ಧೂತ ಧೂಳೀಚ್ಛಟಾ |
ವಲಿ ಕಲ್ಪಾಂತ ಕೃಶಾನುಧೂಮ ಪಟಲೀ ಶಂಕಾ ಸಮುತ್ಪಾದಕಂ ||೫೪

ಶೂರನಾದ, ರಾಘವಂ=ರಾಮನು, [ಅಮೋಘಶರಾಸನಾದಿವಿವಿಧಾಯುಧ ಸನಾಥನಾಗಿ] ಅಮೋಘ=ವ್ಯರ್ಥವಲ್ಲದ, ಶರಾಸನ=ಧನುಸ್ಸೇ, ಆದಿ=ಮೊದಲಾದ, ವಿವಿದಾಯುಧ=ನಾನಾವಿಧ ಆಯುಧಗಳಿಂದ, ಸನಾಥನಾಗಿ=ಕೂಡಿದವನಾಗಿ, ರಥಮಂ=ತೇರನ್ನು, ಏರಿ=ಹತ್ತಿ, ಲಕ್ಷ್ಮಣಂ, ಕಾಲ್ಗಾಪಿನೊಳ್=ನಡೆಯುತಾ, [ತನ್ನ ರಕ್ಷಣೆಯಲ್ಲಿ] ಸೆರೆದು=ಸಹಾಯಕನಾಗಿ, ಬರೆ=ಬರುತ್ತಿರಲು, ಜನಕಕನಕರಿರ್ವರ್=ಜನಕರಾಜ ಇವನ ತಮ್ಮ ಕನಕ ಇವರಿಬ್ಬರು, ವಿಜಯಗಜಮಂ=ಜಯಶಾಲಿಯಾದ ಆನೆಯನ್ನು, ಏರಿ=ಹತ್ತಿ, ಮುಂಗೋಲೊಳ್=ಮುಂದುಗಡೆಯಲ್ಲಿ, ನಡೆಯೆ=ಹೋಗುತ್ತಿರಲು, ನಾಡ=ದೇಶದ, ಗಡಿಯಂ=ಎಲ್ಲೆಯನ್ನು, ಎಯ್ದಿ=ಹೊಂದಿ, ಬರ್ಪಸಮಯದೊಳ್=ಬರುವಕಾಲದಲ್ಲಿ.

೫೪. ಟೀ|| ಫಣಿರಾಜಂ=ಆದಿಶೇಷನು, ಬಲಭಾರಕ್ಕೆ=ಸೈನ್ಯದ ಹೊರೆಯನ್ನು ತಾಳಲಾರದೆ, ಬಿಗುರ್ತುರ್=ಹೆದರಿ, ಸುಯ್ಯೆ=ಉಸಿರುಬಿಡಲು, ಸುಯ್ದ=ಬಿಟ್ಟ, ಸುಯ್ಲಿಂ=ಉಸುರಿನಿಂದ. ಧರಾವಲಯಂ=ಭೂಮಂಡಲವು, ಕಿೞ್ತು=ಕಿತ್ತು, ನಭಕ್ಕೆ=ಆಕಾಶಕ್ಕೆ, ಪಾಱಿದಪುದೋ=ಹಾರಿಹೋಗುತ್ತದೋ, ಪೇೞ್=ಹೇಳು, ಎಂಬಿನಂ=ಎಂಬಹಾಗಿರಲು, [ಕಲ್ಪಾಂತ ಕೃಶಾನುಧೂಮಪಟಲೀಶಂಕಾಸಮುತ್ಪಾದಕಂ] ಕಲ್ಪಾಂತ=ಪ್ರಳಯಕಾಲದ, ಕೃಶಾನು=ಅಗ್ನಿಯ, ಧೂಮ=ಹೊಗೆಯ, ಪಟಲೀ=ಸಮೂಹವೋ ಎಂಬ, ಶಂಕಾ=ಊಹೆಯನ್ನು, ಸಮುತ್ಪಾದಕಂ=ಹುಟ್ಟಿಸುವ, [ತದ್ಬಲಪದಪ್ರೋದ್ಧೂತ ಧೂಳೀಚ್ಛಟಾವಳಿ] ತದ್ಬಲ=ಆ ಸೈನ್ಯದ, ಪದ=ಕಾಲುಗಳಿಂದ, ಪ್ರೋದ್ಧೂತ=ಹುಟ್ಟಿದ, ಧೂಳೀ=ದೂಳಿನ, ಛಟಾ=ಪರಂಪರೆಯ, ಆವಳಿ=ಪಙ್ಕ್ತಿಯು, ಭಾನುಮಂಡಲಮಂ=ಸೂರ್ಯಬಿಂಬವನ್ನು, ಮಂಡಲಿಸಿತ್ತು=ಆವರಿಸಿತು.

ತಾ|| ಸೇನಾಭಾರಕ್ಕೆ ಆದಿಶೇಷನು ಏದುಸುರು ಬಿಡಲು ಅವನ ಉಸಿರಿನ ರಭಸಕ್ಕೆ ಭೂಮಂಡಲವು ಕಿತ್ತು ಆಕಾಶಕ್ಕೆ ಹಾರುವುದೋ ಎಂ

ಅನಂತರಂ ನೆಲಂ ಬೆಸಲೆಯಾದಂತೆ ಬರ್ಪ ಬೇಡವಡೆ ರಸೆಯಿನೊಗೆ ವಸುರರ ಪಡೆಯಂತೆಯುಂ. ವ್ಯೋಮತಳದಿನಿೞಿವ ಧೂಮಕೇತುಗಳಂತೆಯುಂ, ಕಡೆಗಾಲದೊಳಡೆವೊತ್ತಿ ಸುತ್ತಲುಂ ನೆಗೆವನಲನ ಪೊಗೆಯಂತೆಯುಂ, ನಡೆವ ಸಂಜಿನ ಬಿಂಜದಂತೆಯುಂ, ಕರ್ಬುಲಿಯ ಪಿಂಡಿನಂತೆಯುಂ, ಸಿಂಗದ ಜಂಗುಳಿಯಂತೆಯುಂ, ಜವನೆರ್ಮೆವೋರಿವಿಂಡಿನಂತೆಯುಂ ಬರಸಿಡಿಲ ಬಳಗದಂತೆಯುಂ, ಕಾಲಾಯಸ ಕಾಳಪುರುಷ ಪರಿಷಜ್ಜನದಂತೆಯುಂ. ಕಾಳರಕ್ಕಸನ ಸಂತಾನದಂತೆಯುಂ, ಕುಲನಗೆಮಹತ್ತರ ಕುಲದಂತೆಯುಂ, ಅರ್ಧಪ್ರಹಾರವರ್ಧನದಂತೆಯುಂ, ಯಮ 1ಘಂಟಾಸಂಘಾತದಂತೆಯುಂ, ಮಾರಿಯ ಮೂರಿಯಂತೆಯುಂ, ಕ್ರೂರಗ್ರಹ ಪರಿಗ್ರಹದಂತೆಯುಂ, ಅಗುರ್ವುಮದ್ಭುತಮುಮಾದುದಲ್ಲಿಂಬೞಿಯಂ—

ಬಂತೆ ಪ್ರಳಯಾಗ್ನಿಯ ಹೊಗೆಯೋ ಎಂಬ ಸಂದೇಹ ಹುಟ್ಟಿಸುತ್ತಾ ಸೇನೆಯ ತುಳಿತದಿಂದೆದ್ದ ದೂಳಿಯು ಸೂರ್ಯಮಂಡಲಕ್ಕೂ ವ್ಯಾಪಿಸಿತು. ೫೪.

ಗದ್ಯ|| ಅನಂತರಂ=ಆಮೇಲೆ, ನೆಲಂ=ಭೂಮಿಯು, ಬೆಸಲೆಯಾದಂತೆ=ಹೆತ್ತಹಾಗೆ, ಬರ್ಪ=ಬರುವ, ಬೇಡವಡೆ=ಕಿರಾತಸೇನೆಯು, ರಸೆಯಿಂ=ಭೂಮಿಯಿಂದ, ಒಗೆವ=ಹುಟ್ಟುವ, ಅಸುರರ=ರಾಕ್ಷಸರ, ಪಡೆಯಂತೆಯುಂ=ಸೈನ್ಯದಹಾಗೂ, ವ್ಯೋಮತಳದಿಂ=ಆಕಾಶದಿಂದ, ಇಳಿವ=ಇಳಿದುಬರುವ, ಧೂಮಕೇತುಗಳಂತೆಯುಂ=ಬಾಲಚುಕ್ಕಿಗಳಹಾಗೂ, ಕಡೆಗಾಲದೊಳ್=ಪ್ರಳಯದಲ್ಲಿ, ಅಡೆವೊತ್ತಿ=ಅಮುಕಿ, ಸುತ್ತಲುಂ=ಎಲ್ಲಾ ಕಡೆಯೂ, ನೆಗೆವ=ಹಾರುವ, ಅನಲನ=ಅಗ್ನಿಯ, ಪೊಗೆಯಂತೆಯುಂ=ಹೊಗೆಯಹಾಗೂ, ನಡೆವ=ಸಂಚರಿಸುವ, ಸಂಜಿನ=ಏಷದ, ಬಿಂಜದಂತೆಯುಂ=ಅರಣ್ಯದಹಾಗೂ, ಕರ್ಬುಲಿಯ=ಕಪ್ಪಾದಹುಲಿಯ, ಪಿಂಡಿನಂತೆಯುಂ=ಗುಂಪಿನಹಾಗೂ, ಸಿಂಗದ=ಸಿಂಹಗಳ, ಜಂಗುಳಿಯಂತೆಯುಂ=ಸಮೂಹದಹಾಗೂ, ಜವನ=ಯವನ, [ಎರ್ಮೆವೋರಿವಿಂಡಿನಂತೆಯುಂ] ಎರ್ಮೆವೋರಿ=ಕೋಣಗಳ, ಪಿಂಡಿನಂತೆಯುಂ=ಗುಂಪಿನಹಾಗೂ, ಬರಸಿಡಿಲ=ವೇಗವಾದ ಸಿಡಿಲಿನ, ಬಳಗದಂತೆಯುಂ=ಸಮೂಹದಹಾಗೂ, [ಕಾಳಾಯಸಕಾಳಪುರುಷ ಪರಿಷಜ್ಜನದಂತೆಯುಂ] ಕಾಳಾಯಸ=ಕಬ್ಬಿಣದ, ಕಾಳಪುರುಷ=ಕಪ್ಪುಮನುಷ್ಯನ, ಪರಿಷಜ್ಜನದಂತೆಯುಂ=ಸಭಾಜನದಹಾಗೂ, [ಕುಲನಗಮಹತ್ತರ ಕುಲದಂತೆಯುಂ] ಮಹತ್ತರ=ಅತಿ ಸ್ಥೂಲವಾದ, ಕುಲನಗ=ಕುಲಾಚಲಗಳ, ಕುಲದಂ

---

1 ಘಂಟ- ಚ.

ಚ|| ಕರಿಗಳೆಱಂಕೆವೆಟ್ಟುಗಳವೋಲ್ ನಡೆತಂದುವು ವಾಜಿರಾಜಿಗಳ್ |
ತೆರೆಗಳ ತೆರ್ಕೆಯಂತೆ ಕವಿತಂದುವು ಲುಬ್ಧಕ ಸೈನಿಕಾಬ್ಧಿಯೊಳ್ ||
ಕರಿ ಮಕರಂಗಳಂತೆ ರಥಕೋಟಿಗಳಾಸುರಮಾಗೆ ಬಂದುವಾ |
ವರಿಸಿದುವಾವಗಂ ಗಗನಮಂ ವೃಕ ಕಾಕಸೃಗಾಲ ಕೇತುಗಳ್ ||೫೫

ತೆಯುಂ=ಸಮೂಹದಹಾಗೂ, [ಅರ್ಧಪ್ರಹಾರವರ್ಧನದಂತೆಯುಂ] ಅರ್ಧಪ್ರಹಾರ=ಅರ್ಧವಾದ ಏಟಿನ, ವರ್ಧನದಂತೆಯುಂ=ವೃದ್ಧಿಯಹಾಗೂ, [ಯಮಘಂಟಾಸಂಘಾತದಂತೆಯುಂ] ಯಮ=ಯಮನ, ಘಂಟಾ=ಘಂಟೆಗಳ. ಸಂಘಾತದಂತೆಯುಂ=ಸಮೂಹದಹಾಗೂ, ಮಾರಿಯ=ಸಂಹಾರದೇವತೆಯ, ಮೂರಿಯಂತೆಯುಂ=ಸಮೂಹದಹಾಗೂ, [ಕ್ರೂರಗ್ರಹಪರಿಗ್ರಹದಂತೆಯುಂ] ಕ್ರೂರ=ಕಠಿನವಾದ, ಗ್ರಹ=ಗ್ರಹಗಳ, ಪರಿಗ್ರಹದಂತೆಯುಂ=ಪ್ರಾಪ್ತಿಯಹಾಗೂ, ಅಗುರ್ವುಂ=ಭಯವೂ, ಅದ್ಭುತಮುಂ=ಆಶ್ಚರ್ಯವೂ, ಆದುದು=ಆಯಿತು. ಅಲ್ಲಿಂಬಳಿಯಂ=ಆಮೇಲೆ.

೫೫. ಟೀ|| (ಲುಬ್ಧಕಸೈನಿಕಾಬ್ಧಿಯೊಳ್) ಲುಬ್ಧಕ=ಬೇಡರ, ಸೈನಿಕ=ಸೇನಾಜನರೆಂಬ. ಅಬ್ಧಿಯೊಳ್=ಸಮುದ್ರದಲ್ಲಿ, ಕರಿಗಳ್=ಆನೆಗಳು, ಎಱಂಕೆವೆಟ್ಟುಗಳವೋಲ್=ರೆಕ್ಕೆಗಳುಳ್ಳ ಬೆಟ್ಟಗಳಹಾಗೆ, ನಡೆತಂದುವು=ಬಂದುವು. ವಾಜಿರಾಜಿಗಳ್=ಕುದುರೆಗಳ ಸಮೂಹಗಳು, ತೆರೆಗಳ=ತರಂಗಗಳ, ತೆರ್ಕೆಯಂತೆ=ಸಮೂಹದಹಾಗೆ, ಕವಿತಂದುವು=ಮುತ್ತಿದುವು, ರಥಕೋಟಿಗಳ್=ಅನೇಕರಥಗಳು, ಕರಿಮಕರಂಗಳಂತೆ=ಆನೆಗಳಂತೆಯೂ, ಮೊಸಳೆಗಳಂತೆಯೂ, ಆಸುರಮಾಗೆ=ಭಯವನ್ನುಂಟುಮಾಡಲು. [ವೃಕಕಾಕಸೃಗಾಲಕೇತುಗಳ್] ವೃಕ=ತೋಳಗಳೂ, ಕಾಕ=ಕಾಗೆಗಳೂ, ಸೃಗಾಲ=ನರಿಗಳೂ, ಕೇತುಗಳ್=ಹದ್ದುಗಳೂ ಬಂದು, ಆವಗಂ=ಯಾವಾಗಲೂ, ಗಗನಮಂ=ಆಕಾಶವನ್ನು, ಆವರಿಸಿದುವು=ಮುತ್ತಿದುವು.

ತಾ|| ಬೇಡರ ಸೇನೆಯೆಂಬ ಸಮುದ್ರದಲ್ಲಿ ಆನೆಗಳು ರೆಕ್ಕೆಯುಳ್ಳ ಬೆಟ್ಟಗಳಂತೆಯೂ ಕುದುರೆಗಳು ಸಮುದ್ರದ ಅಲೆಗಳಂತೆಯೂ ಆವರಿಸಿಕೊಂಡುವು. ಅನೇಕ ರಥಗಳು ಆನೆ ಮೊಸಳೆಗಳಹಾಗೆ ಬಂದುವು. ತೋಳ, ಕಾಗೆ, ನರಿ, ಹದ್ದುಗಳು ಆಕಾಶದಲ್ಲೆಲ್ಲಾ ಹಾರಾಡುತ್ತಿದ್ದವು. ೫೫.

ಕಂ|| ಝುಂಜೆಯ ದನಿ ದಿಕ್ಪಾಲರ |
ನಂಜಿಸೆ ತಳ್ತೊಗೆವ ಕೋಡ ಕಾಳೆಯ ದನಿ ದಿ ||
ಕ್ಕುಂಜರಮಂ ಬೆದರಿಸೆ ನಭ |
ಮಂ ಜೇವೊಡೆಯುಲಿಪು ಸುತ್ತಿ ಮುತ್ತಿತ್ತಾಗಳ್ ||೫೬||

ಪಲದಿವಸಕ್ಕೆಂತಾನುಂ |
ಕಲಹಂ ದೊರೆಕೊಂಡುದೆಂದು ಕೆಲಬರ್ ಬಿಲ್ಲಂ ||
ಗೊಲೆಗೊತ್ತಿ ತೀವಿ ತೆಗೆದೇಂ |
ನಲಿವರಿದರೊ ಜವನ ದೂತರೆನಿಸಿ ಕಿರಾತರ್ ||೫೭||

---

೫೬. ಟೀ|| ಝುಂಜೆಯ=ಶಿಂಜಿನಿಯ, ದನಿ=ಶಬ್ದವು, ದಿಕ್ಪಾಲರಂ=ಇಂದ್ರಾದಿಗಳನ್ನು, ಅಂಜಿಸೆ=ಭಯಪಡಿಸುತ್ತಿರಲು, ತಳ್ತು=ಸಾಂದ್ರವಾಗಿ, ಒಗೆವ=ಹುಟ್ಟುವ, ಕೋಡುಕಾಳೆಯ=ಕೊಂಬುಕಹಳೆಯ, ದನಿ=ಧ್ವನಿಯು, ದಿಕ್ಕುಂಜರಮಂ=ದಿಗ್ಗಜವನ್ನು, ಬೆದರಿಸೆ=ಭಯಪಡಿಸುತ್ತಿರಲು, ಜೇವೊಡೆಯುಲಿಪು=ಧನುಷ್ಟಂಕಾರವು, ಆಗಳ್=ಆಗ, ನಭಮಂ=ಆಕಾಶವನ್ನು, ಸುತ್ತಿ ಮುತ್ತಿತ್ತು=ಆವರಿಸಿತು.

ತಾ|| ಧನುಸ್ಸಿನ ಹೆದೆಯ ಶಬ್ದವು ಅಷ್ಟದಿಕ್ಪಾಲಕರನ್ನು ಕೂಡ ಭಯಪಡಿಸುತ್ತಿರಲು ಊದುವ ಕೊಂಬು ಕಹಳೆಯ ಶಬ್ದವು ದಿಗ್ಗಜಗಳನ್ನು ಕೂಡ ದಿಗಿಲುಪಡಿಸುವಂತೆ ಧನುಷ್ಟಂಕಾರಶಬ್ದವು ಎಲ್ಲಾ ಕಡೆಗೂ ವ್ಯಾಪಿಸಿತ್ತು. ೫೬,

೫೭. ಟೀ|| ಕೆಲರ್ ಕಿರಾತರ್=ಕೆಲವು ಬೇಡರು, ಕಲಹಂ=ಯುದ್ಧವು, ಎಂತಾನುಂ=ಹ್ಯಾಗಾದರೂ, ಪಲದಿವಸಕ್ಕೆ=ಬಹುಕಾಲಕ್ಕೆ, ದೊರೆಕೊಂಡುದು=ಪ್ರಾಪ್ತವಾಯಿತು, ಎಂದು=ಎಂಬದಾಗಿ, ಬಿಲ್ಲಂ=ಬಿಲ್ಲನ್ನು, ಗೊಲೆಗೆ=ಶಿಂಜಿನಿಗೆ, ಒತ್ತಿ, (ಅಂದರೆ ಬಿಲ್ಲಿಗೆ ನಾರಿಯನ್ನು ಸೇರಿಸಿಯೆಂದು ಭಾವ.) ತೀವಿ=ವಿಶೇಷವಾಗಿ, ಜವನದೂತರೆನಿಸಿ=ಯಮಭಟರಂತೆ, ಏಂನಲಿವರಿದರೋ=ಏನು ಸಂತೋಷಪಟ್ಟರೋ ?

ತಾ|| ಕೆಲವರು ಬೇಡರು ಬಹುದಿವಸಕ್ಕೊಂದುಸಲ ಯುದ್ಧವೊದಗಿದೆ ಎಂದು ಬಿಲ್ಲಿಗೆ ಹೆದೆಗೂಡಿಸಿ ಯಮದೂತರಂತೆ ಏನು ಸಂತೋಷದಿಂದ ಮುಂದರಿದರೋ. ೫೭.

ಕರಿಘಂಟಾನಾದಂ ಹಯ |
ಖುರಪುಟ ನಿನದಂ ವರೂಥ ಚೀತ್ಕಾರಂ ಕಿಂ ||
ಕರ ಚಾಪ ಟಂಕೃತಂ ಭೋ |
ರ್ಗರೆವಿನಮಾರ್ದೆತ್ತಿದತ್ತು ವನಚರ ಸೈನ್ಯಂ ||೫೮

ಮತ್ತಿತ್ತ ರಾಮಚಂದ್ರನ ಬಲಮೆ ಚಂದ್ರಬಲಮಾಗೆ—

ಕಂ || ಆನೆ ಹಯಂ ತೇರಾಳೆಂ |
ಬೀನಾಲ್ಕುಂ ಸೇನೆ ಬೇಡವಡೆಯೊಡೆಯನ ಪೇ ||
ರಾನೆ ಹಯಂ ತೇರಾಳೆಂ |
ಬೀನಾಲ್ಕುಂಸೇನೆಯೊಡನೆ ತಾಗಿದುವಾಗಳ್ ||೫೯||

೫೮. ಟೀ|| ಕರಿ=ಆನೆಗಳ, ಘಂಟಾನಾದಂ=ಘಂಟೆಗಳ ಧ್ವನಿಯೂ, (ಹಯಖುರಪುಟನಿನದಂ) ಹಯ=ಕುದುರೆಗಳ, ಖುರಪುಟ=ಗೊರಸುಗಳ, ನಿನದಂ=ಶಬ್ದವೂ, (ವರೂಥಚೀತ್ಕಾರಂ) ವರೂಥ=ರಥಗಳ, ಚೀತ್ಕಾರಂ=ಧ್ವನಿಯೂ, (ಕಿಂಕರಚಾಪಟಂಕೃತಂ) ಕಿಂಕರ=ಭಟರ, ಚಾಪ=ಬಿಲ್ಲುಗಳ, ಟಂಕೃತಂ=ಟಂಕಾರವೂ, ಭೋರ್ಗರೆವಿನಂ=ಮೊರೆಯುತ್ತಿರಲು, (ವನಚರಸೈನ್ಯಂ) ವನಚರ=ಬೇಡರ, ಸೈನ್ಯಂ=ದಂಡು, ಆರ್ದು=ಸಿಂಹನಾದಮಾಡಿ, ಎತ್ತಿದತ್ತು=ಯುದ್ಧಕ್ಕೆ ಸಿದ್ಧವಾಯಿತು.

ತಾ|| ಆನೆಗಳ ಕತ್ತಿನ ಗಂಟೆಯಧ್ವನಿ, ಕುದುರೆಗಳ ಗೊರಸಿನ ಶಬ್ದ, ರಥದ ಚೀತ್ಕಾರಶಬ್ದವೂ, ಕಾಲಾಳುಗಳ ಧನುಷ್ಟಂಕಾರದ ಶಬ್ದವೂ, ಕಿವಿ ಮೊರೆಗೆಟ್ಟುವಂತೆ ಇದ್ದುವು. ೫೮.

೫೯. ಟೀ|| ಮತ್ತೆ=ಇದಲ್ಲದೆ, ರಾಮಚಂದ್ರನ=ರಾಮನ, ಬಲಮೆ=ಸಹಾಯವೇ, ಚಂದ್ರಬಲಮಾಗೆ=ಜ್ಯೋತಿಷಶಾಸ್ತ್ರದಲ್ಲಿ ಹೇಳಲ್ಪಟ್ಟ, ಚಂದ್ರಬಲವಾಗಲು, ಆನೆ=ಆನೆಗಳು, ಹಯಂ=ಕುದುರೆಗಳು, ತೇರ್=ರಥಗಳು ಆಳ್=ಕಾಲಾಳುಗಳು, ಎಂಬ, ಈ ನಾಲ್ಕುಂಸೇನೆ, ಬೇಡವಡೆಯೊಡೆಯನ=ಶರಂಗತಮನ, ಪೇರಾನೆ=ದೊಡ್ಡಾನೆಗಳೂ, ಹಯಂ=ಕುದುರೆಗಳೂ, ತೇರ್=ರಥಗಳು, ಆಳ್=ಭಟರೂ, ಎಂಬ, ಈ ನಾಲ್ಕುಂಸೇನೆ=ನಾಲ್ಕುವಿಧವಾದ ದಂಡೂ, ಆಗಳ್=ಆಗ, ಒಡನೆ=ಏಕಕಾಲದಲ್ಲಿ, ತಾಗಿದುವು=ಯುದ್ಧಕ್ಕೆ ಪ್ರಾರಂಭಿಸಿದುವು.

ಉ|| ಪಂದಲೆ ಪಾಱೆ ಪುಟ್ಟೆ ಬಿಸುನೆತ್ತರ ಸುಟ್ಟುರೆ ಬಾಣಜಾಲದಿಂ |
ಪಂದರವಿಕ್ಕಿದಂತಿರೆ ನಭಂ ಮದದಾನೆಯ ದಂತ ಶಲ್ಕವೆಂ ||
ಟುಂದೆಸೆಗುಳ್ಕದಂತೆಸೆಯೆ ಕೂರಸಿ ಕೂರಸಿಯೊಳ್ಪಳಂಚೆ ಭೋ |
ರೆಂದೊಡನುಣ್ಮೆ ತೋರಗಿಡಿ ತಾಗಿದುವಂದೆರಡುಂ ಚತುರ್ಬಲಂ||೬೦||

ಅಂತು ಕಾದುವಾಗಳ್—

ಚ|| ಇನಿತು ಸಿಡಿಲ್ಗೆ ಕಾಯ್ಪಿನಿತು ನಂಜಿನ ಗಾಳಿಗೆ ವೇಗವಿಲ್ಲೆನಲ್ |
ಕನಕನನಾಜಿಯೊಳ್ ಪಿಡಿದು ಕಟ್ಟಿದನಳ್ಕುಱೆ ಸುತ್ತಿ ಮುತ್ತಿದಂ ||
ಜನಕನಸೆಚ್ಚ ನಚ್ಚುಡಿಯೆ ಲಕ್ಷ್ಮಣನೇಱಿದ ತೇರನಾವನಾಂ |
ಪನೊ ಯಮನಂತರಂಗ ಸುಭಟೋತ್ತಮನಂ ಮಹಾಜಿಯೊಳ್ ||೬೧||

ತಾ|| ರಾಮಚಂದ್ರನ ಚತುರಂಗಸೇನೆಯೂ ಬೇಡರ ಚತುರಂಗಸೇನೆಯೊಡನೆ ಯುದ್ಧಕ್ಕೆ ತೊಡಗಿತು. ೫೯.

೬೦. ಟೀ|| ಬಾಣಜಾಲದಿಂ=ಬಾಣಸಮೂಹದಿಂದ, ಪಂದಲೆ=ಕತ್ತರಿಸಲ್ಪಟ್ಟಹಸಿಯತಲೆಗಳು, ಪಾರೆ=ಹಾರಲು. (ಬಿಸುನೆತ್ತರಸುಟ್ಟುರೆ) ಬಿಸುನೆತ್ತರ=ಬಿಸಿರಕ್ತವೆಂಬ, ಸುಟ್ಟುರೆ=ಸುಂಟರಗಾಳಿಯು, ಪುಟ್ಟೆ=ಉಂಟಾಗಲು, ನಭಂ=ಆಕಾಶವು, ಪಂದರವಿಕ್ಕಿದಂತೆ=ಚಪ್ಪರಹಾಕಿದಹಾಗೆ, ಇರೆ=ಇರಲಾಗಿ, ಮದದಾನೆಯ=ಮದ್ದಾನೆಯ, ದಂತಶಲ್ಕಂ=ಕೊಂಬುಗೆಳ ಚಕ್ಕೆಯು, ಎಂಟುಂದೆಸೆಗೆ=ಅಷ್ಟದಿಕ್ಕುಗಳಿಗೆ, ಉಳ್ಕದಂತೆ=ವ್ಯಾಪಿಸುವಹಾಗೆ, ಎಸೆಯೆ=ಶೋಭಿಸಲು, ಕೂರಸಿ=ಹರಿತವಾದ ಖಡ್ಗವು, ಕೂರಸಿಯೊಳ್=ಕ್ರೂರವಾದ ಖಡ್ಗದಲ್ಲಿ, ಪಳಂಚೆ=ತಗಲಲಾಗಿ, ತೋರಗಿಡಿ=ದಪ್ಪಕಿಡಿಯು, ಭೋರೆಂದು=ಭೋರೆಂಬದಾಗಿ, ಉಣ್ಮೆ=ಹುಟ್ಟಲು, ಎರಡುಂ ಚತುರ್ಬಲಂ=ಎರಡು ಚತುರಂಗಸೇನೆಯೂ, ತಾಗಿದುವು=ತಗಲಿಬಿದ್ದವು.

ತಾ|| ಆಗತಾನೆ ಕತ್ತರಿಸಲ್ಪಟ್ಟ ಹಸಿತಲೆಯು ಹಾರಲು ಬಿಸಿರಕ್ತದ ಸುಂಟರಗಾಳಿಯು ಹುಟ್ಟಲು ಬಾಣಸಮೂಹದಿಂದ ಆಕಾಶವೆಲ್ಲಾ ಚಪ್ಪರ ಹಾಕಿದಂತಿತ್ತು ೬೦.

ಗದ್ಯ|| ಅಂತು=ಹಾಗೆ, ಕಾದುವಾಗಳ್=ಯುದ್ಧಮಾಡುವಾಗ.

೬೧. ಟೀ|| ಸಿಡಿಲ್ಗೆ=ಸಿಡಿಲಿಗೆ, ಇನಿತುಕಾಯ್ಪು=ಇಷ್ಟುತಾಪವು, ಇಲ್ಲ. ನಂಜಿನಗಾಳಿಗೆ=ವಿಷದಗಾಳಿಗೆ, ಇನಿತುವೇಗಂ=ಇಷ್ಟುವೇಗವು, ಇ

ಶಾ || ತೇರಚ್ಚಂ ಮುರಿಯೆಚ್ಚು ಬಿಲ್ಲನುಡಿಯೆಚ್ಚ ಶೃಂಗಳಂ ಸೂತನಂ |
ಕೂರಂಬಿಂ ಕೆಡೆಯೆಚ್ಚು ತಾಂ ಗಡೆನಗಂ ಮಾರಾಂಪ ಗಂಡಂ ಗಡೆಂ||
ದಾರುತ್ತಂ ಗೆಲೆ ಕಾದೆ ಲಕ್ಷ್ಮಣನೊಳಂ ಕಂಡಂತದಂ ಲೋಕ ಸಂ |
ಹಾರಂಮಾಳ್ಪ ಕೃತಾಂತನಂತೆ ರಘುಜಂ ಕೊಂಡಂ ಧನುರ್ದಂಡಮಂ||

ಲ್ಲ. ಎನಲ್=ಎಂಬಹಾಗೆ, ಕನಕನಂ=ಕನಕನನ್ನು, ಆಜಿಯೊಳ್=ಯುದ್ಧದಲ್ಲಿ, ಪಿಡಿದು=ಹಿಡಿದು, ಕಟ್ಟಿದಂ=ಬಂಧಿಸಿದನು. ಜನಕನಂ=ಜನಕರಾಯನನ್ನು, ಅಳ್ಕರೆ=ದಿಗಿಲುಬೀಳುವಂತೆ, ಸುತ್ತಿ=ಬಳಸಿಕೊಂಡು, ಮುತ್ತಿದಂ=ಆವರಿಸಿದನು. ಲಕ್ಷ್ಮಣಂ, ತೇರಂ=ರಥವನ್ನು, ಏರಿದ=ಹತ್ತಿದನು. ಮಹಾಜಿಯೊಳ್=ದೊಡ್ಡಯುದ್ಧದಲ್ಲಿ, ಯಮನ, ಅಂತರಂಗಸುಭಟೋತ್ತಮನಂ=ಆಪ್ತವೀರನಾದ ಲಕ್ಷ್ಮಣನನ್ನು (ಯಮನಹೃದಯದಂತೆ ಕಠಿನನಾದ ಲಕ್ಷ್ಮಣನನ್ನು ಎಂದು ಭಾವ.) ಆವಂ=ಯಾವನು, ಆಂಪನೊ=ಪ್ರತಿಭಟಿಸುವನೋ

ತಾ|| ಸಿಡಿಲಿಗಿಂತ ತೀಕ್ಷ್ಣವಾಗಿಯೂ ವಿಷದ ಗಾಳಿಗಿಂತ ತೀವ್ರವಾಗಿಯೂ ಕಿರಾತರು ಬಂದು ಕನಕನನ್ನು ಸೆರೆಹಿಡಿದು. ಜನಕನೂ ದಿಗಿಲುಬೀಳುವಂತೆ ಬಾಣದಿಂದ ಹೊಡೆಯಲು ಲಕ್ಷ್ಮಣನು ರಭಸದಿಂದ ರಥವೇರಿದನು ಯಮನಂತೆ ಮಹಾಕಠಿಣ ಹೃದಯನಾದ ಲಕ್ಷ್ಮಣನನ್ನು ಪ್ರತಿಭಟಿಸುವ ವೀರರ್ಯಾರು. ೬೧.

೬೨. ಟೀ|| ಕೂರಂಬಿಂ=ತೀಕ್ಷ್ಣಬಾಣದಿಂದ, ತೇರಚ್ಚಂ=ರಥದ ಅಚ್ಚನ್ನು, ಮುರಿಯೆಚ್ಚು=ಚೂರಾಗುವಂತೆ ಹೊಡೆದು; ಬಿಲ್ಲಂ=ಧನುಸ್ಸನ್ನು, ಉಡಿಯೆಚ್ಚು=ಮುರಿದುಹೋಗುವಹಾಗೆ ಹೊಡೆದು, ಸೂತನಂ=ಸಾರಥಿಯನ್ನು, ಕೆಡೆಯೆಚ್ಚು=ಬೀಳುವಹಾಗೆ ಹೊಡೆದು, ತಾಂಗಡ=ತಾನಂತೆ, ಎನಗಂ=ನನಗೂ, ಮಾರಾಂಪಗಂಡಂಗಡ=ಪ್ರತಿಭಟಿಸುವ ವೀರನಂತೆ, ಎಂದು=ಎಂಬದಾಗಿ, ಆರುತ್ತುಂ=ಕೂಗುತ್ತಾ, ಗೆಲೆ=ಜಯಿಸುವಹಾಗೆ, ಲಕ್ಷ್ಮಣನೊಳಂ=ಲಕ್ಷ್ಮಣನ ಸಂಗಡಲೂ, ಕಾದೆ=ಯುದ್ಧಮಾಡಲು, ಅದಂ=ಆ ಸಂಗತಿಯನ್ನು, ಅಂತು=ಹಾಗೆ, ರಘುಜಂ=ರಾಮನು, ಕಂಡು=ನೋಡಿ, ಲೋಕಸಂಹಾರಂಮಾಳ್ಪ ಕೃತಾಂತನಂತೆ=ಜಗತ್ತನ್ನು ಸಂಹರಿಸುವ ಯಮನಹಾಗೆ, ಧನುರ್ದಂಡಮಂ=ಬಿಲ್ಲನ್ನು, ಕೊಂಡಂ=ಹಿಡಿದನು.

ತಾ|| ತೇರಿನ ಅಚ್ಚು ಮುರಿವಂತೆಯೂ ಬಿಲ್ಲು ತುಂಡಾಗುವಂತೆಯೂ ಕುದು

ಚ|| ಒದವಿದ ಚಾಪಟಂಕೃತಿ ಭಯಂಕರಮಾಗೆ ವರೂಥಭಾರದಿಂ |
ದದಿರೆ ನೆಲಂ ಮನಃಪವನವೇಗದಿನೆಯ್ದಿ ಬಲಂ ಮಹಾಬಲಂ ||
ಕದನ ಮದಾವಿಲಂ ಕಱಿಯೆ ಬಲ್ಸರಿಯೆಂಬಿನಮಂಬನಂಬು ನ |
ಟ್ಟುದೆ ನೆಱನಾಗೆ ಕೂಡೆ ಗತಜೀವಿತಮಾಯ್ತು ಕಿರಾತ[1]ಸಾಧನಂ ||

ಆಗಳ್—

ರೆಗಳೂ ಸಾರಥಿಯೂ ಬೀಳುವಂತೆಯೂ ಹೊಡೆಯಲು ಇವನೊಬ್ಬ ಮಹಾ ಶೂರನಂತೆ ನನಗೆ ಪ್ರತಿಭಟಿಸುತ್ತಾನಂತೆ ಎಂದು ಆರ್ಭಟಿಸುತ್ತಾ ಲಕ್ಷ್ಮಣ ನನ್ನು ಗೆಲ್ಲುವ ಮಟ್ಟಿಗೆ ಕಿರಾತನು ಯುದ್ಧಮಾಡಲು ಅದನ್ನು ನೋಡಿ ರಾ ಮನು ಲೋಕವನ್ನೆಲ್ಲಾ ಧ್ವಂಸಮಾಡುವ ಯಮನಹಾಗೆ ತನ್ನ ಧನುರ್ದಂ ಡವನ್ನು ತೆಗೆದುಕೊಂಡನು. ೬೨

೬೩. ಟೀ|| ಒದವಿದ=ಉಂಟಾದ, ಚಾಪಟಂಕೃತಿ=ಬಿಲ್ಲಿನಟಂಕಾರ ವು, ಭಯಂಕರಮಾಗೆ=ಭೀತಿಯನ್ನುಂಟುಮಾಡುತ್ತಿರಲು, ನೆಲಂ=ಭೂಮಿ ಯು, ವರೂಥ=ರಥದ, ಭಾರದಿಂ=ಹೊರೆಯಿಂದ, ಅದಿರೆ=ನಡುಗಲು, ಮಹಾ ಬಲಂ=ಬಹುಸಾಮರ್ಥ್ಯವುಳ್ಳ, (ಕದನಮದಾವಿಲಂ) ಕದನಮದ=ಯುದ್ಧ ಮದದಿಂದ, ಆವಿಲಂ=ವ್ಯಾಪ್ತವಾದ, ಬಲಂ=ಸೇನೆಯು, ಮನಃಪವನವೇ ಗದಿಂ=ಮನೋವೇಗದಿಂದಲೂ, ವಾಯುವೇಗದಿಂದಲೂ, ಎಯ್ದಿ=ಬಂದು, ಬಲ್ಸರಿಯೆಂಬಿನಂ=ಬಲವಾದ ಮಳೆಯೆಂಬಹಾಗೆ, ಅಂಬಂ=ಬಾಣವನ್ನು, ಅಂಬು=ಬಾಣವು, ನಟ್ಟುದೆ=ನಾಟಿಕೊಂಡದ್ದೇ, ನೆರನಾಗೆ= ಸಹಾಯ ವಾಗಲು, ಕೂಡೆ=ಜೊತೆಯಲ್ಲಿಯೇ, ಕಿರಾತಸಾಧನಂ=ಬೇಡಸೈನ್ಯವು, (ಗತ ಜೀವಿತಂ) ಗತ=ಹೋದ, ಜೀವಿತಂ=ಪ್ರಾಣವುಳ್ಳದ್ದು, ಆಯ್ತು, (ಪ್ರಾಣಬಿ ಟ್ಟಿತೆಂದು ಭಾವ)

ತಾ|| ಧನುಸ್ಸಿನ ಶಬ್ದವು ದಿಗಿಲುಪಡಿಸುವಂತೆಯೂ, ರಥದಭಾರವು ಭೂಮಿಯನ್ನು ನಡುಗಿಸುವಂತೆಯೂ, ಯುದ್ಧಾವೇಶದಿಂದ ವಾಯುವೇಗ ಮ ನೋವೇಗದಿಂದ ಬಾಣವನ್ನು ಮಳೆಯಂತೆ ಸುರಿಸುತ್ತಾ ಬರಲು ಬಾಣ ನಾ ಟಿಕೊಂಡು ಕಿರಾತಸೇನೆಯೆಲ್ಲಾ ನಿರ್ಮೂಲವಾಯಿತು ೬೩.

ಗದ್ಯ|| ಆಗಳ್=ಆಗ,

1 ಸಂಕುಲಂ. ಕ. ಖ,, ಸೈನಿಕಂ ಗ. ಘ,

ಕಂ|| ಗೆಲ್ದಾರೆ ಜನಕಸೇನೆ ಸ |
ಡಿಲ್ದಗಿಯೆ ಕಿರಾತಸೇನೆ ದಶರಥರಾಮಂ ||
ಬಿಲ್ದೆಗೆದಿಸೆ ಮಾರ್ಪಡೆಯೊಳ್ |
ಬಲ್ದಲೆಯರ್ ಶಬರನಾಯಕರ್ ಪಡಲಿಟ್ಟರ್ ||೬೪||

ಆ ಸಮಯದೊಳ್ ಲಕ್ಷ್ಮಣಂ ಲಯಸಮಯ ಸಮುತ್ಪಾದನ ಸಮಗ್ರ ವೀರಗ್ರಹಾವೇಶಮನಪ್ಪುಕೆಯ್ದು—

ಕಂ|| ಪಾರದೆ ಕೈದುವ ಬಲಮಂ |
ಪಾರದೆ ನೆರವಲಮನೊಂದೆ ತೋಳ್ವಲದಿಂ ಸಂ ||
ಹಾರಿಸಿದಂ ಮಾರ್ಬಲಮಂ |
ವಾರಿಜನಾಭಂಗೆ ಸಂಗರಕ್ಕಿದಿರುಂಟೇ ||೬೫||

---

೬೪. ಟೀ|| ಜನಕಸೇನೆ=ಜನಕನದಂಡು, ಗೆಲ್ದು=ಜಯವನ್ನು ಹೊಂದಿ, ಆರೆ=ಸಿಂಹನಾದಮಾಡಲು, ಕಿರಾತಸೇನೆ=ಬೇಡರದಂಡು, ಸಡಿಲ್ದು=ಗುಂಪೊಡೆದು, ಅಗಿಯೆ=ಹೆದರಲು, ದಶರಥರಾಮಂ, ಬಿಲ್ದೆಗೆದು=ಧನುಸ್ಸನ್ನು ತೆಗೆದುಕೊಂಡು, ಇಸೆ=ಬಾಣಪ್ರಯೋಗಮಾಡಲು, ಮಾರ್ಪಡೆಯೊಳ್=ಎದುರುಕಕ್ಷಿಯ ಕಿರಾತಸೈನ್ಯದಲ್ಲಿ, ಬಲ್ದಲೆಯರ್=ಶೂರರಾದ, ಶಬರನಾಯಕರ್=ಬೇಡರೊಡೆಯರು, ಪಡಲಿಟ್ಟರ್=ಸತ್ತರು.

ತಾ|| ಜನಕಸೇನೆಯು ಜಯಧ್ವನಿಮಾಡುತ್ತಿರುವಲ್ಲಿ ಕಿರಾತಸೇನೆ ಭಯದಿಂದ ಹಿಮ್ಮೆಟ್ಟುತ್ತಿತ್ತು. ರಾಮನು ಬಾಣಪ್ರಯೋಗಮಾಡುತ್ತಿರುವಲ್ಲಿ ಬೇಡರ ಸೈನ್ಯದಲ್ಲಿ ಉಳಿದ ಮುಖಂಡನಾಯಕರು ಕೂಡ ಮೃತರಾದರು. ೬೪

ಗದ್ಯ|| ಆ ಸಮಯದೊಳ್=ಆ ಕಾಲದಲ್ಲಿ, ಲಕ್ಷ್ಮಣಂ (ಲಯಸಮಯ ಸಮುತ್ಪಾದನಸಮಗ್ರವೀರಗ್ರಹಾವೇಶಮಂ) ಲಯಸಮಯ=ಪ್ರಳಯಕಾಲದಲ್ಲಿ, ಸಮುತ್ಪಾದನ=ಉಂಟಾದ, ಸಮಗ್ರ=ಪೂರ್ಣವಾದ, ವೀರಗ್ರಹ=ವೀರರಸವೆಂಬ ಪಿಶಾಚಿಯ, ಆವೇಶಮಂ=ಪ್ರವೇಶವನ್ನು, ಅಪ್ಪುಕೆಯ್ದು=ಅಂಗೀಕರಿಸಿ, (ವೀರಾವೇಶವನ್ನು ಹೊಂದಿ ಎಂದು ಭಾವ.)

೬೫. ಟೀ|| ಕೈದುವ=ಆಯುಧವನ್ನು, ಪಾರದೆ=ನೋಡದೆ, (ಅಪೇಕ್ಷಿಸದೆ) ಬಲಮಂ=ಸೇನೆಯನ್ನು, ಪಾರದೆ=ನಿರೀಕ್ಷಿಸದೆ, ನೆರವಲಮಂ=ಸಹಾ

ಅಂತು ರಾಮಲಕ್ಷ್ಮಣರ್ ಕಡಂಗಿ ಕಾದುವಾಗಳವರ ಬಲಕ್ಕೆ ಸುಗಿದು ಮೆಯ್ದೆಗೆವ ಬೇಡವಡೆಯಂ ಕೂಡಿಕೊಂಡು—

ಚ|| ಅದಿರದಿದಿರ್ಚಿ ತಾಗಿದ ತರಂಗತವುಂ ದಿನನಾಯಕಂಗಿದಿ |
ರ್ಚಿದ ತಮದಂತೆ ಮೆಯ್ದೆಗೆಯೆ ಮಾರ್ಬಲದಾನೆಗೆ ಕೂಟಪಾಕಳಂ ||
ಕುದುರೆಗೆ 2ಕರ್ಣದೂಷಿಕೆ ರಥಕ್ಕೆ ಸಿಡಿಲ್ ಭಟಮಂಡಲಕ್ಕೆ ಕೆಂ |
ಡದ ಮಳೆಯೆಂಬಿನಂ ಕಱೆದನಂಬಿನ ಪೆರ್ಮಳೆಯಂ ಹಲಾಯುಧಂ||

ಯಕಸೇನೆಯನ್ನು, [ಪಾರದೆ] ಒಂದೆತೋಳ್ವಲದಿಂ=ಬಾಹುಬಲವೊಂದರಿಂದಲೇ. ಮಾರ್ಬಲಮಂ=ಶತ್ರುಸೈನ್ಯವನ್ನು, ಸಂಹಾರಿಸಿದಂ=ಕೊಂದನು. ವಾರಿಜನಾಭಂಗೆ=ಲಕ್ಷ್ಮಣನಿಗೆ, ಸಂಗರಕ್ಕೆ=ಯುದ್ಧದಲ್ಲಿ, ಇದಿರುಂಟೇ=ಪ್ರತಿಭಟರಿರುವರೇ ?

ತಾ|| ಆಯುಧವನ್ನೂ ಹುಡುಕದೆ ಸೈನ್ಯವನ್ನು ಕಾಯ್ದು ನಿರೀಕ್ಷಿಸದೆ ಮೂಲಬಲವನ್ನೂ ಲಕ್ಷಿಸದೆ ತನ್ನೊಬ್ಬನ ಬಾಹುಬಲದಿಂದಲೇ ಪ್ರತಿಪಕ್ಷದ ಸೇನೆಯನ್ನೆಲ್ಲಾ ಸಂಹರಿಸಿದನು. ಸಾಕ್ಷಾನ್ನಾರಾಯಣನಿಗೆ ಯುದ್ಧದಲ್ಲಿ ಇದಿರಾಗುವವರು ಉಂಟೇ ? ೬೫.

ಗದ್ಯ|| ಅಂತು=ಹಾಗೆ, ರಾಮಲಕ್ಷ್ಮಣರ್, ಕಡಂಗಿ=ಉತ್ಸಾಹಗೊಂಡು, ಕಾದುವಾಗಳ್=ಯುದ್ಧಮಾಡುವಾಗ, ಅವರ, ಬಲಕ್ಕೆ=ಸಾಮರ್ಥ್ಯಕ್ಕೆ, ಸುಗಿದು=ಭಯಪಟ್ಟು, ಮೆಯ್ದೆಗೆವ=ಹಿಂದೆಗೆಯುವ, ಬೇಡವಡೆಯಂ=ಕಿರಾತಸೇನೆಯನ್ನು, ಕೂಡಿಕೊಂಡು,

೬೬, ಟೀ|| ಅದಿರದೆ=ಹೆದರದೆ, ಇದಿರ್ಚಿ=ಇದಿರಾಗಿ, ತಾಗಿದ=ತಗಲಿದ, ತರಂಗತವುಂ, ದಿನನಾಯಕಂಗೆ=ಸೂರ್ಯನಿಗೆ ಇದಿರ್ಚಿದ=ಪ್ರತಿಭಟಿಸಿದ, ತಮದಂತೆ=ಕತ್ತಲೆಯಹಾಗೆ, ಮೆಯ್ದೆಗೆಯೆ=ಹಿಂದೆಗೆಯಲು, ಹಲಾಯುಧಂ=ರಾಮನು, ಮಾರ್ಬಲದ=ಶತ್ರುಸೈನ್ಯದ, ಆನೆಗೆ ಕೂಟಪಾಕಳಂ=ಕುಂಭಸ್ಥಳದ ರೋಗವು, ಕುದುರೆಗೆ, ಕರ್ಣದೂಷಿಕೆ=ಕಿವಿಯರೋಗವು, ರಥಕ್ಕೆ ಸಿಡಿಲ್=ಸಿಡಿಲು, ಭಟಮಂಡಲಕ್ಕೆ=ವೀರಸಮೂಹಕ್ಕೆ, ಕೆಂಡದಮಳೆ=ಬೆಂಕಿಯಮಳೆಯು, ಎಂಬಿನಂ=ಎಂಬಹಾಗೆ, ರಾಮನು ಅಂಬಿನ ಪೆರ್ಮಳೆಯಂ=ಬಾಣದ ದೊಡ್ಡಮಳೆಯನ್ನು, ಕರೆದಂ=ಸುರಿಸಿದನು,

2, ದಂತ, ಚ.

ಉ|| ಕಾದಲಿದಿರ್ಚಿ ಕೈದುವಿಡಿಯಲ್ಬಗೆದಪ್ಪುದು ವೊಗ್ಗೆ ಮಂಜಿನಂ |
ತಾದುದು ನಂಜನೆಂಜಲಿಸಿದಂತೆವೊಲಾದುದು ಬೇಗೆ ಪರ್ವಿದಂ ||
ತಾದುದು ಗಾಳಿಗೊಡ್ಡಿದ ಮುಗಿಲ್ಗೆಣೆಯಾದುದು ಕೂಡೆಯೊಕ್ಕಿದಂ|
ತಾದುದು ರಾಮಬಾಣ ಹತಿಯಿಂದಿದಿರಾದ ವಿರೋಧಿಸಾಧನಂ||೬೭||

ಆಗಳ್—

ಕಂ|| ಬಲವಳಿಯೆ ತೆರಂಗತಮಂ |
ಪಲಾಯನೋದ್ಯುಕ್ತನಾಸೆವಟ್ಟಂ ಜಂಘಾ ||
ಬಲಮುಂ ದಶರಥರಾಮನ |
ಶಿಲೀಮುಖಕ್ಕಡಬಿವಂತವಂ ದಶಮುಖನೇ ||೬೮||

ತಾ|| ಸೂರ್ಯನನ್ನು ಪ್ರತಿಭಟಿಸಿದ ಕತ್ತಲೆಯಂತೆ ತರಂಗತಮನು ಹತವೀರ್ಯನಾಗಲು ಹಲಾಯುಧನು ಆನೆ ಕುದುರೆ ತೇರು ಕಾಲಾಳುಗಳೆಲ್ಲಕ್ಕೂ ಅಸಾಧ್ಯ,ಅಪಾಯಕರವಾದ ವಿಪತ್ತುಂಟಾಗುವಂತೆ ಬಾಣಪ್ರಯೋಗ ಮಾಡಿದನು, ೬೬.

೬೭. ಟೀ|| ಇದಿರಾದ=ಪ್ರತಿಭಟಿಸಿದ, ವಿರೋಧಿಸಾಧನಂ=ಶತ್ರುಸೈನ್ಯವು, ಕಾದಲ್=ಯುದ್ಧಮಾಡುವುದಕ್ಕೆ, ಇದಿರ್ಚಿ=ಇದಿರಾಗಿ, ಕೈದುವಿಡಿಯಲ್=ಆಯುಧವನ್ನು ಹಿಡಿಯುವುದಕ್ಕೆ, ಬಗೆದಪ್ಪುದು=ಆಲೋಚಿಸುವುದು, ವೊಗ್ಗೆ=ಸಾಧ್ಯವೇ ? (ಅಲ್ಲವೆಂದರ್ಥ) ಮಂಜಿನಂತೆ=ಹಿಮದಹಾಗೆ, ಆದುದು=ಆಯಿತು, ನಂಜಂ=ವಿಷವನ್ನು, ಎಂಜಲಿಸಿದಂತೆವೊಲ್=ಕುಡಿದ ಹಾಗೆ ಆದುದು, ಬೇಗೆ=ಕಾಡುಗಿಚ್ಚು, ಪರ್ವಿದಂತೆ=ಮುಸುಕಿದ ಹಾಗೆ, ಆದುದು, ಗಾಳಿಗೊಡ್ಡಿದ=ಗಾಳಿಗೆದುರಾದ, ಮುಗಿಲ್ಗೆ=ಮೋಡಕ್ಕೆ, ಎಣೆಯಾದುದು=ಸಮಾನವಾಯ್ತು, ಕೂಡೆ=ಕೂಡಲೆ. [ರಾಮಬಾಣಹತಿಯಿಂ] ರಾಮ=ರಾಮನ, ಬಾಣಹತಿಯಿಂ=ಬಾಣಗಳ ಪೆಟ್ಟಿನಿಂದ, ಒಕ್ಕಿದಂತೆ=ಧಾನ್ಯವನ್ನು ತೂರಿದಹಾಗೆ, ಆದುದು.

ತಾ|| ಪ್ರತಿಭಟಿಸಿದ ಶತ್ರುಸೇನೆಯು ಆಯುಧ ಹಿಡಿಯಲು ಆಲೋಚಿಸುವುದೂ ಸಾಧ್ಯವಾಗಲಿಲ್ಲ. ಸೂರ್ಯನಮುಂದೆಮಂಜಿನಂತೆಯೂ ವಿಷಪಾನಮಾಡಿದಂತೆಯೂ ಬೇಗೆಯಮಧ್ಯಕ್ಕೆಸಿಕ್ಕಿದಂತೆಯೂ ಗಾಳಿಹೊಡೆತಕ್ಕೆಸಿಕ್ಕಿದಮೋಡದಂತೆಯೂ ಆಗಿ ರಾಮನ ಬಾಣದ ಏಟಿನಿಂದ ಎಲ್ಲಾ ತೂರಿಬಿಟ್ಟಂತಾಯಿತು.

೬೮. ಟೀ|| ಬಲಂ=ಸೇನೆಯು, ಅಳಿಯೆ=ಸಾಯಲು, ತರಂಗತಮಂ=

ಓಡಲೊಡರಿಸುವೊಡಂ ತೊಡೆ |
ಸೇಡೊಡರಿಸಿದಪ್ಪುದೆಂದು ಭಯರಸದಿಂದ ||
ಲ್ಲಾಡೆ ಮನಂ ಕೈದುವನೀ |
ಡಾಡಿದನಂಜಿಸುಗುಮಾರುಮಂ ರಾಮಶರಂ ||೧೯||

ತುಳಿಲಾಳ್ತನಕ್ಕವಂ ನೀ |
ರಿಳಿವಂತಳವಳಿದು ಸೂಸೆ ಕಣ್ಣೀರ್ತೆರೆರಿಂ ||
ದಿಳಿದಂ ನೆಲಕ್ಕೆ ಜಸಮುಡಿ |
ಗಿಳಿವಿನೆಗಂ ಲುಬ್ಧಕಂ ನೆಲಂ ಪಳಿವಿನೆಗಂ ||೨೦||

ತರಂಗತಮನು, (ಪಲಾಯನೋದ್ಯುಕ್ತಂ) ಪಲಾಯನ=ಓಡುವುದರಲ್ಲಿ, ಉದ್ಯುಕ್ತಂ=ಆಸಕ್ತನಾಗಿ, ಜಂಘಾಬಲಮಂ=ಮೊಳಕಾಲುಗಳ ಶಕ್ತಿಯನ್ನು, ಆಸೆವಟ್ಟಂ=ಅಪೇಕ್ಷಿಸಿದನು. ದಶರಥರಾಮನ, ಶಿಲೀಮುಖಕ್ಕೆ=ಬಾಣಕ್ಕೆ, ಎಡರುವಂತೆ=ಅಡ್ಡಿಪಡಿಸುವುದಕ್ಕೆ, ಅವಂ ದಶಮುಖನೇ=ರಾವಣನೇ ಅವನು.

ತಾ|| ಸೇನೆಯೆಲ್ಲಾ ಹತವಾಗಲು ಆ ತರಂಗತಮನು ಓಡಿಹೋಗುವಷ್ಟು ಶಕ್ತಿ ಕೊನೆಗೆ ಇದ್ದರೆ ಸಾಕೆನ್ನುತ್ತಿದ್ದನು. ರಾಮಬಾಣವನ್ನು ಪ್ರತಿಭಟಿಸಲಿಕ್ಕೆ ಅವನೇನು ರಾವಣನೇ ? ೧೮.

೧೯. ಟೀ|| ಓಡಲ್=ಓಡುವುದಕ್ಕೆ, ಒಡರಿಸುವೊಡಂ=ಪ್ರಾರಂಭಿಸಲು, ತೊಡೆ=ತೊಡೆಗಳು, ಸೇಡೊಡರಿಸಿದಪ್ಪುದು=ಸೇದಿಕೊಳ್ಳುತ್ತವೆ ಎಂದು=ಎಂಬದಾಗಿ, ಭಯರಸದಿಂದೆ=ಹೆದರಿಕೆಯಿಂದ, ಮನಂ=ಮನಸ್ಸು, ಅಲ್ಲಾಡೆ=ಚಲಿಸಲಾಗಿ, ಕೈದುವಂ=ಆಯುಧವನ್ನು. ಈಡಾಡಿದಂ=ಬಿಸಾಡಿದನು, ರಾಮಶರಂ=ರಾಮಬಾಣವು, ಆರುಮಂ=ಎಂಥವರನ್ನೂ, ಅಂಜಿಸುಗುಂ=ಹೆದರಿಸುವುದು.

ತಾ|| ಓಡಲು ಯತ್ನಿಸಿದರೆ ತೊಡೆ ಸೇದುವುದೆಂಬ ದಿಗಿಲಿನಿಂದ ಮನಸ್ಸು ಹಿಂದೆಗೆಯಲು ಆಯುಧವನ್ನೇ ಎಸೆದುಬಿಟ್ಟನು. ರಾಮಬಾಣವು ಎಂತವರನ್ನೂ ದಿಗಿಲುಗೊಳಿಸುವದು. ೧೯,

೨೦. ಟೀ|| ಲುಬ್ಧಕಂ=ಶಬರಸೇನಾಪತಿಯಾದ, ಅವಂ=ತರಂಗತಮನು, ತುಳಿಲಾಳ್ತನಕ್ಕೆ=ಸಾಮರ್ಥ್ಯಕ್ಕೆ, ನೀರಿಳಿವಂತೆ=ನೀರಿಳಿಯುವಹಾಗೆ,

ಚ || ಸುಗಿದಿರೆ ಚಂದ್ರಮಂಡಲದಮುಂದೆ ತಮಂ ಕೆಡೆದಿರ್ದುದೆಂಬಿನಂ |
ಮುಗಿಯೆ ಕರಾಂಬುಜಂ ಕುವಲಯಂ ನಗುವಂತಿರೆ ರಾಮಚಂದ್ರನೇ ||
ೞ್ಗೆ ದೆಸೆಗೆಟ್ಟು ತೊಟ್ಟನೆ ತರಂಗತಮಂ ಶರಣೆಂದು ಬೀೞ್ವುದುಂ||
ಗಗನಮನಾಗಳಾವರಿಸಿದತ್ತಪಹಾರ ಘನಾನಕಸ್ವನಂ ||೭೧||

ಅಳವಳಿದು=ಶಕ್ತಿಗೆಟ್ಟು, ಕಣ್ಣೀರ್=ಕಣ್ಣೀರು, ಸೂಸೆ=ಸುರಿಯುತ್ತಿರಲು, ಜಸಂ=ಕೀರ್ತಿಯು, ಅಡಿಗೆ=ಕೆಳಕ್ಕೆ. ಇಳಿವಿನೆಗಂ=ಇಳಿಯುತ್ತಿರಲು, ನೆಲಂ=ಲೋಕವು, ಪಳಿವಿನೆಗಂ=ನಿಂದಿಸುತ್ತಿರಲು, ತೇರಿಂದೆ=ರಥದಿಂದ, ನೆಲಕ್ಕೆ=ಭೂಮಿಗೆ, ಇಳಿದಂ=ಇಳಿದನು.

ತಾ|| ಶಬರಸೇನಾಪತಿಯಾದ ಅವನು ಸಾಮರ್ಥ್ಯಕ್ಕೆ ಜಲಾಂಜಲಿ ಕೊಟ್ಟ ಹಾಗೆ ಕಣ್ಣೀರು ಸುರಿಸುತ್ತಾ ಯಶಸ್ಸು ನಿರ್ಮೂಲವಾಗಿ ಲೋಕವೆಲ್ಲಾ ನಿಂದಿಸುತ್ತಿರಲು ಭೂಮಿಗೆ ಇಳಿದನು. ೭೦.

೭೧. ಟೀ|| ಚಂದ್ರಮಂಡಲದಮುಂದೆ=ಚಂದ್ರಬಿಂಬದಮುಂದುಗಡೆಯಲ್ಲಿ, ತಮಂ=ಕತ್ತಲೆಯು, ಸುಗಿದಿರೆ=ಭಯದಿಂದ, ಕೆಡೆದಿರ್ದುದು=ಬಿದ್ದಿರುವುದು, ಎಂಬಿನಂ=ಎಂಬಹಾಗೆ, ಕರಾಂಬುಜಂ=ಹಸ್ತಕಮಲವು, ಮುಗಿಯೆ=ಮುಚ್ಚಿಕೊಂಡಿರಲು. ಕುವಲಯಂ=ಕನ್ನೈದಿಲೆಯಹೂವು, ನಗುವಂತಿರೆ=ಅರಳುವಹಾಗೆ, ರಾಮಚಂದ್ರನ ಏಳ್ಗೆಗೆ=ವೃದ್ಧಿಗೆ, ತರಂಗತನುಂ, ದೆಸೆಗೆಟ್ಟು=ದಿಕ್ಕುತೋರದೆ, ತೊಟ್ಟನೆ=ಬೇಗ, ಶರಣೆಂದು=ಕಾಪಾಡೆಂಬದಾಗಿ, ಬೀಳ್ವುದುಂ=ನಮಸ್ಕರಿಸಲು, (ಅಪಹಾರಘನಾನಕಸ್ವನಂ) ಅಪಹಾರ=ಜಯಸೂಚಕವಾದ, ಘನ=ಹೆಚ್ಚಾದ, ಆನಕ=ತಂಬಟೆಯು, ಸ್ವನಂ=ಧ್ವನಿಯು, ಗಗನಮಂ=ಗಗನವನ್ನು ಆವರಿಸಿದತ್ತು=ಆಚ್ಛಾದಿಸಿತು.

ತಾ|| ಚಂದ್ರಮಂಡಲದ ಮುಂದೆ ಕತ್ತಲೆಯು ಭಯದಿಂದ ಬಿದ್ದಿದೆಯೋ ಎನ್ನುವಹಾಗೆ ಚಂದ್ರೋದಯದಿಂದ ಕಮಲಗಳು ಮೊಗ್ಗಾಗುವುದೂ ನೈದಿಲೆಗಳು ಅರಳುವುದೂ ಸ್ವಾಭಾವಿಕವಾದುದೆಂಬಂತೆ ತರಂಗತಮನು ಕೈಮುಗಿಯುತ್ತಿದ್ದರೆ ಲೋಕವೆಲ್ಲವೂ ಹಾಸ್ಯಮಾಡುತ್ತಿರಲು ಜಯಭೇರಿಗಳು ಮೊಳಗಿದುವು. ೭೧.

ಕಂ|| ಅಂಬರಮಂ ವಿಜಯಪತಾ |
ಕಾಂಬರವೊಡನೊಡನೆ ಸಕಲ ದಿಗ್ವನಿತಾವ ||
ಕ್ತ್ರಾಂಬುಜಮನಭಯಘೋಷಂ |
ಚುಂಬಿಸಿದುವು ಕಱೆದುದಮರ ಕುಸುಮಾಸಾರಂ ||೭೨||

ಅಂಜದಿರಂಜದಿರೆನೆ ಮುಗಿ |
ದಂಜಲಿಪುಟಮಂ ತರಂಗತಮನಿದಿರೊಳ್ನಿಂ ||
ದಂಜನಗಿರಿಯವೊಲಿರೆ ಕೊ |
ಟ್ಟಂ ಜಯಜಾಯಾಸಹಾಯನಭಯಮನಾಗಳ್ ||೭೩||

---

೭೨. ಟೀ|| (ವಿಜಯಪತಾಕಾಂಬರಂ) ವಿಜಯಪತಾಕಾ=ಜಯಧ್ವಜಗಳ, ಅಂಬರಂ=ಬಟ್ಟೆಯು, ಅಂಬರಮಂ=ಆಕಾಶವನ್ನೂ, ಅಭಯಘೋಷಂ=ಹೆದರಬೇಡಿರೆಂಬ ಧ್ವನಿಯು. [ಸಕಲದಿಗ್ವನಿತಾವಕ್ತ್ರಾಂಬುಜಮಂ] ಸಕಲದಿಕ್=ಎಲ್ಲಾ ದಿಕ್ಕುಗಳೆಂಬ, ವನಿತಾ=ಸ್ತ್ರೀಯರ, ವಕ್ತ್ರಾಂಬುಜಮಂ=ಮುಖಕಮಲವನ್ನೂ, ಒಡನೊಡನೆ=ಜೊತೆಯಲ್ಲಿಯೇ, ಚುಂಬಿಸಿದುವು=ಸೋಕಿದವು, [ಅಮರಕುಸುಮಾಸಾರಂ] ಅಮರ=ದೇವತೆಗಳ, ಕುಸುಮಾಸಾರಂ=ಪುಷ್ಪವೃಷ್ಟಿಯು, ಕರೆದುದು=ಸುರಿಯಿತು.

ತಾ|| ಆಕಾಶದಲ್ಲೆಲ್ಲಾ ವಿಜಯಧ್ವಜಗಳು ವ್ಯಾಪಿಸಿದವು. ಅಭಯಧ್ವನಿಯು ದಿಗಂತದಲ್ಲೆಲ್ಲಾ ವ್ಯಾಪಿಸಿತು. ದೇವತೆಗಳು ಪೂಮಳೆಯನ್ನು ಕರೆದರು. ೭೨.

೭೩. ಟೀ|| ಅಂಜದಿರಂಜದಿರ್=ಹೆದರಬೇಡ ಹೆದರಬೇಡ, ಎನೆ=ಅನ್ನಲು, ತರಂಗತಮಂ, ಅಂಜಲಿಪುಟಮಂ=ಕೈಗಳನ್ನು, ಮುಗಿದು=ಜೋಡಿಸಿಕೊಂಡು. ಇದಿರೊಳ್=ಮುಂದುಗಡೆಯಲ್ಲಿ, ನಿಂದು=ನಿಂತು, ಅಂಜನಗಿರಿಯವೋಲ್=ಅಂಜನಾದ್ರಿಯಂತೆ, ಇರೆ=ಇರಲಾಗಿ, ಆಗಳ್=ಆಗ, [ಜಯಜಾಯಾಸಹಾಯಂ] ಜಯಜಾಯಾ=ಜಯವೆಂಬ ಹೆಂಡತಿಗೆ, ಸಹಾಯಂ=ಸಹಾಯಕನಾದ ಅವನು, ಅಭಯಮಂ=ಹೆದರಬೇಡೆಂಬ ಮಾತನ್ನು, ಕೊಟ್ಟಂ=ಕೊಟ್ಟನು.

ತಾ|| ತರಂಗತಮನು ಅಂಜಲಿಬದ್ಧನಾಗಿ ಅಂಜನಾದ್ರಿಯಂತೆ ಇದಿ

ಉ|| ಮುತ್ತಿನ ಪೊನ್ನ ಪೆರ್ದುಡುಗೆಯಂ ವಸನಂಗಳನಿತ್ತರಣ್ಯದೊಳ್ |
ನಿತ್ತರಿಪಂತು ನಾಡ ಗಡಿಯಂ ಮಱೆದುಂ ಪುಗದಂತವಂಗೆ ಭೂ ||
ಪೋತ್ತಮನಾಜ್ಞೆಯೆಂಬ ಮಣಿಮಂಡನಮಂ ನಡುನೆತ್ತಿಗಿತ್ತು ದಿ |
ಗ್ಭಿತ್ತಿಗೆ ಕೀರ್ತಿಚಂದನ ವಿಲೇಪಮನಿತ್ತನಿದೇನುದಾತ್ತನೋ ||೭೪||

ಕಂ|| ಪ್ರಬಲನಬಲನವೊಲಂತಾ |
ಶಬರಂ ಬೀೞ್ಕೊಂಡು ಬೇಗಮೆಂದುದನೇಗೊಂ ||
ಡು ಒರ್ದುಂಕಿ ಪೋದನೆನೆ ರಾ |
ಮಬಾಣಮಂ ಕದನಭೂಮಿಯೊಳ್ ಮಾಱಿವರಾರ್ ||೭೫||

ರಿಗೆ ನಿಂತಿರಲು ಜಯಶಾಲಿಯಾದ ರಾಮನು ಅಂಜಬೇಡ ಎಂದು ಅಭಯ ಕೊಟ್ಟನು ೭೩.

೭೪. ಟೀ|| ಭೂಪೋತ್ತಮಂ=ರಾಜಶ್ರೇಷ್ಠನಾದ ರಾಮನು, ಮುತ್ತಿನ, ಪೊನ್ನ=ಚಿನ್ನದ, ಪೆರ್ದುಡಿಗೆಯಂ=ಘನವಾದ ಆಭರಣವನ್ನೂ, ವಸನಂಗಳಂ=ವಸ್ತ್ರಗಳನ್ನೂ, ಇತ್ತು=ಕೊಟ್ಟು, ಅರಣ್ಯದೊಳ್=ಕಾಡಿನಲ್ಲಿ, ನಿತ್ತರಿಪಂತೆ=ವಾಸಮಾಡುವಹಾಗೂ, ನಾಡ=ದೇಶದ. ಗಡಿಯಂ=ಎಲ್ಲೆಯನ್ನು, ಮರೆದುಂ=ಮರೆತುಕೂಡ, ಪುಗದಂತೆ=ಪ್ರವೇಶಿಸದ ಹಾಗೆ, ಅವಂಗೆ=ತರಂಗತಮನಿಗೆ, ಆಜ್ಞೆಯೆಂಬ=ಅಪ್ಪಣೆಯೆಂಬ, ಮಣಿಮಂಡನಮಂ=ರತ್ನಾಭರಣವನ್ನೂ, ನಡುನೆತ್ತಿಗೆ=ತಲೆಯಮಧ್ಯಕ್ಕೆ, ಇತ್ತು=ಕೊಟ್ಟು, ದಿಗ್ಭಿತ್ತಿಗೆ=ದಿಕ್ಪ್ರದೇಶಕ್ಕೆ, (ಕೀರ್ತಿಚಂದನವಿಲೇಪಮಂ) ಕೀರ್ತಿ=ಯಶಸ್ಸೆಂಬ. ಚಂದನ=ಶ್ರೀಗಂಧದ, ವಿಲೇಪಮಂ=ಲೇಪನವನ್ನು, ಇತ್ತಂ=ಕೊಟ್ಟನು, ಅದೇನುದಾತ್ತನೋ=ಅದೆಷ್ಟು ಉದಾರನೋ ?

ತಾ|| ರಾಜಶ್ರೇಷ್ಠನಾದ ರಾಮನು ಪರಾಜಿತನಾಗಿ ಶರಣಾಗತನಾದ ತರಂಗತಮನಿಗೆ ಸ್ವರ್ಣಾಭರಣಗಳನ್ನೂ ಉಡುಗೊರೆಗಳನ್ನೂ ರತ್ನಾಲಂಕಾರಗಳನ್ನೂ ಕೊಟ್ಟು ಕಾಡಿನಲ್ಲಿಯೇ ವಾಸಿಸಬೇಕೆಂದೂ ಮರೆತಾದರೂ ದೇಶದ ಗಡಿಗೆ ಕೂಡ ಪ್ರವೇಶಿಸಬಾರದೆಂದೂ ಅಪ್ಪಣೆಮಾಡಿ ದಿಗಂತವಿಖ್ಯಾತವಾದ ಕೀರ್ತಿಯನ್ನು ಪಡೆದನು. ೭೪.

೭೫. ಟೀ|| ಪ್ರಬಲಂ=ವಿಶೇಷ ಬಲಶಾಲಿಯಾದ, ಆ ಶಬರಂ=ತರಂಗತಮನು, ಅಬಲನವೋಲ್=ಅಸಮರ್ಥನಂತೆ, ಅಂತು=ಹಾಗೆ, ಬೀಳ್ಕೊಂಡು=

ಆಗಳನೇಕವಮಂಗಳಾನಕರವಂಗಳೊಡನೆ—

ಕಂ|| ನಗುವಂತೆ ಪೆಱರ ಬಿಲ್ಬ |
ಲ್ಮೆಗಳಂ ತಣ್ಬೆಳಗನುಗುಳೆ ಪೂಜಿಪ ನೆವದಿಂ ||
ಜಗದಧಿಪ ಧನುರ್ಗುಣಮಂ |
ತ್ರಿಗುಣಿಸಿದಂ ತೋರಮುತ್ತಿನೇಕಾವಳಿಯಿಂ ||೭೬||

ಅಂತು ಪೂಜಿಸಿ—

ರಾಮನಿಂದ ಕಳುಹಿಸಿಕೊಂಡು, ಎಂದುದಂ=ಹೇಳಿದುದನ್ನು, ಬೇಗಂ=ಶೀಘ್ರವಾಗಿ, ಏಗೊಂಡು=ಅಂಗೀಕರಿಸಿ, ಬರ್ದುಂಕಿ=ಜೀವಿಸಿ, ಪೋದಂ=ಹೋದನು, ಎನೆ=ಅನ್ನಲಾಗಿ, ಕದನಭೂಮಿಯೊಳ್=ಯುದ್ಧರಂಗದಲ್ಲಿ, ರಾಮಬಾಣಮಂ=ರಾಮನ ಬಾಣವನ್ನು, ಆರ್=ಯಾರು, ಮೀರುವರ್=ಅತಿಕ್ರಮಿಸುವರು. [ಎಲ್ಲರೂ ರಾಮಬಾಣಕ್ಕೊಳಗಾಗುವರೆಂದು ಭಾವ.]

ತಾ|| ಆ ಶಬರಸೇನಾಪತಿಯಾದ ತರಂಗತಮನು ಬಲಶಾಲಿಯಾದರೂ ದುರ್ಬಲನಂತೆ ರಾಮಾಜ್ಞೆಯನ್ನು ಅಂಗೀಕರಿಸಿ ಅಪ್ಪಣೆಪಡೆದುಹೋದನು ೭೫.

೭೬. ಟೀ|| ಪೆಱರ=ಇತರರ, ಬಿಲ್ಬಲ್ಮೆಗಳಂ=ಧನುಸ್ಸಾಮರ್ಥ್ಯಗಳನ್ನು, ನಗುವಂತೆ=ಹಾಸ್ಯಮಾಡುವಹಾಗೆ, ತಣ್ಬೆಳಗಂ=ತಂಪಾದ ಕಾಂತಿಯನ್ನು, ಉಗುಳೆ=ಹೊರಡಿಸುತ್ತಿರಲು, (ಜಗದಧಿಪಧನುರ್ಗುಣಮಂ) ಜಗದಧಿಪ=ರಾಮನ, ಧನುರ್ಗುಣಮಂ=ಬಿಲ್ಲಿನ ಹೆದೆಯನ್ನು, ಪೂಜಿಪನೆವದಿಂ=ಅರ್ಚಿಸುವ ವ್ಯಾಜದಿಂದ, ತೋರಮುತ್ತಿನ=ದಪ್ಪಮುತ್ತುಗಳ, ಏಕಾವಳಿಯಿಂ=ಒಂದೆಳೆಯ ಹಾರದಿಂದ, ತ್ರಿಗುಣಿಸಿದಂ=ಮೂರರಷ್ಟು ಹೆಚ್ಚಿಸಿದನು.

ತಾ|| ಇತರರ ಧನುರ್ವಿದ್ಯಾಸಾಮರ್ಥ್ಯವನ್ನು ಹಾಸ್ಯಮಾಡುವಂತೆ ಪೂಜಿಸುವ ನೆವದಿಂದ ತಂಪಾದ ಕಾಂತಿಯನ್ನು ಬೀರುವ ದಪ್ಪಮುತ್ತಿನ ಸರವನ್ನು ಆ ಧನುವಿಗೆ ಮಾಲೆಹಾಕಿ ಅದರ ಹೆದೆಯು ಮೂರಾಗಿ ಕಾಣುವಂತೆ ಮಾಡಿದನು. ೭೬

ಗದ್ಯ|| ಅಂತು=ಹಾಗೆ, ಪೂಜಿಸಿ=ಪೂಜೆಮಾಡಿ.

ಉ|| ಮಾರಣಮಂತ್ರ ನಾದಮೆನಿಸಿತ್ತು ವಿರೋಧಿಗೆ ಶಾಂತಿಕಕ್ರಿಯಾ |
ಕಾರಣ ಮಂತ್ರನಾದಮೆನಿಸಿತ್ತು ಧರಿತ್ರಿಗೆ ಮೃತ್ಯು ವಂಚನೋ ||
ಚ್ಚಾರಣ ಮಂತ್ರನಾದಮೆನಿಸಿತ್ತೆಮಗಚ್ಚರಿ ನಿನ್ನ ಚಾಪ ಟಂ |
ಕಾರ ನಿನಾದಮೊಂದೆ ಪಲವುಂ ತೆಱನಂ ತಳೆದಂದಮಾವುದೋ ||೭೭||

ಕಂ|| ಏಸಂ ಪ್ರತ್ಯುಪಕಾರಮು |
ನಾನೊಡರಿಸುವೆಂ ಕುಮಾರ ಕನ್ನೆಯನಿತ್ತೆಂ ||
ಮೇನಕೆಯಿಂ ಮಿಗಿಲೆನಿಸಿದ |
ಜಾನಕಿಯಂ ಮದನ ವಶ್ಯ ಮಣಿದೀಪಿಕೆಯಂ ||೭೮||

೭೭. ಟೀ|| ನಿನ್ನ, (ಚಾಪಟಂಕಾರನಿನಾದಮೊಂದೆ) ಚಾಪಟಂಕಾರ=ಧನುಷ್ಟಂಕಾರದ, ನಿನಾದಮೊಂದೆ=ಧ್ವನಿಯೊಂದೇ, ವಿರೋಧಿಗೆ=ಶತ್ರುವಿಗೆ, ಮಾರಣಮಂತ್ರನಾದಂ=ಕೊಲ್ಲುವ ಮಂತ್ರಧ್ವನಿಯು, ಎಂದೆನಿಸಿತ್ತು=ಎಂಬ ಜ್ಞಾನವನ್ನುಂಟು ಮಾಡಿತು. ಧರಿತ್ರಿಗೆ=ಭೂಮಿಗೆ, (ಶಾಂತಿಕಕ್ರಿಯಾಕಾರಣಮಂತ್ರನಾದಂ) ಶಾಂತಿಕಕ್ರಿಯಾ=ಬಂಧನಿವಾರಣಕಾರ್ಯಗಳಿಗೆ, ಕಾರಣ=ನಿಮಿತ್ತವಾದ, ಮಂತ್ರ=ಮಂತ್ರದ, ನಾದಂ=ಧ್ವನಿಯು, ಎನಿಸಿತ್ತು, ಎಮಗೆ=ನಮಗೆ, (ಮೃತ್ಯುವಂಚನೋಚ್ಚಾರಣಮಂತ್ರನಾದಂ) ಮೃತ್ಯು=ಮರಣಾದಿ ದೇವತೆಯು, ವಂಚನ=ಮೋಸಕರವಾದ, ಉಚ್ಚಾರಣಮಂತ್ರ=ಹೇಳುವ ಮಂತ್ರದ, ನಾದಂ=ಶಬ್ದವು ಎನಿಸಿತ್ತು, ಪಲವುಂತೆರನಂ=ಇದೊಂದೇ ಅನೇಕ ಪ್ರಕಾರಗಳನ್ನು, ತಳೆದ=ಹೊಂದಿದ, ಅಂದಂ=ರೀತಿಯು, ಆವುದೋ=ಯಾವುದೋ ?

ತಾ|| ಶ್ರೀರಾಮನೆ ನಿನ್ನ ಧನುಸ್ಸಿನ ಟಂಕಾರವು ಶತೃಗಳಿಗೆ ಮರಣ ಮಂತ್ರಶಬ್ದದಂತೆಯೂ, ಭೂಲೋಕಕ್ಕೆ ಶಾಂತಿಕ್ರಿಯಾಮಂತ್ರಶಬ್ದದಂತೆಯೂ, ಈ ರೀತಿಯಾಗಿ ಒಂದೇ ಶಬ್ದವು ಅನೇಕ ಪ್ರಕಾರವಾಗಿತ್ತು. ೭೭

೭೮. ಟೀ|| ಕುಮಾರ=ರಾಜಪುತ್ರನೇ, ಆಂ=ನಾನು. ಏಸಂಪ್ರತ್ಯುಪಕಾರಮಂ=ಯಾವ ಬದಲುಉಪಕೃತಿಯನ್ನು, ಒಡರಿಸುವೆಂ=ಮಾಡಲಿ? ಮೇನಕೆಯಿಂ=ಮೇನಕೆಯೆಂಬ ಅಪ್ಸರಸ್ತ್ರೀಗಿಂತಲೂ, ಮಿಗಿಲ್=ಹೆಚ್ಚು ಸೌಂದರ್ಯವತಿಯು, ಎನಿಸಿದ=ಅನ್ನಿಸಿಕೊಂಡ, ಮದನ=ಮನ್ಮಥನ, ವಶ್ಯ=ವಶೀಕರಣದ, ಮಣಿದೀಪಿಕೆಯಿಂ=ದೀಪದಂತೆ ಕಾಂತಿಯುಕ್ತ ರತ್ನಸ್ವರೂಪಳಾದ, ಕನ್ನೆಯಂ=ನನ್ನ ಮಗಳನ್ನು, ಇತ್ತೆಂ=ಕೊಟ್ಟೆನು.

ಅನುಬಂಧಮನ್ವಯಾ ಗತ |
ಮೆನಿಸಿದುದದನಧಿಕಮಾಗೆ ಮಾಳ್ಪನುನಯದಿಂ ||
ದನನುಗುಣ ಸಸ್ಯ ಸಂಪಾ |
ದನ ಸೀತೆಯೆನಿಪ್ಪ ಸೀತೆಯುಂ ನಿನಗಿತ್ತಂ ||೭೯||

ಎಂದು ನುಡಿದು ರಾಮನುಮಂ ಸೌಮಿತ್ರಿಯುಮಂ ವಿಚಿತ್ರ ವಸ್ತ್ರಭೂಷಣಾದಿಗಳಿಂದರ್ಚಿಸಿ ಜನಕಂ ಕತಿಪಯ ಪ್ರಯಾಣಂಗಳಿಂ ಕಳಿಪುವುದುಂ ರಾಮಲಕ್ಷ್ಮಣರಯೋಧ್ಯೆಯುಂ ಪೊಕ್ಕು ಸುಖದಿನಿರ್ಪುದು ಮೊಂದುದಿವಸಂ-

---

ತಾ|| ಕುಮಾರನೇ ನಿನ್ನೀಮಹೋಪಕಾರಕ್ಕೆ ಏನು ಪ್ರತ್ಯುಪಕಾರಮಾಡಿಯೇನು ? ಮೇನಕೆಗಿಂತ ರೂಪವತಿಯೆನಿಸಿದ ಜಾನಕಿಯನ್ನು ಕೊಟ್ಟಿದೇನೆ

೭೯. ಅನುಬಂಧಂ=ಸಂಬಂಧವು, ಅನ್ವಯಾಗತಂ=ಸದ್ವಂಶದಿಂದ ಬಂದದ್ದು, ಎನಿಸಿದುದು=ಅನ್ನಿಸಿಕೊಂಡಿರುವುದು, ಅದಂ=ಆ ವಂಶವನ್ನು, ಅಧಿಕಂ=ಉತ್ಕೃಷ್ಟವಾದದ್ದು. ಆಗೆ=ಆಗಲು, ಮಾಳ್ಪ=ಮಾಡಬೇಕೆಂಬ, ಅನುನಯದಿಂದಂ=ಪ್ರೀತಿಯಿಂದ, (ಅನುಗುಣ ಸಸ್ಯಸಂಪಾದನಸೀತೆ) ಅನು=ಅನುಸರಿಸಿದ, ಗುಣ=ಸೌಶೀಲ್ಯಾದಿಗುಣಗಳೆಂಬ, ಸಸ್ಯ=ಪೈರುಗಳ, ಸಂಪಾದನ=ಪ್ರಾಪ್ತಿಗೆ, ಸೀತೆ=ಆಧಾರಳು, ಎನಿಪ್ಪ=ಎನಿಸಿರುವ, ಸೀತೆಯುಂ=ಸೀತೆಯನ್ನು, ನಿನಗೆ, ಇತ್ತಂ=ಕೊಟ್ಟೆನು.

ತಾ|| ಸಂಬಂಧವು ಹಿಂದಿನಿಂದಲೂ ನಡೆದು ಬಂದುದು. ಅದನ್ನು ಇನ್ನು ಅಧಿಕವಾಗಿ ಸಮೀಪವರ್ತಿಮಾಡುವ ಉದ್ದೇಶದಿಂದ ಶ್ರೇಷ್ಠವಾದ ಸರ್ವಲಕ್ಷಣ ಸಸ್ಯ ಸಂಪತ್ತಿಗೆ ಸೀತೆಯನ್ನು ನಿನಗೆ ಕೊಟ್ಟೆನು ಎಂದು ರಾಮನಿಗೆ ಹೇಳಿ ಅವರಿಬ್ಬರಿಗೂ ಉಡುಗೊರೆ ಕೊಟ್ಟು ಸತ್ಕರಿಸಿ ಕಳುಹಿಸಲು ಅವರು ಅಯೋಧ್ಯೆಯನ್ನು ತಲಪಿ ಸುಖವಾಗಿದ್ದರು. ೭೯.

ಗದ್ಯ|| ಎಂದು=ಎಂಬದಾಗಿ, ನುಡಿದು=ಹೇಳಿ, ರಾಮನುಮಂ=ರಾಮನನ್ನೂ, ಸೌಮಿತ್ರಿಯುಮಂ=ಲಕ್ಷ್ಮಣನನ್ನೂ. [ವಿಚಿತ್ರವಸ್ತ್ರಭೂಷಣಾದಿಗಳಿಂದೆ] ವಿಚಿತ್ರ=ನಾನಾವಿಧವಾದ, ವಸ್ತ್ರ=ಬಟ್ಟೆಗಳೇನು, ಭೂಷಣಾದಿಗಳಿಂದೆ=ಆಭರಣ ಮೊದಲಾದವುಗಳಿಂದ, ಅರ್ಚಿಸಿ=ಪೂಜಿಸಿ, ಜನಕಂ=ಜನಕನು, ಕತಿಪಯಪ್ರಯಾಣಂಗಳಿಂ=ಕೆಲವು ಪಯಣಗಳನ್ನು,ಮಾಡಿಸಿಕಳಿಪುದುಂ=ಕಳುಹಿಸಲಾಗಿ, ರಾಮಲಕ್ಷ್ಮಣರ್, ಅಯೋಧ್ಯೆಯುಂ, ಪೊಕ್ಕು=ಪ್ರವೇಶಿಸಿ, ಸುಖದಿಂ=ಸಂತೋಷದಿಂದ, ಇರ್ಪುದುಂ=ಇರುತ್ತಿರಲು, ಒಂದುದಿವಸಂ=ಒಂದುದಿವಸ

ಕಂ|| ಜನಕಂ ತನುಜೆಯನಿತ್ತಂ |
ಮನುವಂಶ ಲಲಾಮನಪ್ಪ ರಾಮಂಗೆಂಬೀ ||
ಜನವಾರ್ತೆಗೇಳ್ದು ನಾರದ |
ಮುನಿಗಾದುದು ನೋೞ್ಪ ಕೌತುಕಂ ಜಾನಕಿಯಂ ||೮೦||

ಉ|| ಪೆಂಡಿರ ಲೀಲೆಯಂ ಯತಿಗೆನೋೞ್ಪುದು ಪಾೞಿಯೆ ಮುಂಜಿ ಕಚ್ಚಟಂ
ಗುಂಡಿಗೆ ಬೋಳಮಂಡೆ ಮಣಿದಂಡಮಿವೀಕ್ಷಣ ಸೌಖ್ಯ ಹೇತುವೇ||
ಕಂಡೊಡೆ ಬಾಲೆಯರ್ ತಮಗೆ ಪೇಸದೆ ಮಾಣ್ಬರೆ ನಾರದಂ ಮರು |
ಳ್ಗೊಂಡವೊಲಾಗಸಕ್ಕೆ ನೆಗೆದಂ ವೃಥೆಯಲ್ತೆ ಸರಾಗ ಸಂಯಮಂ ||೮೧

---

೮೦. ಟೀ|| ಜನಕಂ=ಜನಕರಾಜನು, (ಮನುವಂಶಲಲಾಮನಪ್ಪ) ಮನುವಂಶ=ಮನುಕುಲಕ್ಕೆ, ಲಲಾಮಂ=ಅಲಂಕಾರಪ್ರಾಯನು, ಅಪ್ಪ=ಆಗಿರುವ, ರಾಮಂಗೆ, ತನುಜೆಯಂ=ಮಗಳನ್ನು, ಇತ್ತಂ=ಕೊಟ್ಟನು, ಎಂಬ (ಈ ಜನವಾರ್ತೆಗೇಳ್ದು) ಈ=ಈ ವಿಧವಾದ, ಜನವಾರ್ತೆಗೇಳ್ದು=ಸುದ್ದಿಯನ್ನು ಕೇಳಿ, ನಾರದಮುನಿಗೆ=ನಾರದಋಷಿಗೆ, ಜಾನಕಿಯಂ=ಸೀತೆಯನ್ನು, ನೋೞ್ಪ=ನೋಡಬೇಕೆಂಬ, ಕೌತುಕಂ=ಆಶೆಯು, ಆದುದು=ಉಂಟಾಯಿತು.

ತಾ|| ಜನಕನು ಸೀತೆಯನ್ನು ರಾಮನಿಗೆ ಕೊಟ್ಟನೆಂಬ ವಾರ್ತೆಯನ್ನು ಕೇಳಿ ನಾರದ ಋಷಿಗೆ ಜಾನಕಿಯನ್ನು ನೋಡಬೇಕೆಂಬ ಚಪಲವುಂಟಾಯಿತು.

೮೧. ಟೀ|| ಪೆಂಡಿರ=ಸ್ತ್ರೀಯರ, ಲೀಲೆಯಂ=ವಿಲಾಸವನ್ನು, ನೋೞ್ಪುದು=ನೋಡುವುದು, ಯತಿಗೆ=ಸನ್ಯಾಸಿಗೆ, ಪಾೞಿಯೆ=ಕ್ರಮವೆ, ಮುಂಜಿ=ನೊದೆಹುಲ್ಲಿನ ಉಡಿದಾರವು, ಕಚ್ಚಟಂ=ಕೌಪೀನವು, ಗುಂಡಿಗೆ=ಕಮಂಡಲವು, ಬೋಳಮಂಡೆ=ಕ್ಷೌರಮಾಡಿಸಿದ ತಲೆಯು, ಮಣಿದಂಡಂ=ಯೋಗದಂಡವು, (ಈಕ್ಷಣಸೌಖ್ಯ) ಈಕ್ಷಣ=ದೃಷ್ಟಿಯ, ಸೌಖ್ಯ=ಸುಖಕ್ಕೆ, ಹೇತುವೇ=ಕಾರಣವೇ, ಬಾಲೆಯರ್=ಸ್ತ್ರೀಯರು, ಕಂಡೊಡೆ=ನೋಡಿದರೆ, ತಮಗೆ=ತಾವು, ಪೇಸದೆ=ಹೇಸಿಕೊಳ್ಳದೆ, ಮಾಣ್ಬರೆ=ಬಿಡುವರೇ, ನಾರದಂ=ನಾರದಮುನಿಯು, ಮರುಳ್ಗೊಂಡವೋಲ್=ಹುಚ್ಚುಹಿಡಿದವನಹಾಗೆ, ಆಗಸಕ್ಕೆ=ಆಕಾಶಕ್ಕೆ, ನೆಗೆದಂ=ಹಾರಿದನು, (ಸರಾಗಸಂಯಮಂ) ಸರಾಗ=ಅನುರಾಗದಿಂದ ಕೂಡಿದ, ಸಂಯಮಂ=ಜಿತೇಂದ್ರಿಯತ್ವವು, ವೃಥೆಯಲ್ತೆ=ನಿಷ್ಫಲವಲ್ಲವೇ ?

ಅಂತು ನಾರದಂ ಗಗನವೀಧಿಯಿಂ ಮಿಥಿಲೆಗೆ ಬಂದು ಕನ್ನೆವಾಡದ ಬಾಗಿಲ್ವಾಡಮಂ ಪುಗುವಾಗಳ್—

ಕಂ|| ಬಿರಿಮುಗುಳಿಂ ತುಱುಗಿದ ತಾ |
ವರೆಗೊಳದೊಳಗಾಡುವಂಚೆ ವೆಣ್ಣನದೇಂ ಚ ||
ಪ್ಪರಿಸಿದಳೊ ಸೀತೆ ಕನ್ಯಾ |
ಪರೀತೆ ವೈಡೂರ್ಯ ರತ್ನಮಯವೇದಿಕೆಯೊಳ್ ||೮೨||

ತಾ|| ಸ್ತ್ರೀಯರ ಬೆಡಗನ್ನು ನೋಡುವದು ಯತಿಗೆ ನ್ಯಾಯವೇ? ಬೋಳುತಲೆ, ಕಮಂಡಲು, ಯೋಗದಂಡ, ಉಡಿದಾರ ಕೋಪೀನ ಮುಂತಾದ ಅವನ ವೇಷವೇನು ನೊಡುವುದಕ್ಕೆ ಸೊಗಸೇ, ಹುಡುಗಿಯರು ಈ ವೇಷವನ್ನು ಕಂಡರೆ ಅಸಹ್ಯಪಡುವದಿಲ್ಲವೇ? ಇದೊಂದನ್ನೂ ಯೋಚಿಸದೆ ನಾರದನು ಹುಚ್ಚುಹುಚ್ಚಾಗಿ ಆಕಾಶಕ್ಕೆ ಹಾರಿ ಹೊರಟೇಬಿಟ್ಟನು, ಅನುರಾಗದಿಂದ ಕೂಡಿದ್ದಮೇಲೆ ಸಂಯಮಿ ಯೆನಿಸುವುದು ವ್ಯರ್ಥವಲ್ಲವೇ. ೮೧

ಗದ್ಯ|| ಅಂತು=ಹಾಗೆ, ನಾರದಂ=ನಾರದನು, ಗಗನವೀಧಿಯಿಂ=ಆಕಾಶಮಾರ್ಗದಿಂದ, ಮಿಥಿಲೆಗೆ=ಜನಕನ ಪಟ್ಟಣಕ್ಕೆ, ಬಂದು, ಕನ್ನೆವಾಡದ=ರಾಣಿವಾಸದ, ಬಾಗಿಲ್ವಾಡಮಂ=ದ್ವಾರವನ್ನು, ಪುಗುವಾಗಳ್=ಪ್ರವೇಶಿಸುವಾಗ.

೮೨. ಟೀ|| ಬಿರಿಮುಗುಳಿಂ=ಕಠಿಣವಾದ ಮೊಗ್ಗುಗಳಿಂದ, ತುಱುಗಿದ=ವ್ಯಾಪ್ತವಾದ, ತಾವರೆಗೊಳದೊಳಗೆ=ಸರೋವರದಲ್ಲಿ, ಆಡುವ=ಕ್ರೀಡಿಸುವ, ಅಂಚೆವೆಣ್ಣಂ=ಹೆಣ್ಣುಹಂಸಪಕ್ಷಿಯನ್ನು, (ಕನ್ಯಾಪರೀತೆ) ಕನ್ಯಾ=ಹುಡಿಗಿಯರಿಂದ, ಪರೀತೆ=ಬಳಸಲ್ಪಟ್ಟವಳಾಗಿರುವ, ಸೀತೆ=ಸೀತೆಯು, (ವೈಡೂರ್ಯರತ್ನಮಯವೇದಿಕೆಯೋಳ್) ವೈಡೂರ್ಯರತ್ನಮಯ=ವೈಡೂರ್ಯರತ್ನಗಳಿಂದ ಮಾಡಲ್ಪಟ್ಟ, ವೇದಿಕೆಯೋಳ್=ಜಗುಲಿಯಲ್ಲಿ, ಏಂಚಪ್ಪರಿಸಿದಳೋ=ಏನು ದಿಗಿಲುಪಡಿಸಿದಳೋ ?

ತಾ|| ನಾರದನು ಆಕಾಶದಿಂದ ಮಿಥಿಲೆಗೆ ಬಂದು ರಾಣಿವಾಸದ ಬಾಗಿಲಿನಲ್ಲಿ ಪ್ರವೇಶಿಸುವಾಗೆ ತನ್ನ ಗೆಳತಿಯರಿಂದೊಡಗೂಡಿದ ಸೀತೆಯು ವೈಡೂರ್ಯದ ಜಗಲಿಯಲ್ಲಿ ನಿಂತು ಗಟ್ಟಿಮೊಗ್ಗುಗಳಿಂದ ತುಂಬಿದ ತಾವರೆ ಕೊಳದಲ್ಲಿ ಆಡುತ್ತಿದ್ದ ಹೆಣ್ಣುಹಂಸೆಯನ್ನು ಅದ್ದರಿಸುತ್ತಿದ್ದಳು. ಹಿಂದೆ ಎಂದೂ ನೋಡಿಲ್ಲದಂ

ಆಗಳದೃಷ್ಟಪೂರ್ವಮಂ ನಾರದನ ವಿಕೃತಾಕಾರಮಂ ಕಂಡು ತರುಣಿ ಹರಿಣಿಯಂತೆ ಬೆರ್ಚಿ ಬಿಱುತೋಡುವುದುಂ—

ಕಂ|| ತತ್ತರುಣಿಯ ಬಱಿವಱಿಯಂ |
ಪತ್ತಿ ಹಿತಾಹಿತ ವಿವೇಕ ವಿಕಲಂ ಪೞಿಯಂ ||
ಪೆತ್ತಾಮುನಿಪಂ ಭ್ರಾಮಕ |
ದತ್ತೆಳಸುವ ಪಚ್ಚೆಗರ್ಬುನಕ್ಕೆಣೆಯಾದಂ ||೮೩||

ನಾರದನೇಂ ತಳೆದನೊ ಕ |
ನ್ಯಾರತ್ನಮನೆಳಸಿ ಪರಿವ ಪರಿಣತಿಯಿಂ ನಿ ||
ಸ್ಸಾರಮನಂ ನೀಲ ಶಲಾ |
ಕಾರತ್ನಮನೆಳಸಿ ಪರಿವ ತೃಣ ಪರಿಣತಿಯಂ ||೮೪||

ತಿದ್ದ ನಾರದನ ಅವಲಕ್ಷಣಾಕಾರವನ್ನು ನೋಡಿ ಅವಳು ಜಿಂಕೆಯಂತೆ ಬೆದರಿ ಬಿದ್ದು ಓಡಲು. ೮೨.

ಗದ್ಯ|| ಆಗಳ್=ಆಗ, ಅದೃಷ್ಟಪೂರ್ವಮಂ=ಪೂರ್ವದಲ್ಲಿ ಎಂದೂ ಕಾಣಲ್ಪಡದೆ ಇರತಕ್ಕ, (ನಾರದನ) ವಿಕೃತಾಕಾರಮಂ=ವಿಕಾರವಾದ ವೇಷವನ್ನು, ಕಂಡು=ನೋಡಿ, ತರುಣಿ=ಸೀತೆಯು, ಹರಿಣಿಯಂತೆ=ಹುಲ್ಲೇಕರುವಿನ ಹಾಗೆ, ಬೆರ್ಚಿ=ಹೆದರಿ, ಬಿಱುತು=ವೇಗವಾಗಿ, ಓಡುವುದುಂ=ಓಡುತ್ತಿರಲು.

೮೩. ಟೀ|| ತತ್ತರುಣಿಯ=ಸೀತೆಯ, ಬಳವಳಿಯಂ=ಅನುಸರಣೆಯನ್ನು, ಪತ್ತಿ=ಹೊಂದಿ, (ಹಿತಾಹಿತವಿವೇಕವಿಕಲಂ) ಹಿತಾಹಿತ=ಒಳ್ಳೇದು ಕೆಟ್ಟವುಗಳ, ವಿವೇಕ=ವಿಚಾರದಿಂದ, ವಿಕಲಂ=ಶೂನ್ಯವಾದಂಥಾ, ಪಳಿಯಂ=ನಿಂದೆಯನ್ನು, ಪೆತ್ತ=ಹೊಂದಿದ, ಆಮುನಿಪಂ=ನಾರದನು, ಭ್ರಾಮಕದತ್ತ=ಸೂಜಿಗಲ್ಲಿನಕಡೆಗೆ, ಎಳಸುವ=ಅಪೇಕ್ಷಿಸುವ, ಪಚ್ಚೆಕಬ್ಬುನಕ್ಕೆ=ಹಸಿಯ ಕಬ್ಬಿಣಕ್ಕೆ, ಎಣೆಯಾದಂ=ಸಾಟಿಯಾದನು.

ತಾ|| ವಿವೇಕಹೀನನೆಂಬ ನಿಂದೆಗೆ ಗುರಿಯಾದ ನಾರದನು ಸೂಜಿಗಲ್ಲಿನ ಹಿಂದೆ ಸರಿವ ಕಬ್ಬಿಣದಂತೆ ಆ ಸೀತೆ ಹೋದಹೋದ ಕಡೆಗೆಲ್ಲಾ ಹೋದನು.

೮೪. ಟೀ|| ನಾರದಂ, ಕನ್ಯಾರತ್ನಮಂ=ಸ್ತ್ರೀ ಶಿರೋಮಣಿಯಾದ ಸೀತೆಯನ್ನು, ಎಳಸಿ=ಅಪೇಕ್ಷಿಸಿ, ಪರಿವ=ಓಡುವ, ಪರಿಣತಿಯಿಂ=ಜಾಣ್ಮೆ

ಅಂತು ಬೞಿವೞಿಯನುೞಿಯದೆೞ್ತರ್ಪುದುಂ—

ಕಂ|| ಧಾತ್ರಿ ಪೞಿವಂತು ತನ್ನಂ |
ಧಾತ್ರೀಜನಮಡಸಿ ಪಿಡಿದು ಪರಿಭವಿಸುವುದುಂ ||
ಮಿತ್ರಂ ಶಲಭಕ್ಕೆನೆ ಮುನಿ |
ನೇತ್ರೇಂದ್ರಿಯ ಲೋಭದಿಂದ ಮಂದಘವಟ್ಟಂ ||೮೫||

ಆಗಳಾ ಕಳಕಳಮಂ ಕೇಳ್ದು—

ಯಿಂದ, ನಿಸ್ಸಾರ=ದುರ್ಬಲವಾದ, ಮನಂ=ಚಿತ್ತವುಳ್ಳವನಾಗಿ, ನೀಲಶಲಾಕಾರತ್ನಮಂ=ಸಲಾಕಿಯ ರೂಪವಾದ ನೀಲರತ್ನವನ್ನು, ಎಳಸಿ=ಬಯಸಿ, ಪರಿವ=ಓಡುವ, (ತೃಣಪರಿಣತಿಯಂ) ತೃಣ=ಹುಲ್ಲಿನ, ಪರಿಣತಿಯಂ=ರೀತಿಯನ್ನು, ಏಂತಳೆದನೊ=ಏನು ಧರಿಸಿದನೋ ?

ತಾ|| ಸೀತೆಯಮೇಲಿನ ಆಶೆಯಿಂದ ಓಡಿ ಓಡಿ ದುರ್ಬಲಚಿತ್ತನಾದ ಆ ನಾರದನು ನೀಲಸಲಾಕೆಯ ರೂಪವಾದ ರತ್ನವನ್ನು ಆಶಿಸಿ ಹಾರಾಡುವ ಹುಲ್ಲಿಗೆಣೆಯಾದನು. ೮೪.

ಗದ್ಯ|| ಅಂತು=ಹಾಗೆ, ಬಳಿಯಂ=ಅನುಸರಣೆಯನ್ನು, ಉಳಿಯದೆ=ಬಿಡದೆ, ಎಳ್ತರ್ಪುದುಂ=ಬರುತ್ತಿರಲು

೮೫. ಟೀ|| ಧಾತ್ರಿ=ಭೂಮಿಯು, ತನ್ನಂ=ತನ್ನನ್ನು, ಪಳಿವಂತು=ದೂಷಿಸುವಹಾಗೆ, ಧಾತ್ರೀಜನಂ=ದಾದಿಯರು, ಅಡಸಿ=ಘಟ್ಟಿಯಾಗಿ, ಪಿಡಿದು=ಹಿಡಿದು, ಪರಿಭವಿಸುವುದುಂ=ಅಪಮಾನಪಡಿಸಲಾಗಿ ಅಂದು=ಆಗ, ಮಿತ್ರಂಗೆ=ಸೂರ್ಯನಿಗೆ, ಶಲಭಮೆನೆ=ಪತಂಗದ ಹುಳದೋಪಾದಿಯಲ್ಲಿ, ಮುನಿ=ನಾರದನು,(ನೇತ್ರೇಂದ್ರಿಯಲೋಭದಿಂದೆ) ನೇತ್ರೇಂದ್ರಿಯ=ಚಕ್ಷುರಿಂದ್ರಿಯದ, ಲೋಭದಿಂದಂ=ಆಶೆಯಿಂದ, ಅಘವಟ್ಟಂ=ದುಃಖಪಟ್ಟನು.

ತಾ|| [ಧಾತ್ರಿ ಎಂಬ ಹೆಸರುಳ್ಳ] ಭೂಲೋಕವೆಲ್ಲಾ ನಿಂದಿಸುತ್ತಿದೆಯೋ ಎಂಬಂತೆ ಧಾತ್ರಿಯರು [ದಾದಿಯರು] ಅವನನ್ನು ಹಿಡಿದು ಮಾನಕಳೆಯಲು ಪತಂಗದ ಹುಳುವು ಸೂರ್ಯನನ್ನು ಮುತ್ತಿ ತಾನೇ ಕಷ್ಟಕ್ಕೀಡಾಗುವಂತೆ ಇವನೂ ನೇತ್ರೇಂದ್ರಿಯ ಚಾಪಲ್ಯದಿಂದ ಆ ದಿನ ಕಷ್ಟಕ್ಕೆ ಗುರಿಯಾದನು.

ಗದ್ಯ|| ಆಗಳ್=ಆಗ, ಆ ಕಳಕಳಮಂ=ಆ ಗದ್ದಲವನ್ನು, ಕೇಳ್ದು=ಕೇಳಿ.

ಕಂ|| ಕಡಿತಲೆಯಂ ತೂಗುತ್ತುಂ |
ಕಡುಗಲಿಗಳ್ಮುಟ್ಟಿ ಬರ್ಪುದುಂ ಭಯರಸದಿಂ ||
ನಡುಗುತ್ತುಂ ನಾರದಮುನಿ
ಕುಡುಮಿಂಚಿನ ಗೊಂಚಲಂತೆ ಗಗನಕ್ಕೊಗೆದಂ ||೮೬||

ಅಂತು ಪೊಳೆದು ಪಾಱಿ—

ಶಾ|| ಪಿಂದಂ ಬೆನ್ನಗುಳ್ದಪ್ಪರೆಂದು ಪೆಱಗಂ ನೋಡುತ್ತುಮೋಡುತ್ತುಮೆ |
ಯ್ತಂದಂ ಗಾಳಿಗೆಱಂಕೆ ಮೂಡಿದವೊಲಾಕಾಶಂಬರಂ ನೀಳ್ದುದಂ ||
ಕುಂದೇಂದು ಪ್ರಭೆಯಂ ಮನಂಗೊಳಿಪುದಂ ವಿದ್ಯಾಧರೀ ಲೋಚನಾ |
ನಂದಸ್ಯಂದಿ ತಟೀ ವಿಲಾಸ ವನಮಂ ಕೈಲಾಸಮಂ ನಾರದಂ ||೮೭||

---

೮೬. ಟೀ|| ಕಡುಗಲಿಗಳ್=ವೀರರು, ಕಡಿತಲೆಯಂ=ಕತ್ತಿಯನ್ನು, ತೂಗುತ್ತುಂ=ಝಳಪಿಸುತ್ತ, ಮುಟ್ಟಿ=ನಾರದನನ್ನು [ಸಮೀಪಿಸಿ] ಉದ್ದೇಶಿಸಿ, ಬರ್ಪುದುಂ=ಬರುತ್ತಿರಲು, ನಾರದಮುನಿ, ಭಯರಸದಿಂ=ದಿಗಿಲಿನಿಂದ, ನಡುಗುತ್ತುಂ=ಕಂಪಿಸುತ್ತ, [ಕುಡುಮಿಂಚಿನಗೊಂಚಲಂತೆ] ವಕ್ರವಾದ ಮಿಂಚುಗಳ ಸಮೂಹದಹಾಗೆ, ಗಗನಕ್ಕೆ=ಆಕಾಶಕ್ಕೆ. ಒಗೆದಂ=ಹಾರಿದನು.

ತಾ|| ಶೂರರಾದ ಭಟರು ಕತ್ತಿಯನ್ನು ಝಳಪಿಸುತ್ತಾ ನಾರದನ ಸಮೀಪಕ್ಕೆ ಬರಲು ನಾರದನು ದಿಗಿಲಿನಿಂದ ಮಿಂಚಿನಂತೆ ವೇಗವಾಗಿ ಆಕಾಶಕ್ಕೆ ಹಾರಿದನು. ೮೬

ಗದ್ಯ|| ಅಂತು=ಹಾಗೆ, ಪೊಳೆದು=ಪ್ರಕಾಶಿಸಿ, ಪಾಱಿ=ಹಾರಿ.

೮೭. ನಾರದಂ, ಪಿಂದಂ=ತನ್ನ ಹಿಂಭಾಗದಲ್ಲಿ, ಬೆನ್ನಗುಳ್ದಪ್ಪರ್=ಬೆನ್ನಟ್ಟಿ ಒರುವರು, ಎಂದು=ಎಂಬದಾಗಿ, ಪೆರಗಂ=ಹಿಂಭಾಗವನ್ನು, ನೋಡುತ್ತುಂ=ನೋಡುತ್ತ, ಓಡುತ್ತುಂ=ಓಡುತ್ತ, ಗಾಳಿಗೆ=ವಾಯುವಿಗೆ, ಎರಂಕೆ=ರಕ್ಕೆಯು, ಮೂಡಿದವೋಲ್=ಹುಟ್ಟಿದಹಾಗೆ, ಆಕಾಶಂಬರಂ=ಅಂತರಿಕ್ಷಪರಿಯಂತರ, ನೀಳ್ದುದಂ=ದೀರ್ಘವಾದಂಥಾ, [ಕುಂದೇಂದುಪ್ರಭೆಯಂ] ಕುಂದ=ಮೊಲ್ಲೆಹುವ್ವೇನು, ಇಂದು=ಚಂದ್ರನೇನು ಇವುಗಳ, ಪ್ರಭೆಯಿಂ=ಕಾಂತಿಯಿಂದ, ಮನಂಗೊಳಿಪುದಂ=ಮನೋಹರವಾದಂಥ. ವಿದ್ಯಾಧರೀ=ದೇವತಾಸ್ತ್ರೀಯರ, ಲೋಚನ=ನೇತ್ರಗಳಿಗೆ, ಆನಂದ=ಸಂತೋಷವ

ಅಂತಾ ನಗಮನೆಯ್ದಿ ಸಾನು ನಂದನ ಲತಾಮಂದಿರದೊಳಗಣಿಂದು ಕಾಂತ ಶಿಲಾತಲದೊಳ್ ವಿಶ್ರಮಿಸಿ ಮನೋವಿಷಾದಮುಮಂ ಗಗನಾಧ್ವ ಖೇದಮುಮಂ ತಳೆದು ತನ್ನೊಳಿಂತೆಂದಂ—

ಕಂ|| ಖೇದಮನೆನಗಿನಿತಂ ಸಂ |
ಪಾದಿಸಿದಾ ಕನ್ನೆ1ಗಳವಿಗಳಿದಳಲಂ ಸಂ ||
ಪಾದಿಸುವೆನೆಂದು ಪರಪೀ |
ಡಾ ದುಶ್ಚರಿತಕ್ಕೆ ನಾರದಂ ಬಗೆದಂದಂ ||೮೮||

ನ್ನು, ಸ್ಯಂದಿ=ಸ್ರವಿಸುವಂಥ, ತಟೀ=ತಪ್ಪಲಲ್ಲಿರುವ, ವಿಲಾಸವನಮಂ=ವಿಲಾಸಾರ್ಥವಾದ ತೋಟವುಳ್ಳ, ಕೈಲಾಸಮಂ=ರಜತಾದ್ರಿಯನ್ನು ಕುರಿತು, ಎಯ್ತಂದಂ=ಬಂದನು.

ತಾ|| ಬೆನ್ನಟ್ಟಿಬರುತ್ತಾರೋ ಏನೋ ಎಂದು ಆಗಾಗ್ಗೆ ಹಿಂದಿರುಗಿ ನೋಡುತ್ತಾ ಗಾಳಿಗೆ ರೆಕ್ಕೆ ಹುಟ್ಟಿದಂತೆ ವೇಗವಾಗಿ ಹೋಗಿ ವಿದ್ಯಾಧರ ಕ್ರೀಡಾರಾಮವೆನಿಸಿ ಮನೋಹರವಾದ ಕೈಲಾಸದ ಪಕ್ಕದ ವನವನ್ನು ಸೇರಿದನು. ೮೭.

ಗದ್ಯ|| ಅಂತು=ಹಾಗೆ, ಆನಗಮಂ=ರಜತಾದ್ರಿಯನ್ನು, ಎಯ್ದಿ=ಸೇರಿ. ಸಾನು=ತಪ್ಪಲಲ್ಲಿರುವ, ನಂದನ=ತೋಟದ, ಲತಾಮಂದಿರದ=ಲತಾಭವನದ. ಒಳಗಣ=ಒಳಗಿರುವ, ಇಂದುಕಾಂತಶಿಲಾತಲದೊಳ್=ಚಂದ್ರಕಾಂತ ಶಿಲಾಪ್ರದೇಶದಲ್ಲಿ, ವಿಶ್ರಮಿಸಿ=ಆಯಾಸಪರಿಹಾರ ಮಾಡಿಕೊಂಡು, ಮನೋವಿಷಾದಮುಮಂ=ಮನಸ್ಸಿನ ದುಃಖವನ್ನೂ, (ಗಗನಾಧ್ವಖೇದಮುಮಂ) ಗಗನಾಧ್ವ=ಆಕಾಶಮಾರ್ಗದಲ್ಲಿ ಉಂಟಾದ, ಖೇದಮುಮಂ=ದುಃಖವನ್ನು, ತಳೆದು=ಧರಿಸಿ, ತನ್ನೊಳ್=ಮನಸ್ಸಿನಲ್ಲಿ, ಇಂತು=ಹೀಗೆ, ಎಂದಂ=ಅಂದುಕೊಂಡನು.

೮೮, ಟೀ|| ನಾರದಂ=ನಾರದನು, ಎನಗೆ=ನನಗೆ, ಇನಿತಂಖೇದಮಂ=ಇಷ್ಟುಮಟ್ಟಿನ ದುಃಖವನ್ನು, ಸಂಪಾದಿಸಿದ=ಉಂಟುಮಾಡಿದ, ಆ ಕನ್ನೆಗೆ=ಆ ಸೀತೆಗೆ. ಅಳವಿಗಳಿದ=ಅಪರಿಮಿತವಾದ, ಅಳಲಂ=ದುಃಖವ

1 ಗಳಲನದವಳಲಂ. ಕ. ಖ. ಗ ಘ.

ಅಂತು ಬಗೆದಂದು—

ಉ|| ನೂಲ ಪ1ವಣ್ಪವಣ್ಗೆಬರೆ ನಿಮ್ನ ಘನೋನ್ನತಮಂ ಪ್ರದೇಶಮಂ |
2ಪೋಲಿಸಿ ನಾರದಂ ವಿಷಮ ಚಿತ್ರ ವಿಚಿತ್ರ ಕಲಾ ವಿಶಾರದಂ ||
ಬಾಲೆಯ ಮುದ್ದುಗೆಯ್ತಮುಮನಾಕೆಯ ಸುಂದರ ರೂಪುಮಂ ಮಹಾ |
ಲೀಲೆಯುಮಂ ದುಕೂಲ ಪಟದೊಳ್ ಬರೆದಂ ಪ್ರತಿಬಿಂಬಮೆಂಬಿನಂ||೮೯

ನ್ನು, ಸಂಪಾದಿಸುವೆಂ=ಉಂಟುಮಾಡುವೆನು, ಎಂದು=ಎಂಬದಾಗಿ, ಪರಪೀಡಾ=ಇತರರಿಗೆ ಬಾಧೆಯನ್ನು ಕೊಡುವದೆಂಬ, ದುಶ್ಚರಿತಕ್ಕೆ=ಕೆಟ್ಟನಡತೆಗೆ, ಬಗೆದಂದಂ=ಮನಸ್ಸುಕೊಟ್ಟನು. ಅಂತು=ಹಾಗೆ, ಬಗೆದಂದು=ಯೋಚಿಸಿ,

ತಾ|| ಹೀಗೆ ಆ ಪರ್ವತ ಪಾರ್ಶ್ವದ ವನವನ್ನು ಸೇರಿ ಲತಾಮಂಟಪದ ಚಂದ್ರಕಾಂತ ಶಿಲೆಯಲ್ಲಿ ವಿಶ್ರಮಿಸುತ್ತಾ ತನ್ನಲ್ಲಿ ತಾನು ನನಗಿಷ್ಟು ಮನೋವ್ಯಥೆಯುಂಟುಮಾಡಿದ ಆ ಕನ್ಯೆಗೆ ಅಪರಿಮಿತ ದುಃಖವುಂಟುಮಾಡುವೆನೆಂದು ಆಲೋಚಿಸಿದನು. ೮೮.

೮೯. ಟೀ|| ನೂಲ=ನೂಲಿನ, ಪವಣ್=ಪರಿಮಾಣವು, ಪವಣ್ಗೆ=ಅಳತೆಗೆ, ಬರೆ=ಬರಲು, ನಿಮ್ನ=ಹಳ್ಳವಾದ, ಘನ=ಮಂದವಾದ, ಉನ್ನತಮಂ=ಎತ್ತರವಾದ, ಪ್ರದೇಶಮಂ=ಸ್ಥಳವನ್ನು, ಪೋಲಿಸಿ=ಸರಿಗಟ್ಟಿ, (ವಿಷಮಚಿತ್ರ ವಿಚಿತ್ರಕಲಾ, ವಿಶಾರದಂ)-ವಿಷಮ=ವಿರುದ್ಧವಾದ, ವಿಚಿತ್ರ=ನಾನಾವಿಧವಾದ, ಚಿತ್ರಕಲಾ=ಚಿತ್ರವಿದ್ಯೆಯಲ್ಲಿ, ವಿಶಾರದಂ=ಜಾಣನಾದ, ನಾರದಂ=ನಾರದಮುನಿಯು, ಬಾಲೆಯ=ಸೀತೆಯ, ಮುದ್ದುಗೆಯ್ತಮುಮಂ=ಪ್ರಿಯವಾದ ಕೆಲಸವನ್ನು, ಆಕೆಯ=ಆ ಸೀತೆಯ, ಸುಂದರರೂಪಮಂ=ಮನೋಹರವಾದಂಥ ಆಕೃತಿಯನ್ನು, ಮಹಾಲೀಲೆಯುಮಂ=ಶ್ರೇಷ್ಠವಾಗಿರತಕ್ಕಂಥಾ ವಿಲಾಸವನ್ನು, ದುಕೂಲಪಟದೊಳ್=ಒಗೆದ (ರೇಶ್ಮೆ) ಬಟ್ಟೆಯಲ್ಲಿ, ಪ್ರತಿಬಿಂಬಮೆಂಬಿನಂ=ಪ್ರತಿಚ್ಛಾಯೆಯೋ ಎಂಬಹಾಗೆ ಬರೆದಂ=ಲಿಖಿಸಿದನು.

ತಾ|| ಚಿತ್ರಕಲಾವಿಶಾರದನಾದ ನಾರದನು ನೂಲೆಳೆಯಷ್ಟು ವ್ಯತ್ಯಾಸ ಬಾರದಹಾಗೆ ಆಕೆಯ ರೂಪ ವಿಲಾಸ, ಕಾರ್ಯಗಳು ಪ್ರಕಟವಾಗುವಂತೆ ದುಕೂಲದಮೇಲೆ ಚಿತ್ರಿಸಿದನು. ೮೯.

1, ವಣ್ಗೆಕಣ್ಗೆ, ಕ. ಗ, ಘ. 2. ಪಾಲಿಸಿ. ಖ. ಗ. ಘ.

ಅಂತು ಪರವಿದ್ಧ ಪರಿಣತಿಯುಮಂ ಮೆಱೆದಾ ಪಟವಮಂ ವಿದ್ಯಾಧರರಾಜಧಾನಿಯಪ್ಪ ರಥನೂಪುರಚಕ್ರವಾಳಪುರದ ಪೊಱವೊಲಿಲ ವಿನೋದ ವನದೊಳಗಣ ಮಣಿಭವನದೊಳಗೆ 1ನೇಱಿ ಪೋಪುದುಮಿತ್ತಲ್—

ಮ|| ಕೆಲಬರ್ ಖೇಚರ ರಾಜಕರ್ ಬಳಸಿಯುಂ ಕೇಳೀವನ ಸ್ಥಾನದೊಳ್ |
ಚಲನ ನ್ಯಾಸ ವಿಲಾಸಮಂ ಮೆಱೆದು ದೇಹಚ್ಛಾಯೆಯುಂ ರತ್ನ ಕುಂ ||
ಡಲ ಭೂಷಾ ರುಚಿಯುಂ ಪಳಂಚೆ ದೆಸೆಯಂ ಸೌಂದರ್ಯದಿಂ ಮನ್ಮಥಂ |
ಗಲಗಿಕ್ಕಲ್ ನಡೆವಂತೆ ಮಂದಗತಿಯಿಂ ಬಂದಂ ಪ್ರಭಾಮಂಡಲಂ || ೯೦

ಗದ್ಯ|| ಅಂತು=ಆ ಪ್ರಕಾರವಾಗಿ, ಪರವಿದ್ಧ ಪರಿಣತಿಯಂ=ಚಿತ್ರದ ಜಾಣ್ಮೆಯನ್ನು, ಮೆರೆದ=ಸ್ಪಷ್ಟೀಕರಿಸಿದ, ಆ ಪಟವಮಂ=ಆ ಚಿತ್ರಪಟವನ್ನು, ವಿದ್ಯಾಧರರಾಜಧಾನಿಯುಪ್ಪ=ವಿದ್ಯಾಧರರಿಗೆ ಮುಖ್ಯ ಪಟ್ಟಣವೆನ್ನಿಸಿಕೊಂಡಿರುವ, ರಥನೂಪುರಚಕ್ರವಾಳಪುರದ=ರಥನೂಪುರಚಕ್ರವಾಳವೆಂಬ ಪಟ್ಟಣದ ಪೊರವೊಳಲ=ಊರಹೊರಗೆ ಇರುವ, ವಿನೋದವನದೊಳಗಣ=ಕ್ರೀಡಾವನದೊಳಗಿರುವ, ಮಣಿಭವನದೊಳಗೆ=ರತ್ನಗೃಹದಲ್ಲಿ, ನೇರಿ=ನೇತುಗಟ್ಟಿ, ಪೋಪುದುಂ=ಪೋಗಲಾಗಿ, ಇತ್ತಂ=ಈಕಡೆ.

ತಾ|| ಆ ಚಿತ್ರವನ್ನು ವಿದ್ಯಾಧರರಾಜಧಾನಿಯಾದ ರಥನೂಪುರ ಚಕ್ರವಾಳಪುರದ ಬಾಹ್ಯೋದ್ಯಾನದ ಮಣಿಭವನದಲ್ಲಿ ತೂಗಹಾಕಿಹೋದನು.

೯೦. ಟೀ|| ಕೆಲಬರ್=ಕೆಲವರಾದ, ಖೇಚರರಾಜಕರ್=ಖೇಚರರಾಜರು, ಕೇಳೀವನಸ್ಥಾನದೊಳ್=ಕ್ರೀಡಾವನಪ್ರದೇಶದಲ್ಲಿ, ಬಳಸಿಯುಂ=ಸುತ್ತಿಕೊಂಡು, ಚಲನ=ಸಂಚಾರದಲ್ಲಿ, ನ್ಯಾಸ=ಹೆಜ್ಜೆ ಇಡುವುದರ, ವಿಲಾಸಮಂ=ಸೊಬಗನ್ನು, ಮೆರೆದು=ಪ್ರಕಾಶಪಡಿಸಿ, ದೇಹಚ್ಛಾಯೆಯುಂ=ಶರೀರದ ನೆರಳು, ರತ್ನ=ರತ್ನಮಯವಾದ, ಕುಂಡಲ=ಕರ್ಣಾಭರಣವೆಂಬ, ಭೂಷಾ=ಆಭರಣದ, ರುಚಿಯುಂ=ಕಾಂತಿಯೂ, ದೆಸೆಯುಂ=ದಿಕ್ಕುಗಳನ್ನು, ಪಳಂಚೆ=ತಗುಲುತ್ತಿರಲು, ಸೌಂದರ್ಯದಿಂ=ಸೌಂದರ್ಯದ ವಿಷಯದಲ್ಲಿ, ಮನ್ಮಥಂಗೆ=ಕಾಮನಿಗೆ, ಅಲಗಿಕ್ಕಲ್=ಆಯುಧದಿಂದ ತಿವಿಯುವುದಕ್ಕೆ, ನಡೆವಂತೆ=ಹೋಗುವಹಾಗೆ, ಪ್ರಭಾಮಂಡಲಂ=ಪ್ರಭಾಮಂಡಲನು, ಮಂದಗತಿಯಿಂ=ಮಂದಗಮನದಿಂದ ಬಂದಂ=ಬಂದನು.

---

1 ನೆರಪಿ, ಖ. ಗ. ಘ,

ಅಂತು ಬರುತ್ತುಮಾನಿಕೇತನದೊಳಿರ್ದ ಚಿತ್ರಪಟಮಂ ನೋಡಿ—

ಕಂ|| ಸಮುದಾಯಶೋಭೆ ವರ್ಣ |
ಕ್ರಮದಿಂ ಪ್ರತ್ಯೇಕಶೋಭೆ ಚೆಲ್ವಿಂ ನಯನ ||
ಕ್ಕಮರ್ದಂ ಮುಂದಿಡೆ ಖೇಚರ |
ನೆವೆಯಿಕ್ಕದೆ ಬಯಸಿನೋಡಿ ಬರೆಪದ ಪೆಣ್ಣಂ ||೯೧||

ಮ|| ಅನುರಾಗಂ ತನಗಾಗೆ ಕಂಡನಿತಱಿಂದಾವಿದ್ಧಮಂ ತನ್ನ ಮು |
ನ್ನಿನ ಜನ್ಮಾಂತರದಲ್ಕಿಱಿಂ ಪೊಸಯಿಪಂತಾಲೋಕಿಸುತ್ತಿರ್ಪುದುಂ ||
ನನೆಯಂಬಿಂದಿಸೆ ನಿರ್ದಯಂ ಮನಸಿಜಂ ಕರ್ಣಾಂತ ವಿಶ್ರಾಂತ ಲೋ |
ಚನಯುಗ್ಮಂ ನಸುಮುಚ್ಚೆ ಮುಚ್ಚೆಗೊಳಗಾಗಿರ್ದಂ ಪ್ರಭಾಮಂಡಲಂ||

ತಾ || ಇಂದುಗತಿ ವಿಯಚ್ಚರನ ಮಗನಾದ ಪ್ರಭಾಮಂಡಲನು ತನ್ನ ಸಮಾನವಯಸ್ಕರಾದ ಕೆಲವು ಖೇಚರ ರಾಜಪುತ್ರರೊಡನೆ ವಿಹಾರಾರ್ಥರಾಗಿ ಠೀವಿಯಿಂದ ಸಂಚರಿಸುತ್ತಾ ಅಲ್ಲಿಗೆ ಬಂದನು. ೯೦.

ಟೀ|| ಅಂತು=ಹಾಗೆ, ಬರುತ್ತುಂ=ಬಂದಕೂಡಲೆ,ಆನಿಕೇತನದೊಳ್=ಆ ಮನೆಯಲ್ಲಿ, ಇರ್ದ=ಇದ್ದ, ಚಿತ್ರಪಟಮಂ=ಚಿತ್ರಪಟವನ್ನು, ನೋಡಿ.

೯೧. ಟೀ|| ಸಮುದಾಯ ಶೋಭೆ=ಒಟ್ಟಿನ ಅಂದವು, ವರ್ಣಕ್ರಮದಿಂ=ಕ್ರಮವಾದ ಬಣ್ಣದಿಂದ, ಪ್ರತ್ಯೇಕಶೋಭೆ=ಬೇರೆಯಾದ ಕಾಂತಿಯು, ಚೆಲ್ವಿಂ=ಸೌಂದರ್ಯದಿಂದ, ನಯನಕ್ಕೆ=ನೇತ್ರಗಳಿಗೆ, ಅಮರ್ದಂ=ಅಮೃತವನ್ನು, ಮುಂದಿಡೆ=ಮುಂದಿರಿಸಿದಂತಾಗಲು, ಖೇಚರಂ=ಪ್ರಭಾಮಂಡಲನು, ಎವೆಯಿಕ್ಕದೆ=ರೆಪ್ಪೆಹುಯ್ಯದೆ, ಬರೆಪದ=ಚಿತ್ರಪಟದಲ್ಲಿ ಬರೆದಿರುವ, ಪೆಣ್ಣಂ=ಸ್ತ್ರೀಯನ್ನು, ನೋಡಿ, ಬಯಸಿ=ಅಪೇಕ್ಷಿಸಿ.

ತಾ|| ಬಂದು ಚಿತ್ರಪಟವನ್ನು ನೋಡಿ ಅದರ ಒಟ್ಟಿನಅಂದ, ಬಣ್ಣ ಹಾಕಿರುವ ಚಾತುರ್ಯ ಇವು ನೇತ್ರಾನಂದಕರವಾಗಿರಲು ಎವೆಯಿಕ್ಕದೆ ಅದನ್ನೇ ನೋಡಿ ಆಶಿಸಿ. ೯೧

೯೨. ಟೀ|| ಪ್ರಭಾಮಂಡಲಂ=ಪ್ರಭಾಮಂಡಲನು, ತನಗೆ, ಅನು

ಕಂ|| ಬರೆದುರಗಲೇಖೆ ಮೂರ್ಛಾ |
ಪರಿಣತಿಯಂ ಮಂತ್ರಶಕ್ತಿಯಿಂ ಪುಟ್ಟಿಪವೋಲ್ ||
ಬರೆಪದ ಕನ್ನೆ ಭವಾಂತರ |
ಪರಿಚೆಯದಿಂ ಮೋಹಮೂರ್ಛೆಯಂ ಪುಟ್ಟಿಸಿದಳ್ ||೯೩||

ರಾಗಂ=ಪ್ರೇಮವು, ಆಗೆ=ಉಂಟಾಗುತ್ತಿರಲು, ಆವಿದ್ಧಮಂ=ಆ ಚಿತ್ರಪಟವನ್ನು, ಕಂಡನಿಕರಿಂದೆ=ನೋಡಿದ ಮಾತ್ರದಿಂದ, ತನ್ನ, ಮುನ್ನಿನ ಜನ್ಮಾಂತರದ=ಹಿಂದಿನ ಜನ್ಮದ, ಅಳ್ಕರಂ=ಪ್ರೇಮವನ್ನು, ಪೊಸಯಿಪಂತೆ=ಹೊಸದು ಮಾಡುವಂತೆ, ಆಲೋಕಿಸುತ್ತಿರ್ಪುದುಂ=ನೋಡುತ್ತಿರುವಲ್ಲಿ, ನಿರ್ದಯಂ=ಕರುಣಾಶೂನ್ಯನಾದಂಥಾ, ಮನಸಿಜಂ=ಮನ್ಮಥನು, ನನೆಯಂಬಿಂದೆ=ಪುಷ್ಪಬಾಣದಿಂದ, ಇಸೆ=ಹೊಡೆಯಲಾಗಿ, ಕರ್ಣಾಂತ=ಕಿವಿಯ ಕೊನೆಯಲ್ಲಿ, ವಿಶ್ರಾಂತ=ವಿಶ್ರಮಿಸಿಕೊಳ್ಳುವಂಥಾ, ಲೋಚನಯುಗ್ಮಂ=ಎರಡು ಕಣ್ಣುಗಳನ್ನು. ಪ್ರಭಾಮಂಡಲಂ=ಪ್ರಭಾಮಂಡಲನು, ನಸು=ಸ್ವಲ್ಪ; ಮುಚ್ಚೆ=ಮುಚ್ಚಿಕೊಳ್ಳಲು, ಮುಚ್ಚೆಗೆ=ಮೂರ್ಛೆಗೆ, ಒಳಗಾಗಿರ್ದಂ=ಅಧೀನನಾಗಿದ್ದನು.

ತಾ|| ಆ ಚಿತ್ರಪಟವನ್ನು ನೋಡಿದ ಮಾತ್ರಕ್ಕೇ ಪೂರ್ವಜನ್ಮದ ನೆನಪಾದಂತೆ ನೋಡುತ್ತಿರುವಲ್ಲಿ ಮನ್ಮಥಾವಸ್ಥೆಗೊಳಗಾಗಿ ಮೋಹ ಮೂರ್ಛೆ ಹೊಂದಿದನು. ೯೨

೯೩. ಟೀ|| ಬರೆದ=ಲಿಖಿಸಿದ, ಉರಗಲೇಖೆ=ಸರ್ಪರೇಖೆಯು, (ಮೂರ್ಛಾಪರಿಣತಿಯಂ) ಮೂರ್ಛಾ=ಪ್ರಜ್ಞಾಶೂನ್ಯತೆಯ, ಪರಿಣತಿಯಂ=ಪರಿಣಾಮವನ್ನು, ಮಂತ್ರಶಕ್ತಿಯಿಂ=ಮಂತ್ರಸಾಮರ್ಥ್ಯದಿಂದ, ಪುಟ್ಟಿಪವೋಲ್=ಹುಟ್ಟಿಸುವಹಾಗೆ, ಬರೆಪದ=ಚಿತ್ರಲೇಖನದ, ಕನ್ನೆ=ಕನ್ನಿಕೆಯು (ಭವಾಂತರಪರಿಚಯದಿಂ) ಭವಾಂತರ=ಜನ್ಮಾಂತರದ, ಪರಿಚಯದಿಂ=ರೂಢಿಯಿಂದ, (ಮೋಹಮೂರ್ಛೆಯಿಂ) ಮೋಹ=ಅನುರಾಗದಿಂದಾದ, ಮೂರ್ಛೆಯಂ=ಪ್ರಜ್ಞಾಶೂನ್ಯತೆಯನ್ನು, ಪುಟ್ಟಿಸಿದಳ್=ಹುಟ್ಟಿಸಿದಳು.

ತಾ|| ಚಿತ್ರಾರ್ಪಿತಸರ್ಪವು ಮಂತ್ರಶಕ್ತಿಯಿಂದ ಮೂರ್ಛಾವಸ್ಥೆಯನ್ನು ಹುಟ್ಟಿಸುವಂತೆ ಚಿತ್ರಾರ್ಪಿತಳಾದ ಕನ್ಯೆಯು ಜನ್ಮಾಂತರದ ನೆನಪುಂಟುಮಾಡಿ ಮೂರ್ಛೆಗೊಳಿಸಿದಳು, ಇದನ್ನು ಆತನ ತಂದೆಯಾದ ಇಂದುಗತಿ ಕೇಳಿ ಅಲ್ಲಿಗೆ ಓಡಿಬಂದು ಉಪಚರಿಸಲು. ೯೩

ಅದನಾತನ ತಂದೆಯಪ್ಪಿಂದುಗತಿ ಕೇಳ್ದು ಸಂಭ್ರಮದಿಂ ಬಂದು ಶೀತಲ ಕ್ರಿಯೆಗಳನೊಡರ್ಚೆ—

ಕಂ|| ಶಿಶಿರೋಪಚಾರದಿಂ ಖಚ |
ರ ಶಿರೋಮಣಿ ನಯನ ಕುವಲಯಂ ಬಿರ್ಚೆ ಮನೋ ||
ಜ ಶಿಲೀಮುಖ ಕೀಲಿತ ಹೃ |
ತ್ಕುಶೇಶಯಂ ತಡೆದು ಮೂರ್ಛೆಯಿಂದೆಳ್ಚತ್ತಂ ||೯೪||

ತದನಂತರಮಾವಿಯಚ್ಚರಾಧಿರಾಜನೀಪಟಮನಿಲ್ಲಿ ಗಾರ್ತಂದರೆಂದು ಮ್ಮಳಿಸುತ್ತುಮಿರೆ ನಾರದನಾಗಳಲ್ಲಿಗೆ ಬಂದುಚಿತಾಸನದೊಳಿರ್ದು ಖಚರಪ ಗಿಂತೆಂದಂ—

ಗದ್ಯ|| ಅದಂ=ಆ ಸಂಗತಿಯನ್ನು, ಆತನ ತಂದೆಯಪ್ಪ=ಆತನ ಜನಕ ನಾದ, ಇಂದುಗತಿಯು, ಕೇಳ್ದು=ಕೇಳಿ, ಸಂಭ್ರಮದಿಂ=ಸಡಗರದಿಂದ, ಬಂದು, ಶೀತಲಕ್ರಿಯೆಗಳಂ=ಶೈತ್ಯೋಪಚಾರಗಳನ್ನು, ಒಡರ್ಚೆ=ಮಾಡಿ.

೯೪. ಟೀ|| ಶಿಶಿರೋಪಚಾರದಿಂ=ಶೈತ್ಯೋಪಚಾರದಿಂದ ಖಚರಶಿ ಶಿರೋಮಣಿ=ಪ್ರಭಾಮಂಡಲನ, ನಯನಕುವಲಯಂ=ಕನ್ನೈದಿಲೆಯೋಪಾದಿ ಯಲ್ಲಿರುವ ಕಣ್ಣು, ಬಿರ್ಚೆ=ತೆರೆಯಲು, (ಮನೋಜಶಿಲೀಮುಖಕೀಲಿತಹೃ ತ್ಕುಶೇಶಯಂ) ಮನೋಜ=ಮನ್ಮಥನ, ಶಿಲೀಮುಖ=ಬಾಣದಿಂದ, ಕೀಲಿ ತ=ನಾಟಿಕೊಳ್ಳಲ್ಪಟ್ಟಂಥಾ, ಹೃತ್ಕುಶೇಶಯಂ=ಹೃದಯಕಮಲ ಉಳ್ಳವನಾ ಗಿ, ತಡೆದು=ಸಾವಕಾಶವಾಗಿ, ಮೂರ್ಛೆಯಿಂದೆ=ಮೂರ್ಛಾವಸ್ಥೆಯಿಂದ, ಎಳ್ಚತ್ತಂ=ಎಚ್ಚತ್ತನು.

ತಾ|| ಶೈತ್ಯೋಪಚಾರದಿಂದ ಅವನು ಕಣ್ದೆರೆದು ಕೆಲವು ಹೊತ್ತಿನಲ್ಲಿ ಮೂರ್ಛೆ ತಿಳಿದೆಚ್ಚತ್ತನು. ಆಮೇಲೆ ಕಾರಣವನ್ನು ತಿಳಿದು ಈ ಪಟವನ್ನು ಇಲ್ಲಿ ಗೆ ತಂದವರಾರು ಎಂದು ವಿಚಾರಿಸುತ್ತಿರುವಾಗ ಆಗ್ಗೆ ನಾರದನು ಬಂದು. ೯೪

ಗದ್ಯ|| ತದನಂತರ=ಆಮೇಲೆ, ಆವಿಯಚ್ಚರಾಧಿರಾಜಂ=ಆ ಪ್ರಭಾ ಮಂಡಲನು, ಈ ಪಟಮಂ=ಈ ಚಿತ್ರಪಟವನ್ನು, ಇಲ್ಲಿಗೆ=ಈ ಸ್ಥಳಕ್ಕೆ, ಆರ್=ಯಾರು, ತಂದರ್=ತೆಗೆದುಕೊಂಡು ಬಂದರು, ಎಂದು=ಎಂಬದಾಗಿ, ಉಮ್ಮಳಿಸುತ್ತುಮಿರೆ=ದುಃಖಪಡುತ್ತಿರಲು, ನಾರದಂ, ಆಗಳ್=ಆಗ, ಅಲ್ಲಿ

ಕಂ|| ಜನಕಂ ಮಿಥಿಲಾಧಿಪನಾ |
ತನ ವನಿತೆ ವಿದೇಹಿಯೆಂಬಳಾಕೆಗೆ ವಿಯದಂ ||
ಗನೆಗೆ ತುಹಿನಾಂಶು ಕಳೆಯೆನೆ |
ಜನಿಯಿಸಿದಳ್ ಸೀತೆಯೆಂಬ ಕನ್ಯಾರತ್ನಂ ||೯೫||

ವ|| ಸುರ ವಿದ್ಯಾಧರ ಕನ್ಯಕಾ ಜನದೊಳಾ ಸ್ತ್ರೀರತ್ನಮಂ ಪೋಲ್ವರೋ |
ರ್ವರುಮಿಲ್ಲೀ ನೃಪರತ್ನವಾಕೆಗೆನುರೂಪಂ ರತ್ನ ಮೇಳಾಪಕಂ||
ದೊರೆವೆತ್ತಿರ್ಕುಮಿದಂ ನಿವೇದಿಸುವೆನೆಂದಾ ಕನ್ಯಕಾ ವಿದ್ಧಮಂ |
ಬರೆದಾನಿಲ್ಲಿಗೆ ತಂದೆನಕ್ಕೆ ನಿಮಗಂ ಭದ್ರಂ ಶುಭಂ ಮಂಗಳಂ ||೯೬||

ಗೆ=ಆ ಸ್ಥಳಕ್ಕೆ, ಬಂದು, [ಉಚಿತಾಸನದೊಳ್] ಉಚಿತ=ತಕ್ಕ, ಆಸನದೊಳ್=ಪೀಠದಲ್ಲಿ, ಇರ್ದು=ಕುಳಿತಿದ್ದು, ಖಚರಪತಿಗೆ=ಪ್ರಭಾಮಂಡಲನಿಗೆ, ಇಂತು=ಹೀಗೆ, ಎಂದಂ=ಹೇಳಿದನು.

೯೫. ಟೀ|| ಮಿಥಿಲಾಧಿಪಂ=ಮಿಥಿಲಾಪಟ್ಟಣಕ್ಕೆ ಒಡೆಯನು ಜನಕಂ=ಜನಕಮಹಾರಾಜನು, ಆತನ, ವನಿತೆ=ಹೆಂಡತಿಯು, ವಿದೇಹಿಯೆಂಬಳ್=ವಿದೇಹಿಯೆಂಬ ಹೆಸರುಳ್ಳವಳು, ವಿಯದಂಗನೆಗೆ=ದೇವತಾಸ್ತ್ರೀಯಾದ, ಆಕೆಗೆ, [ತುಹಿನಾಂಶುಕಳೆ] ತುಹಿನಾಂಶು=ಚಂದ್ರನ, ಕಳೆ=ಅಂಶವು, ಎನೆ=ಎಂಬಹಾಗೆ, ಸೀತೆಯೆಂಬ, ಕನ್ಯಾರತ್ನಂ=ಶ್ರೇಷ್ಠಳಾದ ಮಗಳು. ಜನಿಯಿಸಿದಳ್=ಹುಟ್ಟಿದಳು.

ತಾ|| ಮಿಥಿಲೆಗೊಡೆಯನು ಜನಕನು, ಅವನ ಪತ್ನಿಯಾದ ವಿದೇಹಿಯು ಗರ್ಭದಲ್ಲಿ ಚಂದ್ರಸಮಾನಳಾದ ಈ ಕನ್ಯೆ ಹುಟ್ಟಿದಳು. ೯೫

೯೬. ಟೀ|| [ಸುರವಿದ್ಯಾಧರಕನ್ಯಕಾಜನದೊಳ್] ಸುರ=ದೇವತೆಗಳೊಳಗೆ, ವಿದ್ಯಾಧರಕನ್ಯಕಾ=ವಿದ್ಯಾಧರಜಾತಿಯ ಸ್ತ್ರೀಯರೆಂಬ, ಜನದೊಳ್=ಜನದಲ್ಲಿ, ಆ ಸ್ತ್ರೀರತ್ನಮಂ=ಆ ಶ್ರೇಷ್ಠಳಾಗಿರತಕ್ಕ ಸೀತೆಯನ್ನು, ಹೋಲ್ವರ್=ಹೋಲುವವರು, [ಆಕೆಗೆ ಸಮಾನರಾದವರು] ಓರ್ವರುಮಿಲ್ಲ=ಒಬ್ಬರೂ ಇಲ್ಲ, ಈ ನೃಪರತ್ನಂ=ಈ ರಾಜರತ್ನವು, ಆಕೆಗೆ=ಸೀತೆಗೆ. ಅನುರೂಪಂ=ತಕ್ಕವನು, ರತ್ನಮೇಳಾಪಕಂ=ರತ್ನಗಳ ಹೊಂದಿಕೆಯು, ದೊರೆವೆತ್ತಿರ್ಕುಂ=ಪ್ರಸಿದ್ಧವಾಗಿದೆ, ಇದಂ=ಈ ಕನ್ಯಾರತ್ನವನ್ನು, ನಿವೇದಿ

ಎಂದು ನಾರದಂ ಪರಸಿ ಪೋಪುದುಮಿತ್ತಲ್—

ಉ|| ಏನುಮನಾರೊಳಂ ನುಡಿಯದುಮ್ಮಳದಿಂ ವಿರಹಾಕುಲಂ ಮನೋ |
ಗ್ಲಾನಿಯನೊಂದಿ ಪೆಣ್ಣಬರೆಪಂ ಬರೆದಂತಿರೆ ಚಿತ್ತಭಿತ್ತಿಯೊಳ್ ||
ಜಾನಿಸಿ ಚಿತ್ತಮಂ ಪುದಿಯೆ ಮೋಹತಮಂ ಬೆಮರುಣ್ಮೆ ಪೊಣ್ಮೆ ಲ |
ಜ್ಜಾನಮಿತಾನನಂ ತಳೆದನಾ ಖಚರಾಗ್ರಣಿ ಮೌನಮುದ್ರೆಯಂ ||೯೭||

ಸುವೆಂ=ಸಮರ್ಪಿಸುವೆನು, ಎಂದು=ಎಂಬದಾಗಿ, ಕನ್ಯಕಾವಿದ್ಧಮಂ=ಸೀತಾ ಚಿತ್ರಪಟವನ್ನು, ಬರೆದು, ಆಂ=ನಾನು, ಇಲ್ಲಿಗೆ=ಈ ಸ್ಥಳಕ್ಕೆ, ತಂದೆಂ=ತೆಗೆದುಕೊಂಡು ಬಂದೆನು, ನಿಮಗಂ=ನಿಮ್ಮೆಲ್ಲರಿಗೂ,ಭದ್ರಂಶುಭಂಮಂಗಳಂ=ಅತ್ಯುತ್ತಮವಾದ ಮಂಗಳವು, ಅಕ್ಕೆ=ಆಗಲಿ

ತಾ|| ದೇವತೆಗಳು ವಿದ್ಯಾಧರರು ಈ ಜನಾಂಗದಲ್ಲಿ ಆ ಕನ್ಯೆಯಂಥಾವರು ಒಬ್ಬರಾದರೂ ಇಲ್ಲ. ನಿನ್ನ ಮಗನು ಆಕೆಗನುರೂಪನು ಎಂಬುದನ್ನು ಸೂಚಿಸುವುದಕ್ಕಾಗಿ ನಾನೇ ಇಲ್ಲಿಗೆ ತಂದಿಟ್ಟೆನು. ನಿಮಗೆಲ್ಲಾ ಮಂಗಳವಾಗಲಿ ಎಂದು ಆಶೀರ್ವದಿಸಿ ಹೊರಟುಹೋದನು. ೯೬

ಗದ್ಯ|| ಎಂದು=ಎಂಬದಾಗಿ, ನಾರದಂ, ಪೆರಸಿ=ಆಶೀರ್ವದಿಸಿ, ಪೋಪುದುಂ=ಹೋಗಲಾಗಿ, ಇತ್ತಲ್=ಈ ಕಡೆ.

೯೭. ಟೀ|| ಆರೊಳಂ=ಯಾರಸಂಗಡಲೂ, ಏನುಮಂ=ಯಾವಸಂಗತಿಯನ್ನು, ನುಡಿಯದೆ=ಹೇಳದೆ, ಉಮ್ಮಳದಿಂ=ವ್ಯಸನದಿಂದ [ವಿರಹಾಕುಲಂ] ವಿರಹ=ವಿಯೋಗದಿಂದ, ಆಕುಲಂ=ದುಃಖಿತನಾಗಿ, ಮನೋಗ್ಲಾನಿಯಂ=ಮನಸ್ಸಿನ ದುಃಖವನ್ನು, ಒಂದಿ=ಪಡೆದು, ಚಿತ್ತಭಿತ್ತಿಯೊಳ್=ಮನಸ್ಸೆಂಬ ಗೋಡೆಯಲ್ಲಿ, ಪೆಣ್ಣಬರೆಪಂ=ಸ್ತ್ರೀಚಿತ್ರವನ್ನು, ಬರೆದಂತೆ=ಲಿಖಿಸಿದ ಹಾಗೆ, ಇರೆ=ಇರಲು, ಜಾನಿಸಿ=ಧ್ಯಾನಮಾಡಿ, ಮೋಹತಮಂ=ಅಜ್ಞಾನವೆಂಬ ಕತ್ತಲೆಯು, ಚಿತ್ತಮಂ=ಮನಸ್ಸನ್ನು, ಪುದಿಯೆ=ವ್ಯಾಪಿಸುತ್ತಿರಲು, ಬೆಮರ್=ಸ್ವೇದೋದಕವು, ಉಣ್ಮೆ=ಹುಟ್ಟಿ, ಪೊಣ್ಮೆ=ಹೊರಗೆ ಕಾಣುತ್ತಿರಲು. ಆ ಖಚರಾಗ್ರಣಿ=ಪ್ರಭಾಮಂಡಲನು. [ಲಜ್ಜಾನಮಿತಾನನಂ] ಲಜ್ಜಾ=ನಾಚಿಕೆಯಿಂದ, ನಮಿತ=ಬಗ್ಗಿಸಲ್ಪಟ್ಟ, ಆನನಂ=ಮುಖವುಳ್ಳವನಾಗಿ, ಮೌನಮುದ್ರೆಯಂ=ಸುಮ್ಮನಿರೋಣವೆಂಬ ಚಿಹ್ನೆಯನ್ನು, ತಳೆದಂ=ಧರಿಸಿದನು.

ಅಂತು ದಿಙ್ಮೂಢನಾದ ಮಗನ ಮೊಗಮನಿಂದುಗತಿ ನೋಡಿ—

ಉ|| ಮಾನವ ಕನ್ಯೆಯಂ ಬಯಸಿ ನಂದನ ನಿನ್ನ ಮನಕ್ಕೆ ಚಿಂತೆಯಂ |
ಮ್ಲಾನತೆಯಂ ಮುಖಕ್ಕೆ ತರವೇೞ್ಪುದೆ ಕೊಳ್ಕೊಡೆಗೞ್ತಿವಟ್ಟೆನಂ ||
ದಾನೆರೆದಟ್ಟೆ ನಿನ್ನ ದೊರೆಯಂ ವರನಂ ಪಡೆದಿರ್ಮೆ ಕೇಳ್ವೆನೇ |
ಜಾನಕಿಯಂ ವಿವಾಹವಿಧಿಯಿಂ ಜನಕಂ ನಿನಗೀಯದಿರ್ಪನೇ ||೯೮||

ತಾ|| ಈಕಡೆ ಪ್ರಭಾಮಂಡಲನು ಯಾರೊಡನೆಯೂ ಮಾತೂ ಬೇಕಿಲ್ಲದೆ ಮನಸ್ಸಿನಲ್ಲಿ ಸೀತಾಪ್ರತಿಕೃತಿಯನ್ನೇ ಧ್ಯಾನಿಸುತ್ತಾ ನಾಚಿಕೆಯಿಂದ ತಲೆಬಗ್ಗಿ ಮೌನವಾಗಿದ್ದನು. ಹೀಗೆ ಸೀತೆಯಮೇಲಿನ ಮೋಹದಿಂದ ಮಗನು ದಿಗ್ಭ್ರಮೆ ಹೊಂದಿರುವುದನ್ನು ಇಂದುಗತಿ ತಿಳಿದು. ೯೭

ಗದ್ಯ|| ಅಂತು=ಹಾಗೆ, ದಿಙ್ಮೂಢನಾದ=ದಿಕ್ಕುಗಳಪರಿಜ್ಞಾನತಪ್ಪಿದ, ಮಗನ=ಪ್ರಭಾಮಂಡಲನ, ಮೊಗಮಂ=ಮುಖವನ್ನು, ಇಂದುಗತಿ, ನೋಡಿ,

೯೮. ಟೀ|| ನಂದನ=ಮಗನೇ, ಮಾನವಕನ್ಯೆಯಂ=ಮನುಷ್ಯಸ್ತ್ರೀಯನ್ನು, ಬಯಸಿ=ಅಪೇಕ್ಷಿಸಿ, ನಿನ್ನ, ಮನಕ್ಕೆ=ಮನಸ್ಸಿಗೆ, ಚಿಂತೆಯಂ=ವ್ಯಸನವನ್ನು, ಮುಖಕ್ಕೆ, ಮ್ಲಾನತೆಯಂ=ಬಳಲಿರುವಿಕೆಯನ್ನು, ತರವೇಳ್ಪುದೆ=ಉಂಟುಮಾಡಿಕೊಳ್ಳಬಹುದೆ, ಕೊಳ್ಕೊಡೆಗೆ=ಸಂಬಂಧಕ್ಕೆ, ಅೞ್ತಿವಟ್ಟಂ=ಸಂತೋಷಿಸಿದೆನು, ಎಂದು=ಎಂಬದಾಗಿ, ಆಂ=ನಾನು, ಎರೆದು=ಪ್ರಾರ್ಥಿಸಿ, ಅಟ್ಟೆ=ದೂತರನ್ನು ಕಳುಹಿಸಲು, ನಿನ್ನದೊರೆಯಂ=ನಿನ್ನಂಥಾ, ವರನಂ=ಗಂಡನ್ನು, ಪಡೆದು=ಹೊಂದಿ, ಇರ್ಮೆ=ಎರಡುಸಾರಿ, ಜಾನಕಿಯಂ=ಸೀತೆಯನ್ನು, ಕೇಳ್ವೆನೇ=ನನ್ನ ಮಗನಿಗೆ ಕೊಡಬೇಕೆಂದು ಕೇಳಲೇ, ಜನಕಂ=ಜನಕರಾಜನು, ವಿವಾಹವಿಧಿಯಿಂ=ಮದುವೆಯ ವಿಧಾನದಲ್ಲಿ ಹೇಳಿರುವ ಪ್ರಕಾರವಾಗಿ, ನಿನಗೆ, ಈಯದಿರ್ಪನೇ=ಕೊಡದೇ ಇರುವನೇ ?

ತಾ|| ಮನುಷ್ಯಮಾತ್ರ ಸ್ತ್ರೀಯನ್ನು ನೆನಸಿ ಇಷ್ಟುಚಿಂತೆಗೊಳ್ಳುವುದೇತಕ್ಕೆ? ಬಾಂಧವ್ಯಕ್ಕೆ ಸಮ್ಮತಿಸಿ ದೂತರನ್ನು ಕಳುಹಿಸಿದರೆ ಸಾಲದೆ? ನಿನ್ನಂಥಾ ವರನು ಇರುತ್ತಿರುವಲ್ಲಿ ಜನಕನು ಕೊಡದೆ ಇದ್ದಾನೇ ? ಸುಲಭವಾಗಿ ಮದುವೆ ಮಾಡಿಸುತ್ತೇನೆ ಎಂದು ಹೇಳಿ ಪ್ರಭಾಮಂಡಲನನ್ನು ಸಮಾಧಾನಗೊಳಿಸಿದನು. ಇದಕ್ಕೆ ಉಪಾಯವೇನು ಎಂದು ಆಲೋಚಿಸುತ್ತಿರುವಲ್ಲಿ ವೀರ ವಿಯಚ್ಚರನೊಬ್ಬನು ಬಂದು. ೯೮

ಎಂದು ನಿಜನಂದನನ ಮನೋವಿಷಾದಮಂ ಕಳೆದು ನಮಗಿಲ್ಲಿಗೆ ತಕ್ಕು ದಾವುದೆನೆ ವಿಯಚ್ಚರ ವೀರನೊರ್ವನಿಂತೆಂದಂ—

ಕಂ|| ಇದು ಮಂತ್ರಾಲೋಚಂಬರ |
ಮುದಾತ್ತ[1]ಮಣಮಲ್ತು ಮಿಥಿಳೆಯಂ ಜನಕನುಮಂ ||
ಬೆದಱಿಸಿ ಜಾನಕಿಯಂ ತ |
ರ್ಪುದು ಮಾಳ್ಪುದು ದೇವ ಸುತವಿವಾಹೋತ್ಸವಮಂ ||೯೯||

ಎನೆ ವಿಯಚ್ಚರೇಂದ್ರನಿಂತೆಂದಂ—

ಗದ್ಯ|| ಎಂದು=ಎಂಬದಾಗಿ, ನಿಜನಂದನನ=ತನ್ನ ಮಗನ, ಮನೋವಿಷಾದಮಂ=ಹೃದಯದ ದುಃಖವನ್ನು, ಕಳೆದು=ಹೋಗಲಾಡಿಸಿ, ನಮಗೆ, ಇಲ್ಲಿಗೆ=ಈ ವಿಷಯದಲ್ಲಿ, ತಕ್ಕುದು=ಯೋಗ್ಯವಾದದ್ದು, ಆವುದು=ಯಾವುದು, ಎನೆ=ಎಂದು ಹೇಳಲಾಗಿ, ವಿಯಚ್ಚರವೀರನೊರ್ವಂ=ಒಬ್ಬಶೂರನಾದ ವಿದ್ಯಾಧರನು, ಇತೆಂದಂ=ಹೀಗೆ ಹೇಳಿದನು.

೯೯. ಟೀ|| ಇದು=ಈ ಸಂಗತಿಯು, ಮಂತ್ರಾಲೋಚಂಬರಂ=ಮಂತ್ರಾಲೋಚನೆಯಪರ್ಯಂತರ ಬರುವಂಥಾ, ಅಣಂ=ಸ್ವಲ್ಪವಾದರೂ, ಉದಾತ್ತಂ=ಶ್ರೇಷ್ಠವಾದದ್ದು, ಅಲ್ತು=ಅಲ್ಲವು, ಮಿಥಿಳೆಯಂ=ಮಿಥಿಲಾಪಟ್ಟಣವನ್ನು, ಜನಕನುಮಂ=ಜನಕರಾಜನನ್ನು, ಬೆದರಿಸಿ=ಭಯಪಡಿಸಿ, ಜಾನಕಿಯಂ=ಸೀತೆಯನ್ನು, ತರ್ಪುದು=ತರುವುದು, ದೇವ=ಸ್ವಾಮಿಯೇ, ಸುತ ವಿವಾಹೋತ್ಸವಮಂ=ಮಗನ ಮದುವೆಯನ್ನು, ಮಾಳ್ಪುದು=ಮಾಡಬೇಕು.

ತಾ|| ಇದು ಮಂತ್ರಾಲೋಚನಾರ್ಹವಾದ ಗಹನ ವಿಷಯವೇ? ಮಿಥಿಲೆಗೆ ಹೋಗಿ ಜನಕನನ್ನು ಬೆದರಿಸಿ ಸೀತೆಯನ್ನು ಎತ್ತಿಕೊಂಡು ಬಂದು ಮಗನಿಗೆ ಮದುವೆ ಮಾಡಿಬಿಡಬೇಕು ಎಂದು ಹೇಳಿದನು, ೯೯

ಗದ್ಯ|| ಎನೆ=ಹೇಳಲಾಗಿ, ವಿಯಚ್ಚರೇಂದ್ರಂ=ಇಂದುಗತಿಯು, ಇಂತೆಂದಂ=ಹೀಗೆ ಹೇಳಿದನು.

1. ಗುಣ. ಚ.

ಕಂ|| ಈಯೆ ತರವೇೞ್ಪುದಬಲೆಯ |
ನೀಯದೆ ತಂದಂದು ತನಗದತ್ತಾದಾನಂ ||
ಸ್ತೇಯಮದಱಿಂದಮದನ |
ಶ್ರೇಯಮನಾಚರಿಸದಲ್ತೆ ಖೇಚರವಂಶಂ ||೧೦೦||

ಸಮನೆನಿಪನೊಡನೆ ಕೊಳ್ಕೊಡೆ |
ಸಮನಿಸೆ ಸಮದತ್ತಿ ಭೂಚರರ್ ಖೇಚರರೊಳ್ ||
ಸಮನಲ್ಲರ್ಸುತಮೋಹದಿ |
ನೆಮಗಮದಶ್ರೇಯಮಾದೊಡಂ ಕರಣೀಯಂ ||೧೦೧||

---

೧೦೦. ಟೀ|| ಈಯೆ=ಹೆಣ್ಣು ಕೊಟ್ಟರೆ, ಅಬಲೆಯಂ=ಸೀತೆಯನ್ನು, ತರವೇಳ್ಪುದು=ತರಬಹುದು, ಈಯದೆ=ಹೆಣ್ಣು ಕೊಡದೆ,ತಂದದು=ತಂದಾಗ, ತನಗೆ, ಅದತ್ತಾದಾನಂ=ಕೊಡದೆ ತಂದ ದಾನವು, ಸ್ತೇಯಂ=ಕಳ್ಳತನವು, ಅದರಿಂದ=ಆ ಕಾರಣದಿಂದ, ಖೇಚರವಂಶಂ=ವಿದ್ಯಾಧರಕುಲವು, ಅಶ್ರೇಯಮಂ=ಅಮಂಗಳವಾದ, ಅದಂ=ಅದನ್ನು, ಆಚರಿಸದಲ್ತೆ=ಮಾಡುವುದಿಲ್ಲವಷ್ಟೆ.

ತಾ|| ಅದಕ್ಕೆ ಇಂದುಗತಿಯು ಹೆಣ್ಣು ಕೊಟ್ಟರೆ ತರಬಹುದು, ಕೊಡದೆ ತಂದರೆ ಅದು ಅದತ್ತಾದಾನವೆನಿಸುವದು, ಕಳ್ಳತನಕ್ಕೆ ಸಮ; ಇದು ಖೇಚರ ವಂಶಕ್ಕೇ ಶ್ರೇಯಸ್ಕರವಲ್ಲ. ೧೦೦

೧೦೧. ಟೀ|| ಸಮನೆನಿಪನೊಡನೆ=ಸಮಾನನಾದವನು ಎಂದೆನಿಸಿಕೊಂಡಿರುವವರ ಸಂಗಡ, ಕೊಳ್ಕೊಡೆ=ಬಂಧುತ್ವವು, ಸಮದತ್ತಿ=ಸಮತೂಕವಾಗಿ, ಸಮನಿಸೆ=ಪ್ರಾಪ್ತಿಸಲು, ಭೂಚರರ್=ಭೂಮಿಯಲ್ಲಿ ಸಂಚಾರ ಮಾಡತಕ್ಕವರು, ಖೇಚರರೊಳ್=ಆಕಾಶದಲ್ಲಿ ಸಂಚರಿಸುವವರ ಜೊತೆಯಲ್ಲಿ, ಸಮನಲ್ಲರ್=ಸಮಾನರಲ್ಲವಾದರೂ; ಸುತಮೋಹದಿಂ=ಪುತ್ರಮೋಹದಿಂದ, ಅದು=ಆ ಸಂಬಂಧವು, ಎಮಗಂ=ನಮಗೂ, ಅಶ್ರೇಯಮಾದೊಡಂ=ಶ್ರೇಯಸ್ಸಲ್ಲವಾದರೂ, ಕರಣೀಯಂ=ಮಾಡುವುದಕ್ಕೆ ಯೋಗ್ಯವಾದುದು.

ತಾ|| ಸರಿಸಮರಾದ ವಂಶದವರಲ್ಲಿ ಸಮತೂಕವಾದ ಬಾಂಧವ್ಯವು ಸರಿ. ಖೇಚರರಿಗೆ ಭೂಚರರೊಡನೆ ಸಂಬಂಧವನ್ನು ಬೆಳೆಯಿಸುವದು ಸಮನಲ್ಲದಿದ್ದರೂ ಪುತ್ರವ್ಯಾಮೋಹದಿಂದ ಅದು ನಮಗೆ ಶ್ರೇಯಸ್ಕರವಲ್ಲದಿದ್ದರೂ ಅದನ್ನು ಸರಿಯಾದ ರೀತಿಯಲ್ಲಿ ಬೆಳೆಯಿಸತಕ್ಕುದ್ದೇ ಸರಿ ಎಂದು ಹೇಳಿದನು. ೧೦೧

ಎಂಬುದುಮಿಂದುಗತಿ ವಿಯಚ್ಚರೇಂದ್ರಂಗೆ ಕುಲಮಹತ್ತರಂ ಚಂದ್ರವರ್ಧನ ನಿಂತೆಂದಂ—

ಕಂ|| ಎರೆದಟ್ಟಿದೊಡೀಯರ್ ಭೂ |
ಚರರೆಂತುಂ ನೀಚರದಱಿನಿಲ್ಲಿಗುಪಾಯಾಂ ||
ತರದಿಂ ತಂದೆರೆಯೆ ಭಯಾ |
ತುರಂ ನಿಜಾತ್ಮಜೆಯನೀವೊಡೀವಂ ಜನಕಂ ||೧೦೨||

ಎಂಬುದುಮಾಬೆಸನಂ ಚಪಲವೇಗನೆಂಬ ವಿದ್ಯಾಧರಂ ಬೇಡಿಕೊಂಡು—

ಗದ್ಯ|| ಎಂಬುದುಂ=ಎಂಬದಾಗಿ ಹೇಳಲು, ಇಂದುಗತಿ, ಈ ವಿಯಚ್ಚರೇಂದ್ರಂಗೆ=ಖೇಚರಾಧಿಪತಿಗೆ, ಕುಲಮಹತ್ತರಂ=ಕುಲದಲ್ಲಿ ಅತ್ಯುತ್ತಮನಾದಂಥಾ, ಚಂದ್ರವರ್ಧನಂ, ಇಂತು=ಹೀಗೆ, ಎಂದಂ=ಹೇಳಿದನು.

೧೦೨. ಎರೆದು=ಪ್ರಾರ್ಥಿಸಿ, ಅಟ್ಟಿದೊಡೆ=ಹೇಳಿಕಳುಹಿಸಿದರೆ, ನೀಚರ್=ಅಧಮರಾದ, ಭೂಚರರ್=ಭೂಚರರು, ಎಂತುಂ=ಹೇಗೂ, ಈಯರ್=ಕೊಡರು, ಅದರಿಂ=ಅದಕಾರಣದಿಂದ, ಉಪಾಯಾಂತರದಿಂ=ಬೇರೆ ಉಪಾಯದಿಂದ, ಇಲ್ಲಿಗೆ, ತಂದು=ತೆಗೆದುಕೊಂಡುಬಂದು, ಎರೆಯೆ=ಪ್ರಾರ್ಥಿಸಲಾಗಿ, ಭಯಾತುರಂ=ಭಯಗ್ರಸ್ತನಾದ, ಜನಕಂ=ಜನಕರಾಜನು, ನಿಜಾತ್ಮಜೆಯಂ=ತನ್ನ ಮಗಳನ್ನು, ಈವೊಡೆ=ಕೊಡಬೇಕಾದರೆ, ಈವಂ=ಕೊಡುವನು.

ತಾ|| ಇದನ್ನು ಕೇಳಿ ಖೇಚರ ಕುಲೀನನಾದ ಚಂದ್ರವರ್ಧನನು ಅಧಮರಾದ ಭೂಚರರು ಪ್ರಾರ್ಥಿಸಿದರೆ ಹೇಗೂ ಕೊಡುವದಿಲ್ಲ ಆದ್ದರಿಂದ ಯುಕ್ತಿಯಿಂದ ಮೊದಲು ಸಾಗಿಸಿ ತಂದು ಆಮೇಲೆ ಕೇಳಿದರೆ ಭಯಪಟ್ಟುಕೊಂಡು ಆಗ ಕೊಡಬೇಕಾದರೆ ಕೊಡುವನು, ಎನ್ನಲು ಚಪಲವೇಗನೆಂಬ ವಿದ್ಯಾಧರನು ಅಪ್ಪಣೆಪಡೆದು. ೧೦೨

ಗದ್ಯ|| ಎಂಬುದುಂ=ಎಂದುಹೇಳಲು, ಆ ಬೆಸನಂ=ಆ ಆಜ್ಞೆಯನ್ನು, ಚಪಲವೇಗನೆಂಬ ವಿದ್ಯಾಧರಂ, ಬೇಡಿಕೊಂಡು=ಕೇಳಿಕೊಂಡು.

ಕಂ|| ಗಗನೇಚರ ತೇಜಶ್ಶಿಖಿ |
ಪಗೆವರ ಭಾಸುರ ಯಶೋ ವಿತಾನಮನುರಿಪಲ್ ||
ನೆಗೆದುದೆನೆ ಚಪಲವೇಗಂ |
ನೆಗೆದಂ ಗಗನಕ್ಕೆ ವಿಜಿತ ಚಪಲಾವೇಗಂ ||೧೦೩||

ಭೋಂಕನೆ ಬಡಗಣ ದೆಸೆಯಿಂ |
ತೆಂಕಣದೆಸೆಗಾಗಿ ನಡೆದುದುಳ್ಕಮಿದೆಂಬಾ ||
ಶಂಕೆಯನೊಡರಿಸಿ ಮಿಥಿಲೆಗ |
ಶಂಕಿತನಾ ಖಚರನಿಳಿದನಂಬರ ತಳದಿಂ || ೧೦೪ ||

---

೧೦೩. ಟೀ|| ಗಗನೇಚರ=ಖೇಚರರ, ತೇಜಃ=ಶೌರ್ಯವೆಂಬ, ಶಿಖಿ=ಅಗ್ನಿಯು, ಪಗೆವರ=ಶತ್ರುಗಳ, (ಭಾಸುರಯಶೋವಿತಾನಮಂ) ಭಾಸುರ=ಪ್ರಕಾಶಮಾನವಾದ, ಯಶಃ=ಕೀರ್ತಿಯ, ವಿತಾನಮಂ=ಸಮೂಹವನ್ನು, ಉರಿಪಲ್=ಸುಡುವುದಕ್ಕೋಸ್ಕರ, ನೆಗೆದುದು=ಹಾರಿತೋ, ಎನೆ=ಎಂಬಂತೆ; (ವಿಜಿತಚಪಲಾವೇಗಂ) ವಿಜಿತ=ಜಯಿಸಲ್ಪಟ್ಟ, ಚಪಲಾವೇಗಂ=ಮಿಂಚಿನ ವೇಗವುಳ್ಳ, ಚಪಲವೇಗಂ=ಚಪಲವೇಗನು, ಗಗನಕ್ಕೆ=ಆಕಾಶಕ್ಕೆ, ನೆಗೆದಂ=ಹಾರಿದನು.

ತಾ|| ಖೇಚರರ ಶೌರ್ಯಾಗ್ನಿಯು ಶತ್ರುಗಳ ಯಶಸ್ಸಮೂಹವನ್ನು ಸುಟ್ಟುಹಾಕುವದಕ್ಕಾಗಿ ನೆಗೆಯಿತು ಎಂಬಂತೆ ಚಪಲವೇಗನು ಮಿಂಚಿನಂತ ವೇಗವಾಗಿ ಆಕಾಶಕ್ಕೆ ನೆಗೆದದು. ೧೦೩

೧೦೪. ಟೀ|| ಭೋಂಕನೆ=ಜಾಗ್ರತೆಯಾಗಿ, ಬಡಗಣದೆಸೆಯಿಂ=ಉತ್ತರದಿಕ್ಕಿನಿಂದ, ತೆಂಕಣದೆಸೆಗಾಗಿ=ದಕ್ಷಿಣದಿಕ್ಕಿಗಾಗಿ, ವುಳ್ಕಂ=ನಕ್ಷತ್ರಪಾತವು, ನಡೆದುದು=ಹೋಯಿತು, ಎಂಬ, ಆ ಶಂಕೆಯಂ=ಊಹೆಯನ್ನು, ಒಡರಿಸಿ=ಉಂಟುಮಾಡಿ, ಅಶಂಕಿತಂ=ಭಯರಹಿತನಾದಂಥಾ, ಆಖಚರಂ=ಚಪಲವೇಗನು, ಅಂಬರತಳದಿಂ=ಆಕಾಶದಿಂದ, ಮಿಥಿಲೆಗೆ, ಇಳಿದಂ=ಬಂದನು

ತಾ|| ಉತ್ತರದಿಂದ ದಕ್ಷಿಣಕ್ಕೆ ಒಂದುಉಲ್ಕಾಪಾತವು ಹಾದುಹೋಯಿತು ಎಂಬಂತೆ ಆಚಪಲವೇಗನು ಆಕಾಶದಿಂದ ಮಿಥಿಲೆಗೆಇಳಿದು ಬಂದನು.

ಅಂತವನಿಗವತರಿಸಿ ಪುರಶ್ರೀಯ ಮುಖಶ್ರೀಯನನುಕರಿಸುವ ಕಮಲವನ ಸವಿಧಾಪದೊಳ್ ವಿಶ್ರಮಿಸಿ ಜನಕಂ ಹಯಪ್ರಿಯನಪ್ಪುದಂ, ತಿಳಿದು—

ಮತ್ತೆ॥ ನೃಪನೀತಂ ತುರಗಪ್ರಿಯಂ ವಿಷಮ ವಾಹಾರೋಹಣಾತ್ಯಂತ ಲೋ।
ಲುಪನೊಲ್ದೇಱದೆ ಮಾಣನೇಱಿದೊಡೆ ಸಾಲ್ಗುಂ ಕೊಂಡು ಪೋಪೆಂ ಮದೀ॥
ಯಪುರಕ್ಕೆನ್ನಯ ಪೂಣ್ಕೆ ತೀರ್ಗುಮಿದಱಿಂ ಪೋಗೆಂದು ನಿಶ್ಚೈಸಿ ರೂ।
ಪ ಪರಾವರ್ತನ ವಿದ್ಯೆಯಿಂ ತುರಗರೂಪಾದಂ ಚರಂ ಖೇಚರಂ ॥೧೦೫॥

ಗದ್ಯ॥ ಅಂತು=ಹಾಗೆ, ಅವನಿಗೆ=ಭೂಮಿಗೆ, ಅವತರಿಸಿ=ಇಳಿದು, ಪುರಶ್ರೀಯ=ಪಟ್ಟಣವೆಂಬ ಲಕ್ಷ್ಮೀದೇವಿಯ, ಮುಖಶ್ರೀಯಂ=ಮುಖಕಾಂತಿಯನ್ನು, ಅನುಕರಿಸುವ=ಅಣಕಿಸುವ, ಕಮಲವನ ಸವಿಧಾಪದೊಳ್=ಸರೋವರದ ಹತ್ತಿರದಲ್ಲಿ, ವಿಶ್ರಮಿಸಿ=ಆಯಾಸಪರಿಹಾರವಮಾಡಿಕೊಂಡು, ಜನಕಂ=ಜನಕನೂ, ಹಯಪ್ರಿಯನಪ್ಪುದಂ=ಕುದುರೆ ಸವಾರಿಯಲ್ಲಿ ಪ್ರೀತಿಯುಳ್ಳವನಾಗಿರುವುದನ್ನು, ತಿಳಿದು

೧೦೫. ಟೀ॥ ಈತಂ ನೃಪಂ=ಈ ರಾಜನು, ತುರಗಪ್ರಿಯಂ=ಕುದುರೆಯಲ್ಲಿ ಪ್ರೀತಿಯುಳ್ಳವನು, (ವಿಷಮವಾಹಾರೋಹಣಾತ್ಯಂತ ಲೋಲುಪಂ) ವಿಷಮ=ವಿಲಕ್ಷಣವಾದ, ವಾಹ=ಕುದುರೆಯ ಆರೋಹಣ=ಸವಾರಿಯಲ್ಲಿ, ಅತ್ಯಂತ ಲೋಲುಪಂ=ಬಹಳ ಆಸಕ್ತಿಯುಳ್ಳವನು, ಒಲ್ದು=ಪ್ರೀತಿಸಿ, ಏಱದೆ ಮಾಣಂ=ಹತ್ತದೆ ಬಿಡುವುದಿಲ್ಲ, ಏಱಿದೊಡೆ=ಹತ್ತಿದೊಡೆ, ಸಾಲ್ಗುಂ=ಸಾಕು ಮದೀಯಪುರಕ್ಕೆ=ನನ್ನ ಪಟ್ಟಣಕ್ಕೆ, ಕೊಂಡು ಪೋಪೆಂ=ತೆಗೆದುಕೊಂಡು ಹೋಗುವೆನು, ಎನ್ನಯ, ಪೂಣ್ಕೆ=ಪ್ರತಿಜ್ಞೆಯು, ಇದಱಿಂ=ಜನಕನನ್ನು ಪಟ್ಟಣಕ್ಕೆ ತೆಗೆದುಕೊಂಡು ಹೋಗುವುದರಿಂದ, ತೀರ್ಗುಂ=ಪೂರೈಸುವುದು; ಪೋಗು=ನಿಜ, ಎಂದು. ನಿಶ್ಚೈಸಿ=ನಿರ್ಣಯಿಸಿ, (ರೂಪಪರಾವರ್ತನವಿದ್ಯೆಯಿಂ) ರೂಪ ಪರಾವರ್ತನ=ಆಕೃತಿಯನ್ನೇ ಬದಲಾಯಿಸುವುದೆಂಬ, ವಿದ್ಯೆಯಿಂ=ವಿದ್ಯೆಯಿಂದ, ಖೇಚರಚರಂ=ಚಪಲವೇಗನು, ತುರಗರೂಪಾದಂ=ಕುದುರೆಯ ಆಕಾರವನ್ನು ಹೊಂದಿದನು.

ತಾ॥ ಜನಕನು ಹೇಗೂ ಹಯಪ್ರಿಯನು, ಅಪೂರ್ವವಾದ ಕುದುರೆ ಸಿಕ್ಕಿದರೆ ಸವಾರಿಮಾಡದೆ ಬಿಡುವುದಿಲ್ಲ, ಅವನು ಕುದುರೆ ಏರಿದರೆ ಸಾಕು ಅದನನ್ನು ಹೊತ್ತುಕೊಂಡು ಓಡಿಬಿಡುವೆನು ಇದರಿಂದ ನನ್ನ ಪ್ರತಿಜ್ಞೆ ನೆರವೇರುವವನು ಎಂದಾಲೋಚಿಸಿ ಚಪಲವೇಗನು ಕುದುರೆಯರೂಪವನ್ನು ಧರಿಸಿದನು. ೧೦೫

ಅಂತು ವಿಷಮ ಹಯ ವೇಷಮಂ ತಳೆದು—

ಕಂ॥ ಎಯ್ದದೆಡೆಯೆಲ್ಲಮಂ ಪರಿ।
ದೆಯ್ದಿ ಪುರೋಪವನಮೆಲ್ಲಮಂ ತುಳಿದು ಪಲರ್॥
ಬಾಯ್ದೆಱೆದು ಪುಯ್ಯಲಿಡೆ ಕಡು।
ಕೆಯ್ದುಕ್ಕೆವಗುದುರೆ ಪೊೞಲನಲಿಲಿಸಿತಾಗಳ್ ॥೧೦೬॥

ಅದು ತಿಗುರಿಯಂದದಿಂ ತಿರಿ।
ದುದು ಮುಂದಂ ನೆಗೆದು ಪಿಂದನೀಡಾಡಿ ಬಿಸಿ॥
ಲ್ಗುದುರೆಯವೋಲ್ ಬಿಱುವರಿವರಿ।
ದುದು ಕೆಳರ್ದ ಕೃತಾಂತನಿಂತಿದೆನೆ ಕೃತಕಾಶ್ವಂ ॥೧೦೭॥

ಗದ್ಯ॥ ಅಂತು=ಹಾಗೆ, (ವಿಷಮಹಯವೇಷಮಂ) ವಿಷಮ=ವಿಪರೀತವಾದ, ಹಯವೇಷಮಂ=ಕುದುರೆಯ ರೂಪವನ್ನು, ತಳೆದು=ಧರಿಸಿ,

೧೦೬. ಟೀ॥ ಎಯ್ದದ=ಹೋಗದೆಇದ್ದ, ಎಡೆಯಲ್ಲಮಂ=ಸ್ಥಳವೆಲ್ಲವನ್ನು, ಪರಿದು=ಓಡಿ, ಎಯ್ದಿ=ಹೋಗಿ, ಪುರೋಪವನಮೆಲ್ಲಮಂ=ಪಟ್ಟಣಕ್ಕೆ ಸಂಬಂಧಪಟ್ಟ ತೋಟವೆಲ್ಲವನ್ನು, ತುಳಿದು=ಕಾಲಿಟ್ಟು, ಪಲರ್=ಅನೇಕರು, ಬಾಯ್ದೆರೆದು=ಬಾಯ್ಬಿಟ್ಟು, ಪುಯ್ಯಲಿಡೆ=ಕಿರಿಚಿಕೊಳ್ಳಲು, (ಕಡುಕೆಯ್ದುಕ್ಕೆವಗುದುರೆ) ಕಡುಕೆಯ್ದ=ವಿಷಮವಾದ, ಉಕ್ಕೆವಗುದುರೆ=ಮೋಸಕುದುರೆಯು, ಹೊಳಲಂ=ಪಟ್ಟಣವನ್ನು, ಅಳಲಿಸಿತು=ದುಃಖಪಡಿಸಿತು.

ತಾ॥ ಆ ಮಾಯಾಶ್ವವು ದುಸ್ಸಾಧ್ಯವಾದ ಪ್ರದೇಶಕ್ಕೆಲ್ಲಾ ನುಗ್ಗಿ ಉಪವನವನ್ನೆಲ್ಲಾ ತುಳಿದು ಎಲ್ಲರೂದಿಗಿಲುಬೀಳುವಂತೆಮಾಡಿ ದುಃಖಪಡಿಸಿತು೧೦೬

೧೦೭. ಟೀ॥ ಅದು=ಕುದುರೆಯು, ತಿಗುರಿಯಂದದಿಂ=ಬುಗುರಿಯಹಾಗೆ, ತಿರಿದುದು=ತಿರಿಗಿತು, ಮುಂದಂ=ಮುಂಭಾಗಕ್ಕೆ, ನೆಗೆದು=ಹಾರಿ, ಪಿಂದಂ=ಹಿಂಭಾಗವನ್ನು, ಈಡಾಡಿ=ಅತಿಕ್ರಮಿಸಿ, ಬಿಸಿಲ್‌ಗುದುರೆಯವೋಲ್=ಮರೀಚಿಕೆಯಂತೆ, ಕೆಳರ್ದ=ಕೋಪಿಸಿಕೊಂಡ, ಕೃತಾಂತಂ=ಯಮನು, ಇದುಕೃತಕಾಶ್ವಂ=ಈ ಕಪಟವಾದ ಕುದುರೆಯು, ಇಂತು=ಹೀಗೆ, ಎನೆ=ಎಂಬಂತೆ, ಬಿರುವರಿವರಿದುದು=ಕಠಿಣವಾಗಿ ತಿರಿಗಿತು.

ತಾ॥ ಆದು ಬುಗುರಿಯಂತೆ ತಿರುಗುತ್ತಾ ಮುಂದಕ್ಕೆ ಹಿಂದಕ್ಕೆ ನೆಗೆಯುತ್ತಾ ರೇಗಿದ ಯಮಧರ್ಮನಂತೆ ಉಗ್ರವಾಗಿ ಸಂಚರಿಸಿತು ೧೦೭

ಕಂ|| ಕತ್ತರಿಸಿ ಕಿವಿಗಳಂ ನಸು |
ಗುತ್ತುತುಂ ಮೆಯ್ಯ ಖಂಡಮಂ ಘುರುಘುರೆನು ||
ತ್ತೊತ್ತರಿಸೆ ಘೋಣ ಪವನಸು |
ದಾತ್ತಂ ಮಸಗಿತ್ತು ವಾಜಿ ಪೆರ್ಮಾರಿಯವೋಲ್ ||೧೦೮||

ಖರಖುರ ಹತಿಯಿಂ ಖರಮಂ |
ಕರಭಂಗಳನಟ್ಟಿ ಮುಟ್ಟಿ ದಂತಾಹತಿಯಿಂ |
ಪರಿದೊರಸಿ ಮನುಷ್ಯರನಾ |
ತುರಗಂ ಪುಗಿಸಿತ್ತು ನಿಮಿಷದಿಂ ಯಮಪುರಮಂ ||೧೦೯||

---

೧೦೮. ಟೀ|| ಕಿವಿಗಳಂ=ಕಿವಿಗಳನ್ನು, ಕತ್ತರಿಸಿ=ಕುಯ್ದು, ಮೆಯ್ಯ=ದೇಹದ, ಖಂಡಮಂ=ಮಾಂಸವನ್ನು, ನಸುಗುತ್ತುತ್ತುಂ, ಚಲನಮಾಡಿಸುತ್ತ, ಘುರುಘುರ್‌, ಎನುತ್ತೆ=ಎಂಬದಾಗಿ, ಒತ್ತರಿಸೆ=ಸಾಂದ್ರವಾಗಿ ಹೇಳಲು, ಪೆರ್ಮಾರಿಯವೋಲ್=ಹೆಮ್ಮಾರಿಯಹಾಗೆ, ಘೋಣಪವನಂ=ಮೂಗಿನ ಘಾಳಿಯುಳ್ಳಂಥಾ, ಉದಾತ್ತಂ=ಶ್ರೇಷ್ಠವಾದಂಥಾ, ವಾಜಿ=ಕುದುರೆಯು, ಮಸಗಿತ್ತು=ವಿಜೃಂಭಿಸಿತು.

ತಾ|| ಕಿವಿಗಳನ್ನು ತಿರುಗಿಸುತಾ್ತ ಮಾಂಸಖಂಡವನ್ನು ಕುಣಿಸುತಾ್ತ ಹೆಮ್ಮಾರಿಯಂತೆ ಉಸುರನ್ನು ಭೋರ್ಗರೆಯುತಾ್ತ ಇತ್ತು. ೧೦೮

೧೦೯. ಟೀ|| (ಖರಖುರಹತಿಯಿಂ) ಖರ=ತೀಕ್ಷ್ಣವಾದ, ಖುರ=ಗೊರಸುಗಳ, ಹತಿಯಿಂ=ಪೆಟ್ಟಿನಿಂದ, ಖರಮಂ=ಕತ್ತೆಯನ್ನು, ಕರಭಂಗಳಂ=ಒಂಟೆಗಳನ್ನು, ಮುಟ್ಟಿ=ಸೋಕಿ, ದಂತಾಹತಿಯಿಂ=ಹಲ್ಲುಗಳ ಹೊಡತದಿಂದ, ಪರಿದು=ಎಳದು, ಒರಸಿ=ತೀಡಿ, ಆತುರಗಂ=ಆ ಕುದುರೆಯು, ಮನುಷ್ಯರಂ=ಮಾನವರನ್ನು, ನಿಮಿಷದಿಂ=ಸ್ವಲ್ಪಹೊತ್ತಿನೊಳಗೆ, ಯಮಪುರಮಂ=ಯಮನಪಟ್ಟಣವನ್ನು, ಪುಗಿಸಿತ್ತು=ಪ್ರವೇಶಮಾಡಿಸಿತು.

ತಾ|| ಕತ್ತೆ ಒಂಟೆ ಇವುಗಳನ್ನು ಗೊರಸಿನಿಂದೊದೆಯುತ್ತಲೂ ಮನುಷ್ಯರನ್ನು ಹಲ್ಲಿನಿಂದ ಕಚ್ಚುತ್ತಲೂ ಈರೀತಿ ಅನೇಕರನ್ನು ಕೊಂದುಹಾಕಿತು.

ಕಂ|| ಇಡೆ ಗುಂಡೆಯ್ದವು 1ಪೊಯ್ದೊಡೆ |
ಬಡಿ ಕೊಳ್ಳವು ತುತ್ತೆ ಕಯ್ದು ವುರ್ಚವು ಮನದಿಂ ||
ಕಡುಗಡಿದು ಮಿಥಿಲೆಯಂ ಕೂ |
ಗಿಡಿಸಿದುದದ್ಭುತ ತುರಂಗಮಂ ಸಿಂಗದವೋಲ್ ||೧೧೦||

ಮ||ಸ್ರ||

ಕರೆವೋಯೆಂಬತ್ತಲಿತ್ತಲ್ ತೊಲಗು ತೊಲಗು ಪೋಗೆಂಬ ಬಾಯೆಂಬ ಬಿದ್ದಂ|
ಬರಿಯೆಂಬೋವೋವೊ ಕೂಕೂಗುಗಿದೆ ನುಡಿದೇಗೆಯ್ವೆನೆಂಬುಚ್ಚನೀಚಂ ||
ಪುರುಷ ಸ್ತ್ರೀಬಾಲ ವೃದ್ಧ ಸ್ಥವಿರ ಯುವ ಜನಾತಂಕ ಶಂಕಾತಿರೇಕಂ |
ಪುರದೊಳ್ಪೊಣ್ಮಿತ್ತು ವಿದ್ಯಾಧರ ಕೃತಕ ಹಯಾಟೋಪ ಘೋರ ಪ್ರಲಾಪಂ ||

---

೧೧೦. ಟೀ|| ಅದ್ಭುತ ತುರಂಗಮಂ=ಆಶ್ಚರ್ಯಕರವಾದ ಕುದುರೆಯು ಇಡೆ=ಹೊಡೆಯಲಾಗಿ, ಗುಂಡೆ=ಕಲ್ಲುಗಳೇ, ಎಯ್ದವು=ಹೋಗುವುದಿಲ್ಲ, ಹೊಯ್ದೊಡೆ=ಹೊಡೆದರೆ, ಬಡಿ=ದೊಣ್ಣೆಗಳು, ಕೊಳ್ಳವು=ಗ್ರಹಿಸುವುದಿಲ್ಲ, ತುತ್ತೆ=ನುಂಗಲು, ಕಯ್ದು=ಆಯುಧಗಳು, ಉರ್ಚವು=ಭೇದಿಸುವುದಿಲ್ಲ, ಮನದಿಂ=ಮನಸ್ಸಿನಿಂದ, ಮಿಥಿಲೆಯಂ=ಮಿಥಿಲಾಪಟ್ಟಣವನ್ನು, ಕಡುಗಡಿದು=ವಿಶೇಷವಾಗಿ ಕತ್ತರಿಸಿ, ಸಿಂಗದವೋಲ್=ಸಿಂಹದಹಾಗೆ, ಕೂಗಿಡಿಸಿದುದು=ಧ್ವನಿಮಾಡಿಸಿತು.

ತಾ|| ಗುಂಡಿನೇಟು ನಾಟಲೊಲ್ಲದು. ದೊಣ್ಣೆಗಳೂ ತಡೆಯದಾದವು, ಆಯುಧಗಳೂ ಗಾಯಮಾಡಲಾರದು; ಇಂತಹ ಆ ಕುದುರೆ ಸಿಂಹದಂತೆಮಿಥಿಲಾಪಟ್ಟಣವನ್ನೆಲ್ಲಾ ಗಾಬರಿಪಡಿಸಿತು ೧೧೦.

೧೧೧. ಟೀ|| ಕರೆ=ಕರಿ, ವೋ=ಎಲಾ, ಎಂಬ=ಹೀಗೆಂಬ, ಅತ್ತಲಿತ್ತಲ್=ಎಲ್ಲಾಕಡೆಯೂ, ತೊಲಗುತೊಲಗು=ದಾರಿಬಿಡು ದಾರಿಬಿಡು, ಪೋಗು=ಹೋಗು, ಎಂಬ, ಬಾ=ಚಿಂದುಬಿಡು ಎಂಬ, ಬಿದ್ದಂ=ಬಿದ್ದನೂ ಬರಿ=ಅಳ್ಳೆಯು, ಎಂಬ=ಹೀಗೆಂಬ, ವೊವೋವೊ=ಎಲಾಎಲಾ, ಕೂಕೂಗುಗಿದೆ=ಕೂಕೂಎಂದು ಹೇಳಿದೆ, ನುಡಿದೇಂ=ಹೇಳಿದೆ, ಏಗೆಯೆಂ=ಏನುಮಾಡಲಿ, ಎಂಬ, ಉಚ್ಚನೀಚಂ=ಹೆಚ್ಚುಕಡಮೆಯಾದ, (ಪುರಷಸ್ತ್ರೀಬಾಲವೃದ್ಧಸ್ಥವಿರಯುವ ಜನಾತಂಕ ಶಂಕಾತಿರೇಕಂ) ಪುರುಷ=ಗಂಡಸರೇನು, ಸ್ತ್ರೀ=ಹೆಂಗಸರೇನು, ಬಾಲ=ಹುಡುಗರೇನು, ವೃದ್ಧ=ಮುದುಕರೇನು, ಸ್ಥವಿರ=

---

1 ಪಾಯ್ದೊಡೆ. ಚ

ಉ|| ಬಾಲಕರಂ ಕೆಲರ್ ಮುದುಪರಂ ಕೆಲರಕ್ಷಿವಿಹೀನರಂ ಕೆಲರ್ |
ಬಾಲೆಯರಂ ಕೆಲರ್ಪಿಡಿದು ಬೆಚ್ಚರದಿಂದರರೀ ಪುಟಂಗಳಂ ||
ಕೀಲಿಸಿ ತಮ್ಮತಮ್ಮ ಮನೆವೊಕ್ಕಿರೆ ತತ್ಪುರಮೆಲ್ಲಮಲ್ಲಕ |
ಲ್ಲೋಲಮಕಾಲಮೃತ್ಯು ಭಯ ವಿಹ್ವಲಮಾದುದು ಸೂಕರಾಶ್ವದಿಂ ||

ಆ ಸಮಯದೊಳ್—

ಅಶಕ್ತರು, ಯುವ=ಪ್ರಾಯದವರು ಜನ=ಜನರಿಗೆ, ಆತಂಕ ಶಂಕಾ=ಭಯವೆಂಬ ಊಹೆಯು, ಅತಿರೇಕಂ=ಆಧಿಕ್ಯವು, ಪುರದೋಳ್=ಪಟ್ಟಣದಲ್ಲಿ, ವಿದ್ಯಾಧರ=ದೇವತೆಗಳ, (ಕೃತಕಹಯ) ಕೃತಿಕ=ಕೃತ್ರಿಮವಾದ, ಹಯ=ಕುದುರೆಯ ಆಟೋಪ=ಆಡಂಬರವುಳ್ಳ ಘೋರ=ಭಯಂಕರವಾದ, ಪ್ರಲಾಪಂ=ಧ್ವನಿಯು ಪೊಣ್ಮಿತ್ತು=ಉಂಟಾಯಿತು.

ತಾ|| ಗಂಡಸರು ಹೆಂಗಸರು, ಬಾಲರು ವೃದ್ಧರು, ಗಾಬರಿಯಿಂದಲೂ, ವಾತ್ಸಲ್ಯದಿಂದಲೂ ಪರಸ್ಪರ ರೋದಿಸುತ್ತಲೂ ಪ್ರಲಾಪಿಸುತ್ತಲೂ ಇದ್ದರು. ೧೧೧.

೧೧೨. ಟೀ|| ಕೆಲರ್=ಕೆಲವರು, ಬಾಲಕರಂ=ಮಕ್ಕಳನ್ನು, ಕೆಲವರು, ಮುದುಪರಂ=ವೃದ್ಧರನ್ನು, ಕೆಲರ್=ಕೆಲವರು, ಅಕ್ಷಿವಿಹೀನರಂ=ಕುರುಡರನ್ನು, ಕೆಲರ್=ಕೆಲವರು, ಬಾಲೆಯರಂ=ಹೆಂಗಸರನ್ನು, ಬೆಚ್ಚರದಿಂದೆ=ಬೇಗನೆ, ಪಿಡಿದು=ಹಿಡಿದುಕೊಂಡು, ಅರರೀಪುಟಂಗಳಂ=ಕದಗಳನ್ನು, ಕೀಲಿಸಿ=ಬಡಿದು, ತಮ್ಮತಮ್ಮ ಮನೆವೊಕ್ಕಿರೆ=ಗೃಹದಲ್ಲಿ ಅಡಗಿಕೊಂಡಿರಲು, ತತ್ಪುರಮೆಲ್ಲಂ=ಆ ಎಲ್ಲಾ ಪಟ್ಟಣವು, ಸೂಕರಾಶ್ವದಿಂ=ತುಂಟಕುದುರೆಯಿಂದ, ಅಲ್ಲಕಲ್ಲೋಲಂ=ಸಂಕಟಕ್ಕೊಳಗಾದದ್ದು, ಅಕಾಲಮೃತ್ಯು=ಅಕಾಲಮರಣದ, ಭಯ=ಭಯದಿಂದ, ವಿಹ್ವಲಂ=ಪರವಶವಾದದ್ದು, ಆದುದು=ಆಯಿತು.

ತಾ|| ಹುಡುಗರು, ಮುದುಕರು, ಕುರುಡರು, ಹುಡುಗಿಯರು ಇವರನ್ನು ಕರೆದುಕೊಂಡು ಬಾಗಿಲು ಹಾಕಿಕೊಂಡು ಇದ್ದರೂ, ತುಂಟಕುದುರೆಯ ದೆಸೆಯಿಂದ ಪಟ್ಟಣವೆಲ್ಲಾ ಅಲ್ಲೋಲಕಲ್ಲೋಲವಾಗುವಂತಿತ್ತು. ೧೧೨.

ಗದ್ಯ|| ಆಸಮಯದೋಳ್=ಆಕಾಲದಲ್ಲಿ.

ಚ|| ಕಳಕಳನಾದಮಾದ ತೆಱನಂ ಜನಕಂ ತಿಳಿದಾ ಸವಾರಿಗಳ್ |
ತಳೆದು ಖಲೀನಮಂ ತುರಿಪದಿಂ ಬರೆ ಸಂದಿಸಿ ಪಿಂದೆ ರಾಜ ಮಂ ||
ಡಳಿ ಬರೆ ಬಂದು ನಿಂದು ಹಯಮಂನಡೆನೋೞ್ಪುದುವೀಕ್ಷಣಾಂಶುವಂ|
ಡಳಿಸಿದುದಿಂದು ರಶ್ಮಿಯೊಳೆ ತೀರ್ಚಿ ತೊಡರ್ಚಿದ ಕೀೞ ನೇಣವೋಲ್ ||

ಅಂತು ನೋಡಲೊಡಂ—

ಕಂ|| ಸೂಕಳಮಲ್ತಿದು ಸಕಲ ಗು |
ಣಾಕರಮೆನೆ ಜನಕ ಮುಖ ವಿಲೋಕನದಿಂದು ||
ದ್ರೇಕಮನುೞಿದಿರೆ ವಾಹಕ |
ರಾಕುಟಿಲಾಶ್ವಕ್ಕೆ ಖರ ಖಲೀನಮನಿಟ್ಟರ್ ||೧೧೪||

---

೧೧೩. ಟೀ|| ಕಳಕಳನಾದಂ=ಕೋಲಾಹಲಧ್ವನಿಯು, ಆದತೆರನಂ=ಆದ ಸಂಗತಿಯನ್ನು ಜನಕಂ=ಜನಕರಾಜನು, ತಿಳಿದು, ಆಸವಾರಿಗಳ್=ದೈತ್ಯರು, ಖಲೀನಮಂ=ಕಡಿವಾಣವನ್ನು, ತಳೆದು=ಹಿಡಿದು, ತುರಿಪದಿಂ=ವೇಗದಿಂದ, ಬರೆ=ಬರಲಾಗಿ, ಪಿಂದೆ=ಹಿಂದುಗಡೆಯಲ್ಲಿ ಸಂದಿಸಿ=ಕೂಡಿ, ರಾಜಮಂಡಳಿ=ರಾಜರ ಸಮೂಹವು, ಬರೆ=ಬರುತ್ತಿರಲು, ಬಂದು, ನಿಂದು=ನಿಂತುಕೊಂಡು, ಹಯಮಂ=ಕುದುರೆಯನ್ನು, ನಡೆ=ಚನ್ನಾಗಿ, ನೋೞ್ಪುದುಂ=ನೋಡುತ್ತಿರಲು, ಈಕ್ಷಣಾಂಶು=ನೇತ್ರಕಾಂತಿಯು, ಇಂದುಃರಶ್ಮಿಯೊಳೆ=ಚಂದ್ರಕಿರಣದಿಂದಲೇ, ತೀರ್ಚಿ=ಹೊಸೆದು, ತೊಡರ್ಚಿದ=ತೊಡಿಸಿದ, ಕೀೞ=ಕಡಿವಾಣದ ನೇಣವೋಲ್=ಹಗ್ಗದಹಾಗೆ, ಮಂಡಳಿಸಿದುದು=ಆವರಿಸಿತು.

ತಾ|| ಊರಲ್ಲೆಲ್ಲಾ ಗಲಾಟೆಯಾಗಿರುವುದನ್ನು ಜನಕನು ಕೇಳಿ ರಾಹುತರು ಲಗಾಮುಸಮೇತ ಹಿಂದೆ ಬರಲು ಅನೇಕ ರಾಜಸಮೂಹ ಸಮೇತನಾಗಿ ಬಂದು ಕುದುರೆಯನ್ನು ನೋಡುತ್ತಿರಲು ಇವನ ನೇತ್ರಕಾಂತಿಯು ಚಂದ್ರಕಿರಣವನ್ನು ಹೊಸೆದು ಲಗಾಮು ಹಾಕಿದರೋ ಎಂಬಂತೆ ಆವರಿಸಿತು. ೧೧೩.

ಗದ್ಯ|| ಅಂತು=ಆಪ್ರಕಾರ, ನೋಡಲೊಡಂ=ನೋಡಿದಕೂಡಲೆ—

೧೧೪. ಟೀ|| ಇದು ಸೂಕಳಮಲ್ತು=ದುಷ್ಟವಾದ ಕುದುರೆಯಲ್ಲ, (ಸಕಲಗುಣಾಕರಂ) ಸಕಲಗುಣ=ಎಲ್ಲಾಗುಣಗಳಿಗೂ, ಆಕರಂ=ಸ್ಥಾನವಾದದ್ದು, ಎನೆ=ಎಂಬುವಹಾಗೆ, ಜನಕ=ಜನಕರಾಜನ, ಮುಖವಿಲೋಕನದಿಂ

ಉ|| ಒಟ್ಟಜೆಗೆಟ್ಟು ಕಾರ್ಯವಶದಿಂ ಖಚರಂ ಪಿಡಿಪಟ್ಟು ಪಲ್ಲಣಂ |
ಗಟ್ಟಿಸಿಕೊಂಡುಮೇನೊ ಮುಖಲೀನ ಖಲೀನ ಕಶಾಭಿಘಾತದಿಂ ||
ತೊಟ್ಟನೆ ನೋವನೆಯ್ದಿದನಿದಾವುದು ಚೋದ್ಯಮೊ ಕೈತವಕ್ಕೆ ಕೈ |
ಗೊಟ್ಟ ಖಳಂಗೆ ತೀವ್ರ ಪರಿವೇದನ ಬಂಧನಮಾಗದಿರ್ಕುಮೇ|| ೧೧೫

ದೆ=ಮುಖದರ್ಶನದಿಂದ, ಉದ್ರೇಕಮಂ=ಕೊಬ್ಬನ್ನು, ಉಳಿದಿರೆ=ಬಿಟ್ಟಿರಲು, ವಾಹಕರ್=ಅಶ್ವಾರೋಹಕರು, ಆ ಕುಟಿಲಾಶ್ವಕ್ಕೆ=ಆ ಕಪಟವಾದ ಕುದುರೆಗೆ, ಖರ=ತೀಕ್ಷ್ಣವಾದ, ಖಲೀನಮಂ=ಕಡಿವಾಣವನ್ನು, ಇಟ್ಟರ್=ಹಾಕಿದರು.

ತಾ|| ಇದು ತುಂಟಕುದುರೆಯಲ್ಲ, ಬಲು ಒಳ್ಳೆಯ ಸಾಧು, ಎಂಬಂತೆ ಜನಕನ ಮುಖ ಕಂಡೊಡನೆಯೇ ತನ್ನ ರೌದ್ರತೆಯನ್ನು ಬಿಟ್ಟು ಸುಮ್ಮನಾಗಲು ರಾವುತರು ಆ ಕುದುರೆಗೆ ಕಡಿವಾಣವನ್ನು ಹಾಕಿದರು. ೧೧೪.

೧೧೫. ಟೀ|| ಒಟ್ಟಜೆಗೆಟ್ಟು=ರೀತಿಗೆಟ್ಟು, ಕಾರ್ಯವಶದಿಂ=ಕಾರ್ಯಗತಿಯಿಂದ, ಖಚರಂ=ವಿದ್ಯಾಧರನು, ಪಿಡಿಪಟ್ಟು=ಪರಾಧೀನನಾಗಿ, ಪಲ್ಲಣಂಗಟ್ಟಿಸಿಕೊಂಡುಮೇನೊ=ಜೀನನ್ನು ಹಾಕಿಸಿಕೊಂಡು ಏನೋ, (ಮುಖಲೀನ ಖಲೀನಕಶಾಭಿಘಾತದಿಂ) ಮುಖ=ಮುಖದಲ್ಲಿ, ಲೀನ=ಅಡಗಿರುವಂಥಾ, ಖಲೀನ=ಕಡಿವಾಣವೇನು, ಕಶ=ಚಾವಟಿಯೇನು ಇವುಗಳ, ಅಭಿಘಾತದಿಂ=ಏಟಿನಿಂದ, ತೊಟ್ಟನೆ=ಜಾಗ್ರತೆಯಾಗಿ, ನೋವಂ=ಬಾಧೆಯನ್ನು, ಎಯ್ದಿದಂ=ಹೊಂದಿದನು, ಇದಾವುದು ಚೋದ್ಯಮೋ= ಇದೇನಾಶ್ಚರ್ಯವೊ, ಕೈತವಕ್ಕೆ=ಕಪಟಕ್ಕೆ, ಕೈಗೊಟ್ಟ=ಪ್ರವರ್ತಿಸಿದ, ಖಳಂಗೆ=ನೀಚನಿಗೆ, (ತೀವ್ರ ಪರಿವೇದನ ಬಂಧನ ಮಾಗದೆ) ತೀವ್ರ=ಹೆಚ್ಚಾದ, ಪರಿವೇದನ=ಬಾಧೆಯು, ಬಂಧನಂ=ಸೆರೆಯು, ಆಗದಿರ್ಕುಮೇ=ಆಗದಿರುವುದೇ ?

ತಾ|| ರೀತಿತಪ್ಪಿ ಕಾರ್ಯಗತಿಯಿಂದ ಪರಾಧೀನವಾಗಿ ಜೀನು ಕಡಿವಾಣ ಹಾಕಿಸಿಕೊಂಡದ್ದಷ್ಟೇ ಅಲ್ಲದೆ ಚಾವಟಿಯ ಏಟಿನಿಂದ ನೋವನ್ನು ಹೊಂದಬೇಕಾಯ್ತು. ಮೋಸಕಾರ್ಯಕ್ಕೆ ಪ್ರವರ್ತಿಸಿದವನಿಗೆ ಬಾಧೆ ಬಂಧನಗಳು ಒದಗದೆ ಇದ್ದೀತೆ. ೧೧೫.

ಅಂತು ಮಾಯಾಹಯಮಂ ಮಂದುರಂಬುಗಿಸುವುದುಮಾಸಮಯದೊಳ್—

ಕಂ|| ಮೃಗನಾಭಿಯನಾನೆಯ ಕೊಂ |
ಬುಗಳಂ ಪೆರ್ವಿದಿರ ತೋರಮುತ್ತಂ ಕಣ್ಬೇ ||
ಲಿಗಳಂ ಮುಂದಿಟ್ಟೊರ್ವಂ |
ಪುಗುತಂದಂ ರಾಜಭವನದೊಳಗಂ ಶಬರಂ ||೧೧೬

ಅಂತು ಬಂದು ತನ್ನ ತಂದುಪಾಯನಮಂ ಕೊಟ್ಟೆಱಗಿ ಪೊಡೆವಟ್ಟು ದೇವ ನಮ್ಮ ಬನದೊಳೊಂದು ಭದ್ರಗಜಮಿರ್ದುದೆಂದು ಬಿನ್ನವಿಸೆ—

ಗದ್ಯ|| ಅಂತು=ಹಾಗೆ, ಮಾಯಹಯಮಂ=ಕಪಟಾಶ್ವವನ್ನು, ಮಂದರಂ ಬುಗಿಸುವುದುಂ=ಲಾಯಕ್ಕೆ ಪ್ರವೇಶಮಾಡಿಸಲು, ಆ ಸಮಯದೊಳ್=ಆ ಕಾಲದಲ್ಲಿ.

೧೧೬. ಟೀ|| ಮೃಗನಾಭಿಯಂ=ಕಸ್ತೂರಿಯನ್ನು, ಆನೆಯಕೊಂಬುಗಳಂ=ಆನೆಯದಂತಗಳನ್ನು, ಪೆರ್ವಿದಿರ=ಹೆಬ್ಬಿದಿರ, ತೋರಮುತ್ತಂ=ದಪ್ಪ ಮುತ್ತುಗಳನ್ನು, ಕಣ್ಬೇಲಿಗಳಂ=ಕಣ್ಣುಗಳೆಂಬ ನವಿಲುಗರಿಗಳನ್ನು, ಮುಂದಿಟ್ಟು=ಮುಂದುಮಾಡಿ, ಒರ್ವಂ ಶಬರಂ=ಒಬ್ಬಬೇಡನು, ರಾಜಭವನದೊಳಗಂ=ಅರಮನೆಯ ವಳಭಾಗವನ್ನು, ಪುಗುತಂದಂ=ಪ್ರವೇಶಿಸಿದನು.

ತಾ|| ಆ ಕಪಟಾಶ್ವವನ್ನು ಲಾಯಕ್ಕೆ ತರಲು ಅದೇ ಸಮಯಕ್ಕೆ ಬೇಡನೊಬ್ಬನು ಕಸ್ತೂರಿ, ಆನೆದಂತ, ಮುತ್ತು, ನವಿಲುಗರಿ ಮುಂತಾದ ಕಾಣಿಕೆಯ ವಸ್ತುಗಳೊಡನೆ ಅರಮನೆಗೆ ಬಂದನು. ೧೧೬.

ಗದ್ಯ|| ಅಂತು=ಹಾಗೆ, ಬಂದು, ತಂದ=ತೆಗೆದುಕೊಂಡುಬಂದ, ತನ್ನ, ಉಪಾಯನಮಂ=ಕಾಣಿಕೆಯನ್ನು, ಕೊಟ್ಟು, ಎರಗಿ=ಬಗ್ಗಿ, ಪೊಡವಟ್ಟು=ನಮಸ್ಕರಿಸಿ, ದೇವ=ಸ್ವಾಮಿಯೇ, ನಮ್ಮ, ಬನದೊಳ್=ಕಾಡಿನಲ್ಲಿ, ಒಂದು ಭದ್ರಗಜಂ=ಒಂದು ಮಂಗಳಕರವಾದ ಆನೆಯು, ಇರ್ದುದು=ಇತ್ತು, ಎಂದು=ಎಂಬದಾಗಿ, ಬಿನ್ನವಿಸೆ=ಅರಿಕೆಮಾಡಲು.

ಕಂ॥ ಜನಕಂ ವನ್ಯಗಜಾಲೋ |
ಕನ ಕೌತುಕ ಚಿತ್ತನಾದನುಚಿತಮೆ ವಲಮಾ ॥
ವನೊ ಭೂಭುಜಂ ಗಜಪ್ರಿಯ |
ನೆನಿಸದನರಸಾನೆಯಿಲ್ಲದೇನೊಪ್ಪುಗುಮೇ ೧೧೭

ಅನಂತರಂ—

ಕಂ॥ ಪರಿಜನಮುಮಾಪ್ತಜನಮುಂ |
ಪರಿಕಾರರುಮೋಜೆವಿಡಿದುಮೊಡವರೆ ವನ್ಯ ॥
ದ್ವಿರದನ ಬಂಧನ ಕೌತುಕ |
ನರಣ್ಯಮಂ ಮುಟ್ಟಿವಂದನಂದು ನರೇಂದ್ರಂ ॥೧೧೮॥

---

೧೧೭. ಟೀ॥ ಜನಕಂ=ಜನಕರಾಜನು, (ವನ್ಯಗಜಾಲೋಕನಕೌತುಕಚಿತ್ತನಾದಂ) ವನ್ಯಗಜ=ಕಾಡಾನೆಯು, ಆಲೋಕನ=ನೋಡುವುದರಲ್ಲಿ, ಕೌತುಕ=ಕುತೂಹಲಗೊಂಡ, ಚಿತ್ತಂ=ಮನಸ್ಸುಳ್ಳವನು, ಆದಂ=ಆದನು, ಉಚಿತಮೆ=ಯೋಗ್ಯವಾದುದೆ, ವಲಂ=ದಿಟವು, ಗಜಪ್ರಿಯಂ=ಆನೆಯಲ್ಲಿಪ್ರೀತಿಯುಳ್ಳವನು, ಎನಿಸದ=ಎನಿಸಿಕೊಳ್ಳದ, ಆವನೋ=ಯಾವನು, ಭೂಭುಜಂ=ಅರಸನು? ಅರಸಂ=ರಾಜನು, ಆನೆಯಿಲ್ಲದೆ=ಗಜವಿಲ್ಲದೆ, ಒಪ್ಪುಗುಮೇಎಂ?=ಪ್ರಕಾಶಿತ್ತಾನೆಯೇ ಏನು?

ತಾ॥ ಅವನು ಕಾಣಿಕೆಯನ್ನೊಪ್ಪಿಸಿ ಸ್ವಾಮಿ ನಮ್ಮ ಅರಣ್ಯದಲ್ಲಿ ಭದ್ರಲಕ್ಷಣದ ಆನೆಯೊಂದು ಇದೆ ಎಂದು ವಿಜ್ಞಾಪಿಸಲು ಜನಕನಿಗೆ ಕಾಡಾನೆಯನ್ನು ನೋಡುವ ಆಸಕ್ತಿಯು ಕ್ಷತ್ರಿಯಸಹಜವಾಗಿ ಹುಟ್ಟಿತು.

ಅನಂತರಂ=ಆಮೇಲೆ—

೧೧೮. ಟೀ॥ ಪರಿಜನಮುಂ=ಸೇವಕ ಜನವೂ, ಆಪ್ತಜನಮುಂ=ನಂಬಿಗಸ್ಥರೂ, ಪರಿಕಾರರುಂ=ಹರಿಕಾರರೂ, ಓಜೆವಿಡಿದುಂ=ಕ್ರಮವಿಡಿದು, ಒಡವರೆ=ಜೊತೆಯಲ್ಲಿ ಬರಲು, ವನ್ಯದ್ವಿರದನ=ಕಾಡಾನೆಯ, ಬಂಧನಕೌತುಕಂ=ಸೆರೆಯಲ್ಲಿ ಆಶ್ಚರ್ಯಉಳ್ಳಂಥಾ. ನರೇಂದ್ರಂ=ಜನಕರಾಜನು, ಅಂತು=ಆಗ, ಅರಣ್ಯಮಂ ಮುಟ್ಟಿವಂದಂ=ಕಾಡನ್ನು ಕುರಿತು ಬಂದನು, ಆ ಮಹಾಗಹನ=ಮಹಾರಣ್ಯದಲ್ಲಿರುವ, ಸರಲ=ಉದ್ದವಾದ, ಸಲ್ಲಕೀಪ್ರದೇಶದೋಳ್=ಸರಳವೃಕ್ಷಪ್ರದೇಶದಲ್ಲಿ.

ಆ ಮಹಾಗಹನ ಸರಲ ಸಲ್ಲಕೀ ಪ್ರದೇಶದೊಳ್—

ಮ|| ಮುಗಿಲೊಡ್ಡಂ ಗೆಲೆವಂದ ಕಾಯಭರದಿಂ ಪೊಂಬಟ್ಟನೊಟ್ಟೈಪ ದಿ |
ಟ್ಟಿಗಳಿಂ ಕಾಳಿಗನಾಗನಂ ನಗುವ ಕೈಯಿಂ ಕಾರ ತಂದಲ್ವೊಲ ||
ಲ್ಲುಗುವೆಂಟುಂ 1ಮದವಟ್ಟೆಯಿಂಪೆರೆಯಸೌಭಾಗ್ಯಕ್ಕೆ ತೋಡಾದಕೋ
ಡುಗಳಿಂದೇಂ ಜನಕಂಗೆ ಹರ್ಷಜನಕಂ ತಾನಾಯ್ತೊ ವನ್ಯದ್ವಿಪಂ ||

ಆಗಳಾ ಗಜದ ಬಳಿಸಂದು 2ನಡೆವಾನೆ ವಾಹಕರೊಡನೆ ಪೋಗಲೆಂದು ಪಲ್ಲಣಿಸಿ ಕೆಲದೊಳಿರ್ದ ಕೃತಕ ತುರಂಗಮಂ ತರಿಸಿ—

ತಾ|| ಸೇವಕರೂ, ನಂಬಿಕೆವಂತರೂ ಕ್ರಮವರಿತು ಜತೆಯಲ್ಲಿ ಬರಲು ಕಾಡಾನೆಯನ್ನು ಕಟ್ಟುವ ಕುತೂಹಲದ ಜನಕನು ಅರಣ್ಯವನ್ನು ಸಮೀಪಿಸಿ ಬಂದನು. ೧೧೮.

೧೧೯. ಟೀ|| ಮುಗಿಲ=ಮೋಡಗಳ, ಒಡ್ಡಂ=ಸಾಲನ್ನು, ಗೆಲೆವಂದ =ಜಯಿಸುವುದಕ್ಕೆ ಸಮರ್ಥವಾದ, ಕಾಯಭರದಿಂ=ದೇಹಭಾರದಿಂದ, ಪೊಂಬಟ್ಟಂ=ಚಿನ್ನದ ತಿಲಕವನ್ನು, ಬಟ್ಟೈಪ=ತಿರಸ್ಕರಿಸುವ, ದಿಟ್ಟಿಗಳಿಂ= ನೋಟಗಳಿಂದ, ಕಾಳಿಗನಾಗನಂ=ಕಾಳಿಯಸರ್ಪವನ್ನು, ನಗುವ=ಹಾಸ್ಯಮಾಡುವ, ಕೈಯಿಂ=ಹಸ್ತದಿಂದ, ಕಾರ=ಮಳೆಗಾಲದ, ತಂದಲ್ ಪೋಲ್=ಸಮೂಹದ ಹಾಗೆ, ಅಲ್ಲಿ=ಆ ಸ್ಥಳದಲ್ಲಿ, ಉಗುವ=ಬೀಳುವ, ಎಂಟುಂಮದವಟ್ಟೆಯಿಂ=ಎಂಟು ವಿಧವಾಗಿರತಕ್ಕ, ಮದಗಳ ಪಂಕ್ತಿಯಿಂದ, ಪೆರೆಯ= ಚಂದ್ರನ. ಸೌಂದರ್ಯಕ್ಕೆ, ತೋಡಾದ=ಸಮಸಾದ, ಕೋಡುಗಳಿಂದೆ=ಕೊಂಬುಗಳಿಂದ, ವನ್ಯದ್ವಿಪಂ=ಕಾಡಾನೆಯು, ಜನಕಂಗೆ=ಜನಕರಾಜನಿಗೆ, ತಾಂ=ಅದು, ಏಂ ಹರ್ಷಜನಕಮಾಯ್ತೊ ?=ಏನು ಸಂತೋಷವನ್ನುಂಟು ಮಾಡುವಂಥಾದಾಯ್ತೋ ?

ತಾ|| ಕಾರ್ಮುಗಿಲ ಗುಂಪಿನಂತೆ ಸ್ಥೂಲವಾದ ಮೈಯೂ, ಚಿನ್ನದ ಬಟ್ಟಿನಂತೆ ಥಳಥಳಿಸುವ ದೃಷ್ಟಿಯೂ, ಕಾಳಿಂಗ ನಾಗರ ಹಾವಿನಂತೆ ನೀಳವಾದ ಸೊಂಡಿಲೂ, ಮಳೆ ಹನಿದಂತೆ ಅಷ್ಟಸ್ಥಾನಗಳಲ್ಲಿ ಸುರಿವ ಮದೋದಕದಿಂದಲೂ ಚಂದ್ರನಂತೆ ಶುಭ್ರವಾದ ಕೊಂಬುಗಳಿಂದಲೂ, ಕೂಡಿದ ಕಾಡಾನೆಯು ಜನಕರಾಯನಿಗೆ ಹರ್ಷಪ್ರದವಾಗಿತ್ತು. ೧೧೯

ಗದ್ಯ|| ಆಗಳ್=ಆಗ, ಆಗಜದ=ಆ ಆನೆಯ, ಬಳಿಸಂದು=ಸಮೀಪಕ್ಕೆ

---

1 ಮದವರ್ಕೆ. ಚ, 2 ದಾನೆಯ ೦ ತರಲಾನೆ ವಾಹಕ, ಚ, ತರಲ್ನಡೆವಾನೆವಾಂಕ, ಕ.ಖ.

ಕಂ|| ಉಂಗುಟಮನಂಕ1ವಣಿಗೆ ಕ |
ರಾಂಗುಳಿಯಂ ಸ್ಕಂಧ ಸಂಧಿಗುಯ್ದೇಱಿದನು ||
ತ್ತುಂಗ ತುರಂಗಮುಮಂ ನೃಪ |
ತುಂಗಂ ಸೂಕಳಮಿದೆಂದು ಸೆಡೆದನೆ ಮನದೊಳ್ ||೧೨೦||

ಅಂತು ಬೆಂಗೆವಂದು ಕೀೞಿನಳವಡೆ ಪಿಡಿದು ತೊಡೆಯೊ2ಳವುಂಕಿ ಸೂಂಕುವುದುಂ, ಬಿಸಿಲ್ಗುದುರೆಯಂತೆ ಪೊಳೆದುಚ್ಚೈಶ್ಶ್ರವದಂತೆ ನಭಕ್ಕೆ ನೆಗೆದು ರವಿರಥವಾಜಿಯಂತೆ ಪವನ ಪಥದೊಳ್ ಪರಿವುದುಂ—

ನಡೆವ=ಹೋಗುವ, ಆನೆವಾಹಕರೊಡನೆ=ಮಾವಟಿಗರ ಸಂಗಡ, ಪೋಗಲೆಂದು=ಹೋಗಬೇಕೆಂದು, ಪಲ್ಲಣಿಸಿ=ಜೀನುಹಾಕಿ, ಕೆಲದೊಳಿರ್ದ=ಸವಿಾಪದಲ್ಲಿದ್ದ, ಕೃತಕತುರಂಗಮಂ=ಕಪಟಾಶ್ವವನ್ನು, ತರಿಸಿ=ಬರಮಾಡಿ.

೧೨೦. ಟೀ|| ಉಂಗುಟಮಂ=ಹೆಬ್ಬೆರಲನ್ನು, ಅಂಕವಣಿಗೆ=ರಿಕಾಪಿಗೆ, ಹೊಂದಿಸಿ, ಕರಾಂಗುಳಿಯಂ=ಕೈಬೆರಲುಗಳನ್ನು, ಸ್ಕಂಧಸಂಧಿಗೆ=ಭುಜಶಿರಸ್ಸಿಗೆ, ಉಯ್ದು=ತೆಗೆದುಕೊಂಡುಹೋಗಿ, ಉತ್ತುಂಗ=ಉನ್ನತವಾದ, ತುರಂಗಮುಮಂ=ಕುದುರೆಯನ್ನು, ಏರಿದಂ=ಹತ್ತಿದನು. ನೃಪತುಂಗಂ=ಜನಕನು, ಮನದೊಳ್=ಮನಸ್ಸಿನಲ್ಲಿ, ಸೂಕಳಮಿದೆಂದು=ದುಷ್ಟಾಶ್ವವೆಂದು, ಸೆಡೆದನೆ=ಹೆದರಿದನೆ.

ತಾ|| ಆಗ ಮಾವಟಿಗರ ಜೊತೆಯಲ್ಲಿ ಆನೆಯ ಹತ್ತಿರಕ್ಕೆ ಹೋಗಬೇಕೆಂದು ಮಾಯಾಶ್ವಕ್ಕೆ ಜೀನುಹಾಕಿ ಸಿದ್ಧಪಡಿಸಿ, ತರಿಸಿ ಅಂಕವಣೆಯಲ್ಲಿ ಕಾಲಿಟ್ಟು ಮೇಲೆ ಕುಳಿತುಕೊಂಡನು. ಕುಳಿತು ತೊಡೆಯಿಂದವುಕಿ ಚಿಮ್ಮಲು ಬಿಸಿಲ್ಗುದುರೆಯಂತೆ ಹೊಳೆಯುತ್ತಾ ಇಂದ್ರನ ಕುದುರೆಯಂತೆ ಆಕಾಶಕ್ಕೆ ನೆಗೆದು ಸೂರ್ಯಾಶ್ವಗಳಂತೆ ಅಲ್ಲೆಲ್ಲಾ ಸಂಚರಿಸಿತು. ೧೨೦.

ಗದ್ಯ|| ಅಂತು=ಹಾಗೆ, ಬೆಂಗೆವಂದು=ಬೆನ್ನಿಗೆ ಬಂದು, ಕೀಳಂ=

---

1 ವಣೆ. ಕ. 2 ಳವುಂಚಿ ಚ.

ಕಂ|| ತ್ರಿದಶಂ ಮೇಣ್ ಖಚರಂ ಮೇಣ್ |
ಕುದುರೆಯ ರೂಪಿಂದಮರಸನಂ ಮುನ್ನಿನ ಜ ||
ನ್ಮದ ಪಗೆವನುಯ್ದನಂತ |
ಲ್ಲದೊಡೆ ವಿಯದ್ಗಾಮಿಯಪ್ಪ ಕುದುರೆಗಳೊಳವೇ ||೧೨೧||

ಎಂದು ಸಕಳ ಪರಿಜನಂ ವಿಕಳವಾಗಿಯುಂ ನೈಮಿತ್ತಿಕದಿಂದರಸನ ಬರವ ನಱಿದುಮ್ಮಳಮನುೞಿದಿರ್ಪುದು ಮಿತ್ತಲ್—

ಕಡಿವಾಣವನ್ನು, ಅಳವಡೆ=ಸರಿಯಾಗಿ, ಪಿಡಿದು=ಹಿಡಿದು ತೊಡೆಯೊಳ್, ಅವುಂಕಿ=ಗುದ್ದಿ, ನೂಂಕುವುದುಂ=ತಳ್ಳಿದಕೂಡಲೆ, ಬಿಸಿಲ್ಗುದುರೆಯಂತೆ=ಮರೀಚಿಕೆಯಹಾಗೆ, ಹೊಳೆದು=ಕಾಣಿಸಿಕೊಂಡು, ಉಚ್ಚೈಶ್ಶ್ರವದಂತೆ=ಇಂದ್ರನ ಕುದುರೆಯಹಾಗೆ, ನಭಕ್ಕೆ=ಆಕಾಶಕ್ಕೆ, ನೆಗೆದು=ಹಾರಿ (ರವಿರಥವಾಜಿಯಂತೆ) ರವಿರಥ=ಸೂರ್ಯನರಥಕ್ಕೆ ಕಟ್ಟಿದ, ವಾಜಿಯಂತೆ=ಕುದುರೆಯಹಾಗೆ, ಪವನಪಥದೊಳ್=ಆಕಾಶದಲ್ಲಿ, ಪರಿವುದುಂ=ಸಂಚರಿಸುತ್ತಿರಲು.

೧೨೧ ಟೀ|| ತ್ರಿದಶಂ=ದೇವತೆಯೋ, ಮೇಣ್=ಅಥವಾ, ಖಚರಂ=ಗಗನಗಾಮಿಯೋ, ಮೇಣ್=ಅಥವಾ, ಕುದುರೆಯರೂಪಿಂದೆ=ಅಶ್ವವೇಷದಿಂದ, ಅರಸನಂ=ಜನಕನನ್ನು, ಮುನ್ನಿನಜನ್ಮದ=ಪೂರ್ವಜನ್ಮದ, ಪಗೆವಂ=ಶತೃತ್ವವನ್ನುಳ್ಳವನು, ಉಯ್ದಂ=ತೆಗೆದುಕೊಂಡು ಹೋದನು, ಅಂತಲ್ಲದೊಡೆ=ಹಾಗಲ್ಲದೆ ಇದ್ದರೆ, ವಿಯದ್ಗಾಮಿಯಪ್ಪ=ಆಕಾಶದಲ್ಲಿ ಸಂಚರಿಸುವ, ಕುದುರೆಗಳ್=ಅಶ್ವಗಳು, ಒಳವೇ ?=ಇರುವುವೇ ?

ತಾ|| ಇದೇನು ದೇವತೆಯೋ ಗಂಧರ್ವನೋ ಅಥವಾ ರಾಜನನ್ನು ಮೋಸಗೊಳಿಸಲು ಕುದುರೆಯ ರೂಪಿನಲ್ಲಿ ಬಂದ ಜನ್ಮಾಂತರ ಶತ್ರುವೋ ಏನೋ ಆಕಾಶದಲ್ಲಿ ಚರಿಸುವ ಕುದುರೆ ಲೋಕದಲ್ಲುಂಟೆ ಎಂದು ಎಲ್ಲರೂ ಜನಕನ ಆಗಮನವನ್ನೇ ನಿರೀಕ್ಷಿಸಲು. ೧೨೧

ಗದ್ಯ|| ಎಂದು=ಎಂಬದಾಗಿ, ಸಕಳಪರಿಜನಂ=ಎಲ್ಲಾ ಸೇವಕಜನವು, ವಿಕಳವಾಗಿಯುಂ=ಬುದ್ಧಿಗೆಟ್ಟವರಾಗಿಯೂ, ನೈಮಿತ್ತಿಕದಿಂದೆ=ಕಾರಣಾಂ

ಕಂ|| ಎಡೆಯೆಡೆಯ ಬೆಟ್ಟನೆಡೆಯೆಡೆ |
ಯಡವಿಯನೆಡೆಯೆಡೆಯ ನಾಡನೆಡೆಯೆಡೆಯೂರಂ ||
ಮಿಡಿದನಿತು ಬೇಗದಿಂ ಕಳಿ |
ದೊಡರಿಸಿದುದು ನೃಪತಿಗಾ ಹಯಂ ವಿಸ್ಮಯಮಂ ||೧೨೨||

ಚ|| ತ್ವರಿತದಿನೆಯ್ದೆವಂದು ಪುರಮಂ ರಥನೂಪುರಚಕ್ರವಾಳಮಂ |
ಪುರವನ ವೀಧಿಯೊಳ್ ನಡೆಯೆ ವಾಜಿ ವಿಳಂಬಿತದಿಂ ಧರಾಧಿಪಂ ||
ಧರಣಿಗೆ ಪಾಯ್ದು ಕಯ್ಯ ಕರವಾಳಳಿಮಾಳೆ ಸರೋಜ ಕೋಶದೊಳ್ |
ಮೊರೆಯದೆ 1ನೀಳ್ದವೋಲಿರೆ ವಸಂತನನೇಳಿಸಿದಂ ವನಾಂತದೊಳ್ ||

ತರದಿಂದ, ಅರಸನ=ಜನಕರಾಜನ, ಬರವಂ=ಆಗಮನವನ್ನು, ಅರಿದು=ತಿಳಿದು, ಉಮ್ಮಳಮಂ=ದುಃಖವನ್ನು, ಉಳಿದು=ಬಿಟ್ಟು, ಇರ್ಪುದುಂ=ಇರುತ್ತಿರಲು, ಇತ್ತಲ್=ಈ ಕಡೆ.

೧೨೨. ಟೀ|| ಎಡೆಯೆಡೆಯ=ದಿಕ್ಕು ದಿಕ್ಕಿನ, ಬೆಟ್ಟಂ=ಪರ್ವತಗಳನ್ನೂ ಎಡೆಯೆಡೆಯ, ಅಡವಿಯಂ=ಅರಣ್ಯಗಳನ್ನು ಎಡೆಯೆಡೆಯ, ನಾಡಂ=ದೇಶಗಳನ್ನೂ, ಎಡೆಯೆಡೆಯ, ಊರ=ಗ್ರಾಮಗಳನ್ನು ಮಿಡಿದನಿತುಬೇಗದಿಂ=ಚುಟುಕಿ ಹಾಕಿದಷ್ಟು ಬೇಗದಿಂದ, ಕಳಿದು=ದಾಟಿ, ಆ ಹಯಂ=ಆ ಕುದುರೆಯು, ನೃಪತಿಗೆ=ಜನಕನಿಗೆ, ವಿಸ್ಮಯಮಂ=ಆಶ್ಚರ್ಯವನ್ನು, ಒಡರಿಸಿದುದು=ಉಂಟುಮಾಡಿತು.

ತಾ|| ಆ ಕುದುರೆಯು ರೆಪ್ಪೆ ಇಕ್ಕುವದರೊಳಗಾಗಿ ಬೆಟ್ಟಗಳು ಕಾಡುಗಳು ಊರುಗಳು ದೇಶ ಇವೆಲ್ಲವನ್ನೂ ದಾಟುತ್ತಾ ಜನಕನಿಗೆ ಅತ್ಯಾಶ್ಚರ್ಯವುಂಟುಮಾಡಿತು. ೧೨೨

೧೨೩. ಟೀ|| ತ್ವರಿತದಿಂ=ವೇಗದಿಂದ, ಎಯ್ದೆವಂದು=ದಾಟಿಬಂದು ರಥನೂಪುರಚಕ್ರವಾಳಮಂ, ಪುರಮಂ=ರಥನೂಪುರಚಕ್ರವಾಳವೆಂಬ ಪಟ್ಟಣವನ್ನು, (ಪುರವನವೀಧಿಯೊಳ್) ಪುರವನ=ಪಟ್ಟಣದ ತೋಟದ, ವೀಧಿ

1 ನಿಂದ.

ಕಂ|| ಇಡಿದಡರೆ ಕಾಯ್ತ ಮಾಮರ |
ದಡಿಯೊಳ್ ವಿಶ್ರಮಿಸಿ ಪಥ ಪರಿಮ್ಲಾನತೆಯಂ ||
ಕಿಡಿಸಿ ನರೇಂದ್ರಂ ತನ್ನೊಳ್ |
ನುಡಿದಂ ಸಂಸೃತಿಯ ಕರ್ಮ ವಿಷಮ ಸ್ಥಿತಿಯಂ ||೧೨೪||

ಯೊಳ್=ದಾರಿಯಲ್ಲಿ, ವಾಜಿ=ಕುದುರೆಯು, ವಿಲಂಬಿತದಿಂ=ಸಾವಕಾಶದಿಂದ, ನಡೆಯೆ=ಹೋಗುತ್ತಿರಲು, ಧರಾಧಿಪಂ=ಜನಕರಾಜನು, ಧರಣಿಗೆ=ಭೂಮಿಗೆ, ಪಾಯ್ದು=ಹಾರಿ, ಕೈಯ=ಹಸ್ತದಲ್ಲಿರುವ, ಕರವಾಳ=ಕತ್ತಿಯೆಂಬ, ಅಳಿಮಾಲೆ=ಭ್ರಮರ ಪಂಕ್ತಿಯು, ಸರೋಜಕೋಶದೊಳ್=ಕಮಲದ ಮೊಗ್ಗೆಯಲ್ಲಿ, ಮೊರೆಯದೆ=ಧ್ವನಿಮಾಡದೆ, ನೀಳ್ದವೋಲ್=ದೀರ್ಘವಾದಹಾಗೆ, ಇರೆ=ಇರಲು, ವನಾಂತದೊಳ್=ವನಪ್ರದೇಶದಲ್ಲಿ, ವಸಂತನಂ=ವಸಂತನನ್ನು, ಏಳಿಸಿದಂ=ಹೀಯಾಳಿಸಿದಂತಿದ್ದನು.

ತಾ|| ಜಾಗ್ರತೆಯಾಗಿ ಚಕ್ರವಾಳಪುರವನ್ನು ಸಮೀಪಿಸಿ ಆ ಪಟ್ಟಣದ ಉದ್ಯಾನದ ದಾರಿಯಲ್ಲಿ ನಿದಾನವಾಗಿ ಹೋಗುತ್ತಿರಲು ಕುದುರೆಯಿಂದಿಳಿದು ಕೈಯಕತ್ತಿಯು ಕಮಲದ ಮೊಗ್ಗಿನಿಂದ ಭ್ರಮರಗಳು ಶಬ್ದಮಾಡದೆ ಮೇಲಕ್ಕೆದ್ದಂತಿರಲು ವಸಂತನನ್ನು ಹೀಯಾಳಿಸಿದಂತಿದ್ದನು. ೧೨೩

೧೨೪. ಟೀ|| ಕಾಯ್ತ=ಫಲಬಿಟ್ಟ, ಮಾಮರದ=ಮಾವಿನಮರದ, ಅಡಿಯೊಳ್=ಕೆಳಗಡೆಯಲ್ಲಿ, ಪಥಪರಿಮ್ಲಾನತೆಯಂ=ಮಾರ್ಗಾಯಾಸವನ್ನು, ವಿಶ್ರಮಿಸಿ=ಪರಿಹರಿಸಿಕೊಂಡು, ನರೇಂದ್ರಂ=ಜನಕನು, ಕಿಡಿಸಿ=ಹಾಳುಮಾಡಿ, ತನ್ನೊಳ್=ತನ್ನಲ್ಲಿ, ಸಂಸೃತಿಯ=ಸಂಸಾರದ, ಕರ್ಮ=ಕೆಲಸದ, ವಿಷಮ ಸ್ಥಿತಿಯಂ=ಹೆಚ್ಚುಕಡಮೆಯಾದ ವ್ಯಾಪಾರವನ್ನು, ನುಡಿದಂ=ಅಂದುಕೊಂಡನು.

ತಾ|| ಫಲಿತವಾದ ಮಾವಿನಮರದ ನೆಳಲಲ್ಲಿ ತನ್ನ ಮಾರ್ಗಾಯಾಸವನ್ನು ಪರಿಹರಿಸಿಕೊಂಡು ಜನಕನು ತನ್ನಲ್ಲಿಯೇ ಪ್ರಾರಬ್ಧಕರ್ಮವು ವಿಷಮವಾಗಿದೆ ಎಂದುಕೊಂಡನು. ೧೨೪

ಕಂ|| ಅಮೃತಂ ವಿಷಮಕ್ಕುಂ ವ |
ಕ್ರಮಾದೊಡಾವಿಷಮುಮಮೃತಮಕ್ಕುಂ ವಿಧಿ ವ||
ಕ್ರಮನುಳಿದೊಡಂತೆ ಹಯಮೆ |
ನ್ನುಮನಿಲ್ಲಿಗೆ ತಂದುದಿನ್ನವಘಟಿತಮೊಳವೇ ||೧೨೫||

ಕಂ|| ಆನೆಲದಿಂ ಮಾಯಾ ಹಯ |
ಮೀನೆಲದತ್ತೆನ್ನನೆಳೆದು ತರ್ಪುದುಮಾಳ ||
ಟ್ಟಾನೆಯುಮಾಕುದುರೆಯುಮಾ |
ಸೇನೆಯುಮೇನೆನಗೆ ಮಾಡಲಾರ್ತುವೆ ಹಿತಮಂ ||೧೨೬||

---

೧೨೫ ಟೀ|| ಅಮೃತಂ=ಹಾಲು, ವಿಷಮಕ್ಕುಂ=ವಿಷವಾಗುವುದು, ಆವಿಷವು, ವಕ್ರಮಾದೊಡಂ=ಕುಟಿಲವಾದಾಗ್ಯೂ, ಅಮೃತಮಕ್ಕುಂ=ಅಮೃತವಾಗುವುದು, ವಿಧಿವಕ್ರಮಂ=ದೈವದ ಕುಟಿಲತೆಯನ್ನು. ಉಳಿದೊಡೆ=ಬಿಟ್ಟರೆ, ಅಂತೆ=ಹಾಗೆ, ಹಯಂ=ಕುದುರೆಯು, ಎನ್ನುಮಂ=ನನ್ನನ್ನು, ಇಲ್ಲಿಗೆ=ಈ ಸ್ಥಳಕ್ಕೆ, ತಂದುದು=ತಂದಿತು. ಇನ್ನವು=ಇಂಥವು, ಅಘಟಿತಂ=ಕಷ್ಟಗಳೂ ಒಳವೇ=ಇವೆಯೇ ?

ತಾ|| ಅದೃಷ್ಟ ಕಠಿಣವಾದರೆ ಅಮೃತವೂ ವಿಷವಾಗುವದು, ಕಠಿಣತೆಯು ಶಾಂತವಾದರೆ ವಿಷವೂ ಅಮೃತವಾಗುವುದು, ಹಾಗೆಯೇ ಕುದುರೆ ನನ್ನನ್ನು ಇಲ್ಲಿಗೆ ತಂದಿತು. ಇಂಥಾ ಕಷ್ಟವೂ ಉಂಟೇ ?

೧೨೬. ಟೀ|| ಮಾಯಾಹಯಂ=ಕೃತ್ರಿಮಾಶ್ವವು, ಎನ್ನ[illegible] ಆನೆಲದಿಂ=ಆ ದೇಶದಿಂದ, ಈ ನೆಲದತ್ತ=ಈ ಭೂಮಿಯಕಡೆಗ[illegible] ತರ್ಪುದುಂ=ಎಳೆದುಕೊಂಡುಬರಲು. ಆ ಕಟ್ಟಾನೆಯುಂ=ಆ ವಕ್ರ[illegible]ಯೂ, ಆ ಕುದುರೆಯುಂ=ಆ ಅಶ್ವವೂ, ಆ ಸೇನೆಯುಂ=ಆದಂಡೂ, ಎನಗೆ=ನನಗೆ, ಹಿತಮಂ=ಸುಖವನ್ನು, ಮಾಡಲಾರ್ತುವೇ=ಉಂಟುಮಾಡುವುದಕ್ಕೆ ಸಮರ್ಥವಾದುವೇ ?

ತಾ|| ಆ ಮಾಯಾಶ್ವವು ನನ್ನನ್ನು ಆ ಲೋಕದಿಂದ ಈ ಲೋಕಕ್ಕೆ ಬಲ

ಕಂ|| ಸಮನಿಸಿದನಿಷ್ಟ ಸಂಯೋ |
ಗಮನಿಷ್ಟವಿಯೋಗಮಂ ಚತುರ್ಗತಿಗಳೊಳಂ ||
ಭ್ರಮಿಯಿಸಿ ಕೈಕೊಳ್ಗುಂ ತಾ |
ನೆ ಮಿಕ್ಕವರ್ ನೆರೆದು ತನಗೆ ನೆರವಾದಪರೇ ||೧೨೭||

ಕಂ|| ಉದಯಿಸಿದ ಶುಭಾಶುಭ ಕ |
ರ್ಮದ ಫಲಮಂ ಸದೃಶಮಾಗೆ ಕಾಣ್ಬುದು ಸಮಚಿ ||
ತ್ತದೊಳಿರ್ಪುದು ತಕ್ಕುದು ತ |
ಕ್ಕ1ದಲ್ತು ತಕ್ಕಂಗೆ ತಗದ ಹರ್ಷ ವಿಷಾದಂ ||೧೨೮||

ತ್ಕಾರವಾಗಿ ತೆರುತ್ತಿದ್ದರೂ ಆ ಆನೆ ಆ ಕುದುರೆ ಆ ಸೇನೆ ಇವು ನನಗೆ ಏನು ಸಹಾಯವನ್ನು ತಾನೆ ಮಾಡುವುದಕ್ಕಾಯಿತೆ. ೧೨೬

೧೨೭. ಟೀ|| ಸಮನಿಸಿದ=ಉಂಟಾದ, ಅನಿಷ್ಟಸಂಯೋಗಮಂ=ಅನಿಷ್ಟಪ್ರಾಪ್ತಿಯನ್ನು, ಇಷ್ಟವಿಯೋಗಮಂ=ಬೇಕಾದುದರ ಅಗಲಿಕೆಯನ್ನು, ಚತುರ್ಗತಿಗಳೊಳಂ=ದೇವ ಮಾನುಷ ತಿರ್ಯಗ್ಜನ್ನಾರಕವೆಂಬ ನಾಲ್ಕು ಗತಿಗಳಲ್ಲಿಯೂ, ಭ್ರಮಿಯಿಸಿ=ಭ್ರಾಂತಿಯನ್ನು ಉಂಟುಮಾಡಿ, ಕೈಕೊಳ್ಗುಂ=ಅಂಗೀಕರಿಸುವುದು, ತಾನೆ=ಜೀವನೊಬ್ಬನೆ, ಮಿಕ್ಕವರ್=ಉಳಿದವರು, ತನಗೆ, ನೆರೆದು=ಕೂಡಿ, ನೆರವಾದಪರೇ=ಸಹಾಯಕರಾಗುವರೇ ?

ಡಿ: ತಾ|| ಇಷ್ಟಜನರನ್ನು ಅಗಲಿದುದನ್ನು ಅನಿಷ್ಟವಾದ್ದು ಪ್ರಾಪ್ತಿಯಾ ವಿಶ್ಶುದನ್ನು ಚತುರ್ಗತಿಗಳ ಭ್ರಾಂತಿಯುಂಟಾದುದನ್ನು ಜೀವನೊಬ್ಬನೇ ಅನುಡಿ,ಏಸಬೇಕು ಇನ್ನಾರುತಾನೆ ಸಹಾಯವಾಗುವರು ೧೨೭

ಮ ೧೨೮. ಟೀ|| ಉದಯಿಸಿದ=ಹುಟ್ಟಿದ, ಶುಭಾಶುಭಕರ್ಮದ=ಪುಣ್ಯಕರ್ಮ ಪಾಪಕರ್ಮದ, ಫಲಮಂ=ಪ್ರಯೋಜನವನ್ನು, ಸದೃಶಮಾಗೆ=ಸಮಾನವಾಗಿಯೇ, ಕಾಣ್ಬುದು=ಕಾಣಬೇಕು, ಸಮಚಿತ್ತದೊಳ್=ಸ್ಥಿರಚಿತ್ತದಿಂದ, ಇರ್ಪುದು=ಇರಬೇಕು, ತಕ್ಕಂಗೆ=ಯೋಗ್ಯವಾದವನಿಗೆ, ತಕ್ಕು

---

1. ದಲ್ತಿ. ಕ, ಖ. ಚ.

ಎಂದು ಉದಾತ್ತಚಿತ್ತನಲ್ಲಿಂ ತಳರ್ದು ವನವಿಳಾಸಮಂ ನೋಡಿ ಮೆಚ್ಚುತ್ತುಂ ನಡೆಯೆ ಮುಂದೆ ಮಾಕಂದ ನಂದನದ ಬಳಸಿನೊಳ ಮಶೋಕ ವನದ ಪುದುವಿನೊಳಂ ನಾಗಚಂಪಕವನದ ಸುತ್ತಿನೊಳ ಮತಿರಮಣೀಯ ಮಾಗಿ—

ಮ|| ಪದೆಪಂ ಕಣ್ಗೆ ಮನಕ್ಕೆ ಸಂತಸಮನಿತ್ತೇಂ ಪೊಣ್ದುದೇ ಮಾಣ್ದುದಿ |
ಲ್ಲದು ಬೇಱೊಂದಮರಾಚಲೇಂದ್ರಮೆನೆ ನಾನಾರತ್ನಕೂಟಾಂಶು ಜಾ||
ಲದಿನಾಶಾವಧುಗಿತ್ತು ಚಿತ್ರಪಟಮಂ ಚೈತ್ಯಾಲಯಂ ಮತ್ತಮಿ |
ತ್ತುದು ಸಪ್ತಾಶ್ವನ ಸಪ್ತಸಪ್ತಿಗೆ ಸಮಗ್ರ ಪ್ರಗ್ರಹಾಶಂಕೆಯಂ ||೧೨೯||

ದು=ಯೋಗ್ಯವಾದದ್ದು, ತೆಗದ=ಯೋಗ್ಯವಲ್ಲದ, ಹರ್ಷವಿಷಾದಂ=ಸಂತೋಷದುಃಖಗಳು, ತಕ್ಕುದಲ್ತು=ಯೋಗ್ಯವಲ್ಲ.

ತಾ|| ಪಾಪದಫಲ-ಪುಣ್ಯದಫಲ-ಇವೆರಡನ್ನು ಸಮನಾಗಿಯೇ ಕಾಣಬೇಕು. ಶಾಂತಚಿತ್ತನಾಗಿರಬೇಕು. ಹರ್ಷಪಡುವದು ದುಃಖಿಸುವದು ಎರಡೂ ಯೋಗ್ಯವಲ್ಲ-ಎಂದು ದೃಢಮನಸ್ಸಿನಿಂದ ಅಲ್ಲಿಂದ ಹೊರಟು ವನದ ಸೊಬಗನ್ನು ನೋಡುತ್ತಾ ಹೋದನು ೧೨೮

ಗದ್ಯ|| ಎಂದು=ಎಂಬದಾಗಿ, ಉದಾತ್ತಚಿತ್ತಂ=ಧೀರವಾದ ಮನಸ್ಸುಳ್ಳ ಜನಕರಾಜನು, ಅಲ್ಲಿಂತಳರ್ದು=ಅಲ್ಲಿಂದ ಹೊರಟು, ವನವಿಳಾಸಮಂ=ತೋಟದ ಸೊಗಸನ್ನು, ನೋಡಿ, ಮೆಚ್ಚುತ್ತುಂ=ಶ್ಲಾಘಿಸುತ್ತ, ನಡೆಯೆ=ಹೋಗಲಾಗಿ, ಮುಂದೆ, ಮಾಕಂದನಂದನದ=ಮಾವಿನತೋಟದ, ಬಳಸಿನೊಳಂ=ಸುತ್ತಿನಲ್ಲಿಯೂ, ಅಶೋಕವನದ=ಅಸುಗೆಯ ತೋಟದ, ಪುದುವಿನೊಳಂ=ಬಳಗಡೆಯಲ್ಲಿಯೂ, ನಾಗಚಂಪಕವನದ=ನಾಗಸಂಪಿಗೆತೋಟದ, ಸುತ್ತಿನೊಳಂ=ಸುತ್ತಿನಲ್ಲಿಯೂ, ಅತಿ ರಮಣೀಯಮಾಗಿ=ಅತ್ಯಂತ ಮನೋಹರವಾಗಿ.

೧೨೯. ಟೀ|| ಕಣ್ಗೆ=ಕಣ್ಣುಗಳಿಗೂ, ಮನಕ್ಕೆ=ಮನಸ್ಸಿಗೂ, ಪದೆಪಂ=ಇಚ್ಛೆಯನ್ನೂ, ಸಂತಸಮಂ=ಸಂತೋಷವನ್ನೂ, ಇತ್ತು=ಕೊಟ್ಟು,

ಪೃಥ್ವಿ|| ಇರುಳ್ ಕುಮುದನೇತ್ರದಿಂ ಕಮಳನೇತ್ರದಿಂದಂ ಪಗಲ್ |
ನಿರೀಕ್ಷಿಸುವಪೇಕ್ಷೆಯಿಂ ವಸುಧೆ ತಜ್ಜಿನಾವಾಸಮಂ ||
ದರಸ್ಮಿತ ಮುಖಂಗಳಂ ಪಲವನಪ್ಪುಕೆಯ್ದಿರ್ಪವೋಲ್ |
ಸರಸ್ಸಮಿತಿ ಸುತ್ತಿ ಪೊನ್ಮುಗಿಲ ಸುತ್ತಲುಂ ರಂಜಿಕುಂ ||೧೩೦||

ಮಾಣ್ದುದೆ ಏಂ?=ಬಿಟ್ಟಿತೇ ಏನು? ಅದು, ಮಾಣ್ದುದಿಲ್ಲ=ಬಿಡಲಿಲ್ಲ, ಬೇರೊಂದಮರಾಚಲೇಂದ್ರಮೆನೆ=ಮತ್ತೊಂದು ಮೇರುಪರ್ವತವೋ ಎಂಬ ಹಾಗೆ, [ನಾನಾರತ್ನಕೂಟಾಂಶುಜಾಲದಿಂ] ನಾನಾ=ಅನೇಕವಿಧವಾದ, ರತ್ನಕೂಟ=ರತ್ನಶಿಖರಗಳ, ಅಂಶು=ಕಾಂತಿಗಳ, ಜಾಲದಿಂ=ಸಮೂಹದಿಂದ, ಆಶಾವಧುಗೆ=ದಿಕ್ಕೆಂಬ ಸ್ತ್ರೀಗೆ, ಚಿತ್ರಪಟಮಂ=ನಾನಾಬಣ್ಣದ ವಸ್ತ್ರವನ್ನು, ಇತ್ತು=ಕೊಟ್ಟು, ಚೈತ್ಯಾಲಯಂ=ಜಿನಾಲಯವು, ಮತ್ತಂ=ಮತ್ತು, ಸಪ್ತಾಶ್ವನ=ಸೂರ್ಯನ, ಸಪ್ತಸಪ್ತಿಗೆ=ಏಳು ಕುದುರೆಗೆ, ಸಮಗ್ರ=ಪೂರ್ಣವಾದ, ಪ್ರಗ್ರಹಾ=ಲಗಾಮೆಂಬ, ಆ ಶಂಕೆಯಂ=ಊಹೆಯನ್ನು, ಇತ್ತುದು=ಕೊಟ್ಟಿತು.

ತಾ|| ಕಣ್ಣಿನ ತೃಪ್ತಿಗೂ ಮನಸ್ಸಿನ ಸಂತೋಷಕ್ಕೂ ಏನುಪೂರ್ಣತೆಯುಂಟೇ ಅಲ್ಲೊಂದು ಚೈತ್ಯಾಲಯವು ಶಿಖರದ ಅನೇಕರತ್ನಗಳ ಕಾಂತಿಯು ಪಸರಿಸಿರಲು ದಿಗ್ದೇವತೆಯರಿಗೆ ಬಣ್ಣಬಣ್ಣದ ವಸ್ತ್ರಗಳನ್ನುಡಿಸಿದಂತೆಯೂ ಸೂರ್ಯನ ಕುದುರೆಗಳಿಗೆ ಇದು ಬೇರೆ ಕಡಿವಾಣಗಳೆಂಬ ಸಂದೇಹ ಹುಟ್ಟಿಸುವಂತೆ ಇತ್ತು. ೧೨೯.

೧೩೦. ಟೀ|| ಇರುಳ್=ರಾತ್ರಿಯಲ್ಲಿ, ಕುಮುದನೇತ್ರದಿಂ=ಬಿಳೀನೈದಿಲೆ ಎಂಬ ಕಣ್ಣಿನಿಂದ, ಪಗಲ್=ಹಗಲಿನಲ್ಲಿ, ಕಮಲನೇತ್ರದಿಂದ=ತಾವರೆ ಎಂಬ ಕಣ್ಣಿನಿಂದ, ನಿರೀಕ್ಷಿಸುವ=ನೋಡುವ, ಅಪೇಕ್ಷೆಯಿಂ=ಆಶೆಯಿಂದ, ವಸುಧೆ=ಭೂಮಿಯು, ತಜ್ಜಿನಾವಾಸಮಂ=ಆ ಜಿನಾಲಯವನ್ನು, ಪಲವಂ ದರಸ್ಮಿತಮುಖಗಳಂ=ಅನೇಕ ಮಂದಹಾಸದಿಂದ ಕೂಡಿದ ಮುಖಗಳನ್ನು, ಅಪ್ಪುಕೆಯ್ದಿರ್ಪವೋಲ್=ಅಂಗೀಕರಿಸಿರುವಹಾಗೆ, ಸರಸ್ಸಮಿತಿ ಸುತ್ತಿ=ಸರೋ

ಅಂತತಿಶಯಮಪ್ಪ ಜಿನಭವನಮುಂ ಕಂಡು ಬಲಗೊಂಡು—

ಮ|| ಅಳಿ ಮಾಳಾ ಮಿಳಿತ ಪ್ರಸೂನ ಸುರಭಿ ದ್ರವ್ಯಂಗಳಿಂದರ್ಚನಾ |
ಫಳ ಶಾಲ್ಯಕ್ಷತ ಧೂಪ ದೀಪ ಚರು ಸಂದೋಹಂಗಳಿಂ ಸರ್ವಮಂ ||
ಗಳ ಸಂಪೂರ್ಣಮೆನಿಪ್ಪ ಜೈನಗೃಹಮಂ ಪೊಕ್ಕಂ ಜಿನಸ್ತೋತ್ರ ಚಾ |
ಪಳ ಜಿಹ್ವಾಗ್ರ ಸಮಗ್ರ ನಾಟಕ ನಟಂ ಸಾಹಿತ್ಯವಿದ್ಯಾಧರಂ ||೧೩೧||

ವರ ಸಮೂಹವನ್ನು ಬಳಸಿಕೊಂಡು, ಪೊಂಮುಗಿಲ=ಕೆಂಪುಬಣ್ಣದ ಮೋಡ ದ, ಸುತ್ತಲುಂ=ಎಲ್ಲಾ ಕಡೆಯಲ್ಲಿಯೂ, ರಂಜಿಕುಂ=ಪ್ರಕಾಶಿಸುತ್ತದೆ.

ತಾ|| ಚೈತ್ಯಾಲಯದ ಸುತ್ತಲೂ ಕಮಲ ಕುಮುದ ಯುಕ್ತವಾದ ಸರೋವರಗಳಿದ್ದುದನ್ನು ನೋಡಿದರೆ. ರಾತ್ರಿಕಾಲದಲ್ಲಿ ನೈದಿಲೆಂಬ ಕಣ್ಣಿನಿಂದ ಲೂ ಹಗಲು ಕಮಲವೆಂಬಕಣ್ಣಿನಿಂದಲೂ ಭೂಮಿದೇವಿಯು ಹಗಲೂರಾತ್ರಿ ಯೂ ಅನೇಕಮುಖದಿಂದ ನೋಡಬೇಕೆಂಬ ಕಾತರದಿಂದ ಇದ್ದಳೋ ಎಂ ಬಂತೆ ಇದ್ದಿತು. ೧೩೦

ಗದ್ಯ|| ಅಂತು=ಹಾಗೆ, ಅತಿಶಯಮಪ್ಪ=ಅಧಿಕವಾದ, ಜಿನಭವನ ಮಂ=ಜಿನಾಲಯವನ್ನು, ಕಂಡು=ನೋಡಿ, ಬಲಗೊಂಡು=ಪ್ರದಕ್ಷಿಣೆಮಾಡಿ

೧೩೧. ಟೀ|| [ಅಳಿಮಾಲಾ ಮಿಳಿತಪ್ರಸೂನ ಸುರಭಿದ್ರವ್ಯಂಗಳಿಂದೆ] ಅಳಿ=ಭ್ರಮರಗಳ, ಮಾಲಾ=ಪಙ್ತಿಯಿಂದ, ಮಿಳಿತ=ಕೂಡಿದ, ಪ್ರಸೂನ= ಪುಷ್ಪಗಳೆಂಬ, ಸುರಭಿದ್ರವ್ಯಗಳಿಂದೆ=ಸುವಾಸನಾ ಪದಾರ್ಥಗಳಿಂದ, (ಅರ್ಚ ನಾಫಳಶಾಲ್ಯಕ್ಷತಧೂಪದೀಪಚರು ಸಂದೋಹಂಗಳಿಂ) ಅರ್ಚನಾ=ಪೂಜೆ ಗೆ ಯೋಗ್ಯವಾದ, ಫಲ=ಹಣ್ಣುಗಳೇನು, ಶಾಲ್ಯಕ್ಷತ=ಅಕ್ಕಿಯ ಅಕ್ಷತೆಗ ಳೇನು, ಧೂಪ=ಧೂಪವೇನು, ದೀಪ=ದೀಪವೇನು, ಚರು=ನೈವೇದ್ಯವೇನು ಇವುಗಳ, ಸಂದೋಹಗಳಿಂ=ಸಮೂಹಗಳಿಂದ, ಸರ್ವ=ಸಮಸ್ತವಾದ, ಮಂ ಗಳ=ಶುಭಗಳಿಂದ, ಸಂಪೂರ್ಣಮೆನಿಪ್ಪ=ತುಂಬಲ್ಪಟ್ಟಿದ್ದು ಎನಿಸಿಕೊಂಡಿರುವ (ಜಿನಸ್ತೋತ್ರ ಚಾಪಳಜಿಹ್ವಾಗ್ರನಾಟಕನಟಂ) ಜಿನಸ್ತೋತ್ರ=ಜಿನಸ್ತೋತ್ರ

ಇದು ಪರಮಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ
ಮುನೀಂದ್ರ ಚರಣನಖಕಿರಣ ಚಂದ್ರಿಕಾಚಕೋರ ಭಾರತೀ
ಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರ ಚರಿತಪುರಾಣದೊಳ್
ಜನಕ ಜಿನಭವನದರ್ಶನ ವರ್ಣನಂ
ಚತುರ್ಥಾಶ್ವಾಸಂ

ದಲ್ಲಿ, ಚಾಪಳ=ಆಸೆಯುಳ್ಳ, ಜಿಹ್ವಾಗ್ರ=ನಾಲಗೆಯತುದಿ ಎಂಬ, ಸಮಗ್ರ=ಸಂಪೂರ್ಣವಾದ, ನಾಟಕ=ನಾಟಕಕ್ಕೆ, ನಟಂ=ಅಭಿನಯಿಸುವನಾದ, (ಸಾಹಿತ್ಯ ವಿದ್ಯಾಧರಂ) ಸಾಹಿತ್ಯವಿದ್ಯಾ=ಕಾವ್ಯಚಂಪೂನಾಟಕಾದಿ ವಿದ್ಯೆಗಳನ್ನು, ಧರಂ=ಧರಿಸಿರುವಂಥಾ ಜನಕರಾಜನು, ಜೈನಗೃಹಮಂ=ಜಿನಾಲಯವನ್ನು, ಪೊಕ್ಕಂ=ಪ್ರವೇಶಿಸಿದನು.

ತಾ|| ಭ್ರಮರಗಳು ಮುತ್ತಿಕೊಂಡಿರುವ ಸುವಾಸನಾಪುಷ್ಪಗಳಿಂದಲೂ ಪೂಜೆಗಾಗಿಟ್ಟಿರುವ ಫಲ, ಅಕ್ಷತೆ, ಧೂಪ, ದೀಪ, ನೈವೇದ್ಯಗಳ ಸಮೂಹದಿಂದಲೂ ಮಂಗಳಕರವಾಗಿರುವ ಚೈತ್ಯಾಲಯವನ್ನು ಜನಕನು ಜಿನಸ್ತೋತ್ರಾಸಕ್ತನಾಗಿ ಪ್ರವೇಶಿಸಿದನು. ೧೩೧

ಪಂಪರಾಮಾಯಣದಲ್ಲಿ ನಾಲ್ಕನೆಯ ಆಶ್ವಾಸದ ಟೀಕಾ
ಸಂಪೂರ್ಣವಾದುದು.